ಏಪ್ರಿಲ್ 2016

ಸಂಚಿಕೆ – 9 ಸಂಪುಟ – 31

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................................................................. 2
ಸಮಗ್ರ ಅಭಿವೃದ್ಧಿ ಮತ್ತು ಶಾಂತಿ: ಪ್ರಾದೇಶಿಕ ಆರ್ಥಿಕತೆಯ ಆಧಾರ 3
* **ಸಂಜೊಯ್ ಹಜಾರಿಕಾ**
ಈಶಾನ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ ............................... 7
* **ನತಲೈ ವೆಸ್ಟ್ ಖಾರ್‌ಕೊಂಗೊರ್**
ಈಶಾನ್ಯ : ಆರೋಗ್ಯ ಮತ್ತು ಲಿಂಗ ದೃಷ್ಟಿಕೋನ .................. 10
* **ಡಾ. ಅರುಣಾ ಭಟ್ಟಾಚಾರ್ಯ ಚಕ್ರವರ್ತಿ**
ಈಶಾನ್ಯದಲ್ಲಿ ಪರಿಸರಸ್ನೇಹಿ ಕೃಷಿ ....................................... 13
* **ನೀರೇಂದ್ರ ದೇವ್**
ಈಶಾನ್ಯ ಭಾರತದಲ್ಲಿ ಬುಡಕಟ್ಟು ಅಭಿವೃದ್ಧಿ ........................ 16
* **ಎನ್‌ಸಿ ಸಕ್ಸೇನಾ**
ಮೇಘಾಲಯದಲ್ಲಿ ಸ್ವಾಯತ್ತ ಮಂಡಳಿಗಳ ಪಾತ್ರ ....................... 19
* **ಡಾ. ಚಿಂತಾಮಣಿ ರಾವತ್**
ಈಶಾನ್ಯ ವಲಯದಲ್ಲಿ ಮೂಲಸೌಲಭ್ಯ ............................... 21
* **ಕೃಷ್ಣ ದೇವ್**
ಈಶಾನ್ಯ ಭಾರತದ ವಿದ್ಯುದೀಕರಣ ...................................... 25
* **ಕೆ. ರಾಮನಾಥನ್**
ವಿಶ್ವ ಪ್ರವಾಸೋದ್ಯಮದ ಅಜ್ಞಾತ ಸ್ವರ್ಗ ............................... 28
* **ಸೌರಭ್ ಕುಮಾರ್ ದೀಕ್ಷಿತ್**
ಈಶಾನ್ಯ; ಜೀವ ವೈವಿಧ್ಯ ಸಂಪನ್ನ ........................................ 31
* **ಡಾ. ಅರೂಪ್ ಕುಮಾರ್ ಮಿಶ್ರಾ**
ಬುಡಕಟ್ಟು ಜನರ ಬವಣೆಗೆ ಸ್ಪಂದನೆ .................................... 34
* **ಡಾ. ಎಂ.ಎ. ಬಾಲಸುಬ್ರಹ್ಮಣ್ಯ**
ಹಿಂದುಳಿಯುವಿಕೆ ಎಂಬ ಶಾಪ .............................................. 37
* **ಮತ್ತೀಹಳ್ಳಿ ಮದನ ಮೋಹನ**
ಕರ್ನಾಟಕದಲ್ಲಿ ಸಂವಿಧಾನದ ಅನುಚ್ಛೇದ 371(ಜೆ) ............... 40
* **ಡಾ. ಟಿ.ಆರ್. ಚಂದ್ರಶೇಖರ**
ಹಿಂದುಳಿದ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಣದ ಸಮಸ್ಯೆ ........... 44
* **ಪ್ರೊ. ಓಂಕಾರ ಕಾಕಡೆ**
ಉತ್ತರ ಕರ್ನಾಟಕದ ವಿಶೇಷತೆಗಳು ...................................... 47
* **ಪ್ರೊ. ಛಾಯಾ ದೇಗಾಂವಕರ**
ನಿಮಗಿದು ತಿಳಿದಿದೆಯೇ? ................................................... 51
ವಾರ್ತಾ ವಿಶೇಷ ............................................................. 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಪ್ರಗತಿಪಥದತ್ತ ಈಶಾನ್ಯ ವಲಯ




ದೇಶದ, ಈಶಾನ್ಯ ವಲಯವನ್ನು ಸಪ್ತ ಸೋದರಿಯರ ನಾಡೆಂದು ಬಣ್ಣಿಸಲಾಗಿದೆ. ಇದು ಇವುಗಳ ನಡುವಿರುವ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಸಾಮ್ಯತೆಯ ದ್ಯೋತಕವಾಗಿದೆ. ಐತಿಹಾಸಿಕವಾಗಿ ಈಶಾನ್ಯದ ಏಳು ರಾಜ್ಯಗಳೆಂದರೆ ಅಸ್ಸಾಂ, ತ್ರಿಪುರಾ, ಮೇಘಾಲಯ, ಮಿಜೊರಾಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಮತ್ತು ಮಣಿಪುರ. ಸಿಕ್ಕಿಂ ಇತ್ತೀಚೆಗಷ್ಟೇ ಸೇರ್ಪಡೆಯಾದ ರಾಜ್ಯವಾಗಿದೆ. ಈ ರಾಜ್ಯಗಳು ಭೌಗೋಳಿಕ ಮತ್ತು ನೈಸರ್ಗಿಕ ಸೌಂದರ್ಯಗಳೆರಡರಲ್ಲೂ ಮುಂಚೂಣಿಯಲ್ಲಿವೆ. ರಾಜಕೀಯ ಹಾಗೂ ರಕ್ಷಣೆ ವಿಷಯದಲ್ಲೂ ಪ್ರಾಮುಖ್ಯತೆ ಪಡೆದಿವೆ. ಈ ಪ್ರದೇಶಗಳು ಮೂರು ಬಹುಮುಖ್ಯ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿವೆ. ಮ್ಯಾನ್ಮಾರ್, ಬಾಂಗ್ಲಾದೇಶ ಹಾಗೂ ಸೂಪರ್ ಪವರ್ ಆಗಿ ಹೊರಹೊಮ್ಮುತ್ತಿರುವ ಚೀನಾ ನೆರೆಯ ರಾಷ್ಟ್ರಗಳಾಗಿವೆ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಈ ಪ್ರದೇಶದ ಅಭಿವೃದ್ಧಿ ಬಹುಮುಖ್ಯ ಸಂಗತಿಯಾಗಿದೆ.

ಸರಣಿ ಪಂಕ್ತಿಯಲ್ಲೇ ಗೋಚರಿಸಿದರೂ ಈ ಸಪ್ತ ಸೋದರಿಯರ ನಾಡು, ಜನಾಂಗೀಯವಾಗಿ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾಷಾ ದೃಷ್ಟಿಯಿಂದ ಬಹು ವಿಭಿನ್ನ. ಅಸ್ಸಾಮಿ ವ್ಯಕ್ತಿ ನಾಗಾಕ್ಕಿಂತ ವಿಭಿನ್ನ. ಪಂಜಾಬಿಗಿಂತ ಬಿಹಾರಿ ಬೇರೆ. ಬೋಡೊ, ಗ್ಯಾರೊ ಎಂದು ಅನುಮಾನಿಸುವಂತೆಯೇ ಇಲ್ಲ. ಈ ಭಾಗದ ಬಹುತೇಕ ಜನಸಂಖ್ಯೆ ಬುಡಕಟ್ಟು ಜನಾಂಗಕ್ಕೆ ಸೇರಿದ್ದು. ಇಲ್ಲಿ ಅನಾದಿ ಕಾಲದಿಂದಲೂ ಬುಡಕಟ್ಟು ಸಂಸ್ಕೃತಿ ಬಲವಾಗಿ ನೆಲೆಯೂರಿದೆ.

ಅತ್ಯಂತ ಸುಂದರ ಭೂಪ್ರದೇಶ, ಜೀವವೈವಿಧ್ಯ ಹೊಂದಿರುವ ಈಶಾನ್ಯ ವಲಯ, ನಿಜವಾಗಿಯೂ ಪ್ರವಾಸಿಗರ ಸ್ವರ್ಗ ಎನಿಸಿದೆ. ಅಸ್ಸಾಂನ ರಾಷ್ಟ್ರೀಯ ಉದ್ಯಾನ, ಮೇಘಾಲಯದ (ಮೇಘಗಳ ಮನೆ) ಧುಮ್ಮಿಕ್ಕುವ ಜಲಪಾತ ರಮಣೀಯ ಸರೋವರಗಳು, ಕಾಂಚನಜುಂಗಾದ ಹಿಮಾಚ್ಛಾದಿತ ಗಿರಿ ಪರ್ವಗಳು, ಸಿಕ್ಕಿಂನ ಬೌದ್ಧ ವಿಹಾರ – ಹೀಗೆ ಈಶಾನ್ಯ ಪ್ರದೇಶ ಪ್ರಾಕೃತಿಕ ಸೌಂದರ್ಯ ಮತ್ತು ವೈವಿಧ್ಯ ಸಾಂಸ್ಕೃತಿಕ ಕಂಪನ್ನು ಹೊರಸೂಸುತ್ತಿದೆ. ಈ ಭಾಗದ ನೃತ್ಯ ರೋಚಕ, ಕೈಕುಸುರಿನ, ಕರಕುಶಲ ಬಟ್ಟೆ ಜಗತ್ಪ್ರಸಿದ್ಧ.

ಹೀಗಿದ್ದರೂ ಈ ಸುಂದರ ಉದ್ಯಾನದಲ್ಲಿ 'ಬಂಡುಕೋರ' ಸರ್ಪಗಳಿರುವುದು, ಅಭಿವೃದ್ಧಿಗೆ ಅಡಚಣೆಯಾಗಿದೆ. ಶೈಕ್ಷಣಿಕ ಸೌಲಭ್ಯ, ಉದ್ಯೋಗಾವಕಾಶ ಕೊರತೆ ಪ್ರಮಾಣ ಎಷ್ಟಿದೆಯೆಂದರೆ, ಯುವ ಜನತೆ ಶಿಕ್ಷಣ, ಉದ್ಯೋಗ ಅರಸಿ, ಬೇರೆಡೆ ಹೋಗುತ್ತಿದ್ದು ಪ್ರತಿಭಾ ಪಲಾಯನ ಉಂಟಾಗಿದೆ.

ಈಶಾನ್ಯ ಭಾಗದ ಸಮಾಜ ಎದುರಿಸುತ್ತಿರುವ ಮತ್ತೊಂದು ಪಿಡುಗೆಂದರೆ, ಯುವ ಜನತೆ ಹಾಗೂ ವಯಸ್ಕರು ಬೇಧವಿಲ್ಲದಂತೆ ಮಾದಕದ್ರವ್ಯ ಸೇವನೆಯಲ್ಲಿ ತೊಡಗಿರುವುದು.

ಕೃಷಿ ಈ ಭಾಗದ ಮುಖ್ಯ ಜೀವನ ನಿರ್ವಹಣೆ ಮಾರ್ಗವಾಗಿದೆ. ಟೀ, ಶುಂಠಿ, ಹಣ್ಣು ತರಕಾರಿ ಮುಖ್ಯ ಬೆಳೆಗಳಾಗಿವೆ. ತೋಟಗಾರಿಕೆ ಕೂಡಾ ವ್ಯಾಪಕವಾಗಿದೆ. ಈ ಭಾಗದ ಆರ್ಕಿಡ್‌ಗಳು ಅಪೂರ್ವ ಸೌಂದರ್ಯಕ್ಕೆ ಹೆಸರಾಗಿವೆ. ಕೃಷಿಯಲ್ಲಿ ಆಧುನಿಕ ಪದ್ಧತಿ ಅಳವಡಿಕೆ ಇಲ್ಲದ ಕಾರಣ ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತಿಲ್ಲ. ಈ ಭಾಗದಲ್ಲಿ ಹರಿಯುವ ಬ್ರಹ್ಮಪುತ್ರಾ ನದಿಯಿಂದಾಗುವ ಪ್ರವಾಹ, ಮತ್ತೊಂದು ಸಮಸ್ಯೆಯಾಗಿದೆ.

ಈಶಾನ್ಯ ವಲಯದಲ್ಲಿ ವ್ಯಾಪಕವಾಗಿ ಮೂಲಸೌಕರ್ಯ ಕಲ್ಪಿಸಬೇಕಾಗಿದೆ. ಮುಖ್ಯ ನಾಡಿಗೆ ಸಂಪರ್ಕ ಕಲ್ಪಿಸುವ ಸಿಲಿಗುರಿ ಕಾರಿಡಾರ್ ಪ್ರಮುಖ ಮಾರ್ಗವಾಗಿದೆ.

ಈಶಾನ್ಯ ವಲಯದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಆದ್ಯತೆ ಮೇಲೆ ಪರಿಹರಿಸಬೇಕಾಗಿದೆ. ಆ ಮೂಲಕ ಈಶಾನ್ಯ ಭಾಗದ ಜನರು ಸುಖಸಮೃದ್ಧಿ ಹೊಂದಿ, ದೇಶದ ಮುಖ್ಯವಾಹಿನಿಗೆ ಕೊಡುಗೆ ನೀಡುವಂತೆ ಅವರನ್ನು ಸಶಕ್ತಗೊಳಿಸಬೇಕಿದೆ. ❑

# ಸಮಗ್ರ ಅಭಿವೃದ್ಧಿ ಮತ್ತು ಶಾಂತಿ: ಪ್ರಾದೇಶಿಕ ಆರ್ಥಿಕತೆಯ ಆಧಾರ



**ಈಶಾನ್ಯ ಭಾಗದ ರಾಜ್ಯಗಳಲ್ಲಿ ಅಂತಾರಾಷ್ಟ್ರೀಯ ಕಂಪನಿಗಳಿಂದ ಹೂಡಿಕೆ ಸವಾಲಾಗಿಯೇ ಉಳಿದಿದೆ. ಈಶಾನ್ಯ ರಾಜ್ಯಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಕೆಲವು ಕಾಯ್ದೆಗಳು ಹಾಗೂ ಈ ರಾಜ್ಯಗಳಿಗೆ ಸಂಪರ್ಕ ಕಲ್ಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳ ಕೊರತೆ ಇದಕ್ಕೆ ಕಾರಣ. ಈ ರಾಜ್ಯಗಳಲ್ಲಿ ಹೂಡಿಕೆಗೆ ಎದುರಾಗುವ ಸಮಸ್ಯೆಗಳಿಗೆ ನಿಖರವಾದ ಹಾಗೂ ವಾಸ್ತವ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕೇ ಹೊರತು ತೋರಿಕೆಯ ಕ್ರಮಗಳಿಂದ ಯಾವುದೇ ಪ್ರಯೋಜನ ಇಲ್ಲ.**

* **ಸಂಜೊಯ್ ಹಜಾರಿಕಾ**

ಏಶಿಯಾ ಖಂಡಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆರ್ಥಿಕ ಸ್ಥಿತಿಗತಿ ಸುಧಾರಿಸಬೇಕೆಂದರೆ ನೆರೆಯ ರಾಷ್ಟ್ರಗಳೊಂದಿಗಿನ ರಾಜಕೀಯ ಹಾಗೂ ವ್ಯಾಪಾರ ಸಂಬಂಧಗಳು ಸುಧಾರಿಸಬೇಕು. ಈ ಮಾತು ನೆರೆಯ ಬಾಂಗ್ಲಾದೇಶದೊಂದಿಗಿನ ಸಂಬಂಧಕ್ಕೆ ಹೆಚ್ಚು ಅನ್ವಯಿಸುತ್ತದೆ.

ಏಶಿಯಾ ಖಂಡದಲ್ಲಿನ ಈಶಾನ್ಯ ರಾಷ್ಟ್ರಗಳು ಆಗ್ನೇಯ ರಾಷ್ಟ್ರಗಳೊಂದಿಗೆ 1990ರ ದಶಕದಲ್ಲಿಯೇ ಮಾತುಕತೆಯಲ್ಲಿ ತೊಡಗಿದ್ದವು. ದ್ವಿಪಕ್ಷೀಯ ಸಂಬಂಧ ಸುಧಾರಣೆ ಹಾಗೂ ಹಲವಾರು ಸಮಾವೇಶಗಳನ್ನು ಸಂಘಟಿಸಿದ್ದರೂ ನಿರೀಕ್ಷಿತ ಮಟ್ಟದ ಸುಧಾರಣೆ ಕಂಡು ಬಂದಿರಲಿಲ್ಲ ಎಂಬುದು ಇತಿಹಾಸ.

ದಕ್ಷಿಣ ಮತ್ತು ಆಗ್ನೇಯ ಏಶಿಯಾದೊಂದಿಗಿನ ಸಂಬಂಧ ಸುಧಾರಣೆಯಲ್ಲಿ ಈಶಾನ್ಯ ವಲಯ – ಎನ್ ಇ ಆರ್ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಢಾಕಾ ಮತ್ತು ಗುವಾಹತಿಯಲ್ಲಿ ಮಾಡಿದ ಘೋಷಣೆ ಅಕ್ಷರಶಃ ನಿಜ. ಇದೇ ಪ್ರತಿಪಾದನೆಯನ್ನು ಇದಕ್ಕೂ ಮುಂಚೆ ಹಲವಾರು ಮುಖಂಡರು ಸಹ ಮಾಡಿದ್ದಾರೆ.

ಇದೇ ನೆಲೆಗಟ್ಟಿನಲ್ಲಿ ಅವಲೋಕಿಸಿದರೆ, ಎನ್ ಇ ಆರ್ ಗಾಗಿ ಪೂರ್ವಕ್ಕೆ ಬದಲು ದಕ್ಷಿಣ ಮತ್ತು ಪಶ್ಚಿಮದತ್ತ ಮುಖಮಾಡುವುದೇ ಸುಲಭ, ಸೂಕ್ತ ಎನಿಸಿದರೆ ಅಚ್ಚರಿಯಿಲ್ಲ. ಏಕೆಂದರೆ ಪೂರ್ವದಲ್ಲಿನ ರಾಷ್ಟ್ರಗಳೊಂದಿಗೆ ಸಂಬಂಧ ಬೆಳೆಸಲು ಮ್ಯಾನ್ಮಾರ್ ಅಡ್ಡಗೋಡೆಯಾಗಿ ಪರಿಣಮಿಸುತ್ತದೆ. ಆ ದೇಶದಲ್ಲಿನ ರಾಜಕೀಯ ಅನಿಶ್ಚಿತತೆ, ಮಿಲಿಟರಿ ಆಡಳಿತದಿಂದ ಪ್ರಜಾತಂತ್ರದತ್ತ ನಡೆಯುತ್ತಿರುವ ಸ್ಥಿತ್ಯಂತರ ಸಹ ಈ ಅನಿಶ್ಚಿತತೆಗೆ ಕಾರಣ ಎನ್ನಬಹುದು. ಇನ್ನೂ ನೆರೆಯ ಬಾಂಗ್ಲಾದೇಶದೊಂದಿಗಿನ ವ್ಯಾಪಾರ ಸಂಬಂಧದ ವಿಷಯಕ್ಕೆ ಬಂದರೆ, ಇದು ನಿಧಾನವಾಗಿ ಸುಧಾರಿಸುತ್ತಿದೆ ಎನ್ನಬಹುದು. ಅದರಲ್ಲೂ ತ್ರಿಪುರಾ ರಾಜ್ಯದ ರಾಜಧಾನಿ ಅಗರ್ತಲಾ ಈ ವಿಷಯದಲ್ಲಿ ಮಾದರಿ ನಗರವಾಗಿ ಹೊರಹೊಮ್ಮುತ್ತಿದೆ. ಹಾಗಾದರೆ, ಅಗರ್ತಲಾ ನಗರ ಇಂತಹ ಪ್ರಮುಖ ಪಾತ್ರ ವಹಿಸಲು ತ್ರಿಪುರಾ ರಾಜ್ಯ ಸರ್ಕಾರ ಬೃಹತ್ ಇಂಟರ್ ನೆಟ್ ಗೇಟವೇಯನ್ನು ಬೆಂಬಲ ಹೊಂದಿರುವುದೇ ಆಗಿದೆ.

ಅಗರ್ತಲಾ ಇಂತಹ ಇಂಟರ್ ನೆಟ್ ಗೇಟವೇ ಸೌಲಭ್ಯ ಹೊಂದಲು ಬಾಂಗ್ಲಾದೇಶ ಸಹ ಕಾರಣ. ಹೀಗಾಗಿ ಉಭಯದೇಶಗಳ ಉದ್ದಿಮೆದಾರರು, ವ್ಯಾಪಾರಿಗಳು ಈ ಪುಟ್ಟ ರಾಜ್ಯದ ರಾಜಧಾನಿಯಲ್ಲಿ ಕಾಣಸಿಗುತ್ತಾರೆ. ಅಲ್ಲಿ ವ್ಯಾಪಾರ ವಹಿವಾಟು ಸಂಬಂಧ ಚರ್ಚೆ, ಒಪ್ಪಂದಗಳು ನಡೆಯುತ್ತಿರುತ್ತವೆ.

ಇನ್ನೊಂದು ಮಹತ್ವದ ಅಂಶವೆಂದರೆ, ಈಶಾನ್ಯ ರಾಜ್ಯಗಳಿಗೆ ಹೋಲಿಸಿದರೆ ತ್ರಿಪುರಾ ರಾಜ್ಯದಲ್ಲಿ ಉತ್ತಮ ಆಡಳಿತ ಇದೆ. ಸಕಾಲ ಹಾಗೂ ಕ್ಷಿಪ್ರಗತಿಯಲ್ಲಿ ಸೇವೆ ಸಲ್ಲಿಸುವ ಸರ್ಕಾರದ ನೀತಿಯೇ ಉತ್ತಮ ಆಡಳಿತಕ್ಕೆ ಕಾರಣ.

ದಂಗೆ, ಪದೇ ಪದೇ ಶಾಂತಿ ಕದಡುವಂತಹ ವಿದ್ಯಮಾನಗಳು ಈಗ ತ್ರಿಪುರಾದಲ್ಲಿ ಇಲ್ಲ. ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ಹಾಗೂ ಗಲಭೆ ಪೀಡಿತ ಪ್ರದೇಶಗಳ ಕಾಯ್ದೆಗಳನ್ನು ತ್ರಿಪುರಾ ರಾಜ್ಯ ಸರ್ಕಾರ 2015 ರಲ್ಲಿಯೇ ತೆರವುಗೊಳಿಸಿದೆ.

* ನಿರ್ದೇಶಕರು, ಈಶಾನ್ಯ ಅಧ್ಯಯನ ಮತ್ತು ನೀತಿ ಸಂಶೋಧನಾ ಕೇಂದ್ರ, ಜಾಮಿಯಾ ಮಿಲಿಯಾ ಇಸ್ಲಾಮಿಯಾ. E-mail : sanjoyha@gmail.com

ಹೀಗಾಗಿ ತ್ರಿಪುರಾದಲ್ಲಿ ಈಗ ಶಾಂತಿ ನೆಲೆಸಿದ್ದು ಅಭಿವೃದ್ಧಿಗೆ ಪೂರಕ ವಾತಾವರಣ ಹೊಂದಿದೆ.

ಬಾಂಗ್ಲಾದೇಶವು ಬಾಗ್ ಡೊಗ್ರಾದಲ್ಲಿ ರಾಯಭಾರಿ ಕಛೇರಿ ಆರಂಭಿಸಿದ್ದು ಇದರಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆತಂತಾಗಿದೆ. ಈ ಸೌಲಭ್ಯ ಆರಂಭಗೊಂಡಾಗಿನಿಂದ ಡಾರ್ಜಿಲಿಂಗ್‌ಗೆ ಹೋಗಬೇಕಾದ ಪ್ರವಾಸಿಗರು ಕೊಲ್ಕತ್ತಾ ಮೂಲಕ ಸುತ್ತುಬಳಸಿ ಪ್ರಯಾಣಿಸುವ ಅಗತ್ಯವಿಲ್ಲ. ರಾಯಭಾರಿ ಕಛೇರಿ ಸ್ಥಾಪನೆ ಸಣ್ಣ ವಿಷಯವಾದರೂ ಉಭಯ ದೇಶಗಳ ಬಾಂಧವ್ಯಕ್ಕೆ ಸಂಬಂಧಪಟ್ಟಂತೆ ಒಂದು ಮಹತ್ವದ ಹೆಜ್ಜೆ. ಕಾರಣ ಇಷ್ಟೇ ಈ ಮೊದಲು ಬಾಂಗ್ಲಾ ದೇಶಕ್ಕೆ ಭೇಟಿ ನೀಡಲು ಬಯಸುವವರು ಅಧಿಕೃತ ಪರವಾನಗಿ ಪಡೆಯುವುದು ಕಷ್ಟದ ಕೆಲಸವಾಗಿತ್ತು. ಏಕೆಂದರೆ ಹತ್ತಿರದ ರಾಯಭಾರಿ ಕಛೇರಿ ಸವಲತ್ತುಗಳು ಕೇವಲ ಕೊಲಕತ್ತಾ ಮತ್ತು ಅಗರ್ತಲಾದಲ್ಲಿವೆ.

ಬಾಂಗ್ಲಾದೇಶಕ್ಕೆ ಭೇಟಿ ನೀಡುವ ಸಲುವಾಗಿ ವೀಸಾ ಪಡೆಯಲು 3–4 ದಿನಗಳು ಬೇಕಾಗುತ್ತಿದ್ದವು. ಸಾವಿರಾರು ರೂಪಾಯಿ ವೆಚ್ಚವಾಗುತ್ತಿತ್ತು. ಅದೇ ರೀತಿ ಭಾರತಕ್ಕೆ ಭೇಟಿ ನೀಡಬೇಕು ಎಂಬ ಇಚ್ಛೆ ಉಳ್ಳ ಬಾಂಗ್ಲಾದೇಶಿಗರ (ಬಾಂಗ್ಲಾದೇಶದಿಂದ ದೇಶದೊಳಗೆ ಅಕ್ರಮವಾಗಿ ನುಸುಳುವವರಿಗೆ ಈ ಮಾತು ಅನ್ವಯವಾಗದು) ಪಾಡು ಇದೇ ರೀತಿ ಇರುತ್ತಿತ್ತು. ಆದರೆ ದಶಕಗಳ ನಂತರ ಈ ಪರಿಸ್ಥಿತಿ ಬದಲಾಗಿದೆ.

ಸತತ ಪ್ರಯತ್ನಗಳ ನಂತರ ಸಿಲ್‌ಹೆಟ್ ಮತ್ತು ಗುವಾಹತಿಗಳಲ್ಲಿ ರಾಯಭಾರ ಕಛೇರಿಗಳನ್ನು ಸ್ಥಾಪಿಸಲಾಗಿದ್ದು ಉಭಯ ರಾಷ್ಟ್ರಗಳ ನಡುವೆ ಸಂಚಾರಕ್ಕೆ ಇಂಬು ನೀಡಿದೆ. ಈ ಎಲ್ಲ ಪ್ರಗತಿ ಹೊರತಾಗಿಯೂ ಈಶಾನ್ಯ ಭಾಗದ ರಾಜ್ಯಗಳಲ್ಲಿ




ಅಂತಾರಾಷ್ಟ್ರೀಯ ಕಂಪನಿಗಳಿಂದ ಹೂಡಿಕೆ ಸವಾಲಾಗಿಯೇ ಉಳಿದಿದೆ.

ಈಶಾನ್ಯ ರಾಜ್ಯಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಕೆಲವು ಕಾಯ್ದೆಗಳು ಹಾಗೂ ಈ ರಾಜ್ಯಗಳಿಗೆ ಸಂಪರ್ಕ ಕಲ್ಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳ ಕೊರತೆ ಇದಕ್ಕೆ ಕಾರಣ. ಈ ರಾಜ್ಯಗಳಲ್ಲಿ ಹೂಡಿಕೆಗೆ ಎದುರಾಗುವ ಸಮಸ್ಯೆಗಳಿಗೆ ನಿಖರವಾದ ಹಾಗೂ ವಾಸ್ತವ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕೇ ಹೊರತು ತೋರಿಕೆಯ ಕ್ರಮಗಳಿಂದ ಯಾವುದೇ ಪ್ರಯೋಜನ ಇಲ್ಲ. ಕ್ಷೋಭೆಗೆ ಒಳಗಾಗಿದ್ದ ಪ್ರದೇಶ ಅಥವಾ ರಾಜ್ಯದ ಬಗೆಗಿನ ಅಭಿಪ್ರಾಯವನ್ನು ಕೂಡಲೇ ಬದಲಾಯಿಸುವುದು ಕಷ್ಟದ ಕೆಲಸ. ಏಕೆಂದರೆ, ಕಳೆದ 60 ವರ್ಷಗಳ ಅವಧಿಯಲ್ಲಿ ಆಂತರಿಕವಾಗಿ ಹಾಗೂ ರಾಜ್ಯದ ವಿರುದ್ಧದ ಸಂಘರ್ಷ, ದಂಗೆಯಿಂದಾಗಿ ಈ ರಾಜ್ಯ ನಲುಗಿ ಹೋಗಿದ್ದನ್ನು ಯಾರೂ ಮರೆಯಲಾರರು. ಅಲ್ಲದೇ, ರಾಜ್ಯ ಸರ್ಕಾರದ ವ್ಯಾಪಕ ಹಾಗೂ ಬಿರುಸಿನ ಪ್ರಚಾರ ಕೈಗೊಂಡರೂ, ಈ ರಾಜ್ಯದಲ್ಲಿ ಬಂಡವಾಳ ಹೂಡಲು ಹೂಡಿಕೆದಾರರು ಹಿಂಜರಿಯಲು ಇದು ಕೂಡ ಪ್ರಮುಖ ಕಾರಣವಾಗಿದೆ.

ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನೀತಿಯ ಪರಿಣಾಮ ಈ ಪ್ರದೇಶದಲ್ಲಿ ಹಾಗೂ ಪ್ರದೇಶದ ಬಗ್ಗೆ ನಂಬಿಕೆಯ ಕೊರತೆ ಉದ್ಭವವಾಗಿತ್ತು. ಅಲ್ಲದೇ, ಪರಕೀಯತೆ ಭಾವನೆಯೂ ಮೂಡಿದ್ದರಿಂದ ಈ ನಂಬಿಕೆಯ ಕೊರತೆ ಇನ್ನೂ ಹೆಚ್ಚಾಗಿದ್ದರಲ್ಲಿ ಅಚ್ಚರಿಯಿಲ್ಲ. ಈ ವಿದ್ಯಮಾನದ ಮತ್ತೊಂದು ಪರಿಣಾಮ ಎಂದರೆ, ಸಶಸ್ತ್ರ ಪಡೆಗಳಿಂದ ಮಾನವ ಹಕ್ಕುಗಳ ಉಲ್ಲಂಘನೆ ವ್ಯಾಪಕವಾಗಿ ನಡೆಯಿತು ಎಂಬ ದೂರುಗಳು ಕೇಳಿಬಂದವು. ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವ ಪ್ರಕರಣಗಳನ್ನು ದಾಖಲಿಸಲಾಗಿದೆ.

'ಆಗ್ನೇಯ ಏಶಿಯಾದೊಂದಿಗೆ ಸಂಪರ್ಕ ಸಾಧಿಸುವುದಾಗಿ ಹೇಳುವುದು ಸುಲಭ. ಆದರೆ, ಭಾರಿ ಭದ್ರತಾ ಕೇಂದ್ರಿತ ಗಡಿಗಳನ್ನು ಹೊಂದಿರುವ ನಾವು ಇದನ್ನು ಹೇಗೆ ಸಾಧಿಸುತ್ತೇವೆ' ಎಂದು ಶಿಲ್ಲಾಂಗ್ ಟೈಮ್ಸ್ ಪತ್ರಿಕೆಯ ಸಂಪಾದಕ ಶ್ರೀ ಪೆಟ್ರೀಸಿಯಾ ಮುಖಿಮ್ 2014ರಲ್ಲಿಯೇ ಹೇಳಿದ್ದರು.



"ಕೇಂದ್ರದ ನೀತಿಯಿಂದಾಗಿ ಪ್ರಯೋಜನವಾಗಿದ್ದು ದೇಶದ ಕರಾವಳಿಗುಂಟ ಇರುವ ರಾಜ್ಯಗಳಾದ ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಹಾಗೂ ತಮಿಳುನಾಡಿಗೆ. ಈ ರಾಜ್ಯಗಳಲ್ಲಿರುವ ಬಂದರುಗಳ ಮೂಲಕವೇ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟು ಅಧಿಕ ಪ್ರಮಾಣದಲ್ಲಿ ನಡೆಯುವುದು ಇದಕ್ಕೆ ಕಾರಣ".

ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ, ಈಶಾನ್ಯ ರಾಜ್ಯಗಳಲ್ಲಿ ಮೂಲಸೌಕರ್ಯಗಳ ಕೊರತೆ ಇರುವುದನ್ನು ಕಡೆಗಣಿಸಲಾಗದು.

ವ್ಯಾಪಾರ ಅಭಿವೃದ್ಧಿಗೊಳ್ಳಬೇಕಾದರೆ ಮೂಲಸೌಕರ್ಯಗಳು ಅಗತ್ಯ. ಆದರೆ, ಈ ರಾಜ್ಯಗಳಲ್ಲಿನ ಪಾರಂಪರಿಕ, ರಾಜಕೀಯ ಹಾಗೂ ಸಾಮಾಜಿಕ ವಿದ್ಯಮಾನಗಳು ಒಂದಕ್ಕೊಂದು ತಳಕು ಹಾಕಿಕೊಂಡಿರುವುದರಿಂದ ಹಾಗೂ ಇವುಗಳ ನಡುವೆಯೇ ಸಂಘರ್ಷವೂ ಇರುವುದು ಮೂಲಸೌಕರ್ಯ ಹೊಂದಲು ಪ್ರಮುಖ ತೊಡಕಾಗಿತ್ತು. ಉತ್ತಮ ಆರ್ಥಿಕತೆ ಹೊಂದಿರುವ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದಾಗ, ಈಶಾನ್ಯ ಭಾಗದ ರಾಜ್ಯಗಳಲ್ಲಿಯೇ ಪ್ರಾದೇಶಿಕವಾರು ಅಭಿವೃದ್ಧಿ ಕುಂಠಿತವಾಗಿರುವುದು ಕಂಡು ಬರುತ್ತದೆ.

ಅಭಿವೃದ್ಧಿಗೆ ಅಡ್ಡಿಯಾಗಿರುವ ಹಲವಾರು ಸಂಕೋಲೆಗಳನ್ನು ತೊಡೆದು ಹಾಕಿ, ಈಶಾನ್ಯ ರಾಜ್ಯಗಳೂ ಪ್ರಗತಿ ಸಾಧಿಸುವಂತೆ ಮಾಡಬೇಕಾದರೆ, ಈ ರಾಜ್ಯಗಳನ್ನು ಬಂಗಾಳ ಕೊಲ್ಲಿಯೊಂದಿಗೆ ಸುಗಮವಾಗಿ ಸಂಪರ್ಕ ಹೊಂದುವಂತೆ ಮಾಡಬೇಕು.

ಭೌಗೋಳಿಕವಾಗಿ ಬಂಧಿಸಲ್ಪಟ್ಟಿರುವ ಈ ಪ್ರದೇಶವನ್ನು ಮುಕ್ತಗೊಳಿಸಬೇಕು. ಇದು

ಸಾಧ್ಯವಾಗಬೇಕಾದರೆ, ಅಗರ್ತಲಾದಿಂದ ಅಖೌರಾ ಮೂಲಕ ಬಾಂಗ್ಲಾದೇಶದ ಚಿಟ್ಟಗಾಂಗ್ ಬಂದರುವರೆಗೆ ರೈಲು ಮಾರ್ಗವನ್ನು ನಿರ್ಮಿಸಬೇಕು. ಆದರೆ, ಈ ಯೋಜನೆ ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ. ಈ ರೈಲು ಮಾರ್ಗವನ್ನು ನಿರ್ಮಿಸುವ ಕುರಿತಂತೆ ಉಭಯ ದೇಶಗಳ ನಡುವೆ ಎರಡು ದಶಕಗಳಿಂದಲೂ ಮಾತುಕತೆ ನಡೆಯುತ್ತಿದೆ. ಅದರಲ್ಲೂ ವಿದೇಶಾಂಗ ನೀತಿಯಲ್ಲಿ ಪರಿಣಿತರಾಗಿರುವ ಶ್ರೀ ಬಿ.ಜಿ.ವರ್ಗೀಸ್ ಅವರ ಪ್ರಯತ್ನದ ಫಲವಾಗಿ ಈ ಮಾತುಕತೆ ಮುಂದುವರಿದಿದ್ದು, ಇನ್ನೂ ಕಾರ್ಯಗತವಾಗಬೇಕಿದೆ.

ಈ ರೈಲು ಮಾರ್ಗದ ಸಂಪರ್ಕದಿಂದಾಗಿ ಬಾಂಗ್ಲಾದೇಶದ ಉತ್ಪನ್ನಗಳಿಗೆ ಈಶಾನ್ಯ ಭಾರತದ ರಾಜ್ಯಗಳಲ್ಲಿ ಮಾರುಕಟ್ಟೆ ಒದಗಿಸಿದಂತಾಗುತ್ತದೆ. ಅದೇ ರೀತಿ ಈಶಾನ್ಯ ರಾಜ್ಯಗಳ ಉತ್ಪನ್ನಗಳಿಗೆ ಬಾಂಗ್ಲಾದೇಶದ ಮಾರುಕಟ್ಟೆ ಸಿಗುವ ಜೊತೆಗೆ ಆ ದೇಶದ ಬಂದರುಗಳ ಮೂಲಕ ಅಂತಾರಾಷ್ಟ್ರೀಯ ಮಾರುಕಟ್ಟೆಯೂ ಲಭ್ಯವಾಗುವುದು. ಇನ್ನು, ಉತ್ಪನ್ನಗಳು, ಸರಕುಗಳ ವಿಷಯ ಬಂದರೆ, ಪ್ರತಿ ವರ್ಷ ಅಂದಾಜು 20 ದಶಲಕ್ಷ ಟನ್‌ಗಳಷ್ಟು ಬಂಬೂ ಬಿದಿರು ಕೊಯ್ಲು ಕೈಗೊಳ್ಳಬಹುದು. ಆ ಮೂಲಕ ಲಕ್ಷಾಂತರ ಜನರಿಗೆ ಉದ್ಯೋಗ ಕಲ್ಪಿಸಬಹುದು ಎಂದು ರಾಷ್ಟ್ರೀಯ ಬಂಬೂ ಮಿಷನ್‌ನ ವರದಿ ಹೇಳುತ್ತದೆ. ಆದರೆ, ಇಂತಹ ಯೋಜನೆಯನ್ನು ಅನುಷ್ಠಾನಗೊಳಿಸಲು ಕೆಳ ಹಂತದಲ್ಲಿ ಇಚ್ಛಾಶಕ್ತಿಯ ಕೊರತೆ ಕಂಡು ಬರುತ್ತದೆ. ಈ ಪ್ರದೇಶ ಈಗಲೂ ವಿವಿಧ ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಲ್ಲಿ ಮುಂಚೂಣಿಯಲ್ಲಿದೆ. ಹೀಗಾಗಿ ಈ ರಾಜ್ಯಗಳು ಒಂದು ಮಾರುಕಟ್ಟೆಯಾಗಿವೆಯೇ ಹೊರತು ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮಿಲ್ಲ.



ಉದಾಹರಣೆಗೆ, ರೇಜರ್ ಬ್ಲೇಡ್‌ಗಳು, ಮೀನಿನಿಂದ ಹಿಡಿದು ಪೆನ್ಸಿಲ್ ವರೆಗೆ, ಆಹಾರ ಪದಾರ್ಥಗಳು, ಕಾರಿನಿಂದ ಹಿಡಿದು ಟೆಲಿವಿಷನ್ ಸೆಟ್ ವರೆಗೆ ಅನೇಕ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅದೇ ರೀತಿ ಹಣ್ಣುಗಳು, ತರಕಾರಿ ಹಾಗೂ ಜಾನುವಾರುಗಳನ್ನು ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ಗಳಿಗೆ ರಫ್ತು ಮಾಡಲಾಗುತ್ತಿದೆ. ಆದರೆ, ಈ ಕೃಷಿ ಉತ್ಪನ್ನ ಹಾಗೂ ಪಶುಗಳ ಉತ್ಪನ್ನಗಳನ್ನು ಮೌಲ್ಯವರ್ಧಿತ ವಸ್ತುಗಳಾಗಿಸಲು ಬೃಹತ್ ಪ್ರಮಾಣದ ಸಂಸ್ಕರಣಾ ಘಟಕಗಳು ಇಲ್ಲ.

ಒಂದು ಪ್ರದೇಶದ ಅಭಿವೃದ್ಧಿಯನ್ನು ಅಳೆಯುವ ಮಾನವ ಅಭಿವೃದ್ಧಿ ಸೂಚ್ಯಂಕಗಳ ದಾಖಲೆಯೂ ಕ್ಲಿಷ್ಟಕರವಾಗಿರುವುದು ಮತ್ತೊಂದು ಸವಾಲಾಗಿದೆ ಎಂದೇ ವಿಶ್ಲೇಷಿಸಲಾಗುತ್ತದೆ.

ಅಸ್ಸಾಂನಲ್ಲಿ ತಾಯಂದಿರ ಮರಣ ಪ್ರಮಾಣ ಹೆಚ್ಚು. ಈ ಪ್ರಮಾಣ 300 ಇದ್ದು, ಈ ಸಂಖ್ಯೆ ಉತ್ತರಪ್ರದೇಶ, ಬಿಹಾರ ಹಾಗೂ ಮಧ್ಯಪ್ರದೇಶಗಳಿಂದಲೂ ಅಧಿಕವಾಗಿದೆ. ಆದರೆ, 2005–06ನೇ ಸಾಲಿನಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 490 ಅಂಶಗಳ ಹೆಚ್ಚಳ ದಾಖಲಾಗಿರುವುದು ವಿಶೇಷ. ಆದರೆ, ಈ ಸೂಚ್ಯಂಕದಲ್ಲಿ ಗಮನಾರ್ಹ ಪ್ರಗತಿ ಕಾಣದ ಹೊರತು ಪೂರ್ವ, ಪಶ್ಚಿಮ ಇಲ್ಲವೇ ದಕ್ಷಿಣದತ್ತ ಮುಖಮಾಡಿದರೂ ಪ್ರಯೋಜನ ಇಲ್ಲ.

ಮಾನವನ ಗೌರವ, ಸಮಾನತೆ ಸಾಧಿಸಲು ಕಷ್ಟವಾಗುತ್ತದೆ. ನಿಜ, ಆದರೆ ಮಾನವ ಗೌರವ ಹಾಗೂ ಸಮಾನತೆಯನ್ನು ಸಾಧಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದ್ಯತೆಯಾಗುತ್ತವೆ.

ಇನ್ನೊಂದು ಮಹತ್ವದ ಸವಾಲು ಎಂದರೆ, ಜಾಗತಿಕ ಮಟ್ಟದಲ್ಲಿ ಹವಾಮಾನದಲ್ಲಿ ಆಗಿರುವ ಬದಲಾವಣೆಯಿಂದಾಗಿ ಆಗುತ್ತಿರುವ ಹವಾಮಾನ ಬದಲಾವಣೆಯನ್ನು ಎದುರಿಸುವುದು. ಬ್ರಹ್ಮಪುತ್ರ ಕಣಿವೆ ಇತ್ತೀಚೆಗೆ ಪ್ರವಾಹದಿಂದ ಹಾನಿಗೊಳಗಾಗಿದೆ.

ಪ್ರತಿ ವರ್ಷ ಇಂತಹ ವಿದ್ಯಮಾನ ಇದ್ದೇ ಇರುತ್ತದೆ. ಅಲ್ಲದೇ, ಇತ್ತೀಚಿನ ದಿನಗಳಲ್ಲಿ 350 ಒಡ್ಡುಗಳು ಹಾಳಾಗಿ ತೊಂದರೆ ಅನುಭವಿಸಬೇಕಾಯಿತು, ಇಷ್ಟೆಲ್ಲಾ ಪ್ರಾಕೃತಿಕ




ಅವಘಡಗಳು ಸಂಭವಿಸಿದ್ದರೂ, ಇಂತಹ ಮಹತ್ವದ ವಿದ್ಯಮಾನ ಘಟಿಸಿದ್ದರೂ ಈ ಬಗ್ಗೆ ಈಶಾನ್ಯ ರಾಜ್ಯಗಳು ಅಥವಾ ದೇಶದ ಇತರ ಭಾಗಗಳಲ್ಲಿ ಈ ಕುರಿತು ಗಂಭೀರ ಚರ್ಚೆ ನಡೆದಿಲ್ಲ. ಅಲ್ಲದೇ, ಒಡ್ಡುಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಇಲ್ಲವೇ ಇದಕ್ಕೆ ಪರ್ಯಾಯ ಕಂಡುಕೊಳ್ಳಬೇಕಾಗಿದೆ.

ಪೂರ್ವದತ್ತ ನೋಡಿ/ಪೂರ್ವದಲ್ಲಿ ಕಾರ್ಯ ನಿರ್ವಹಿಸಿ (ಆ್ಯಕ್ಟ್ ಈಸ್ಟ್/ಲುಕ್ ಈಸ್ಟ್) ನೀತಿಯು ಅದ್ಭುತವಾಗಿದೆ. ಆದರೆ, ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಮೂಲಭೂತ ಅಂಶವೊಂದನ್ನು ಈ ನೀತಿ ಕಡೆಗಣಿಸಿದೆ ಎಂದೇ ಹೇಳಬಹುದು. ಜಲಮಾರ್ಗದ ಮೂಲಕ ಭಾರಿ ಸರಕು ಸಾಗಣೆಗಾಗಿ ಸೂಕ್ತ ಜಲ ಸಾರಿಗೆ ನೀತಿಯನ್ನು ರೂಪಿಸದಿದ್ದರೆ, ಇಡೀ ನೀತಿಯೇ ಬ್ರಹ್ಮಪುತ್ರದಲ್ಲಿ ಕೊಚ್ಚಿ ಹೋದಂತೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಜಲಮಾರ್ಗಗಳಿಗೆ ಒತ್ತು ನೀಡುವ ಸಾರಿಗೆ ಸಚಿವಾಲಯದ ನಿರ್ಧಾರ ಮಹತ್ವಪಡೆದುಕೊಳ್ಳುತ್ತದೆ.

ಈ ಪ್ರದೇಶದಲ್ಲಿ ಜಲ ಸಾರಿಗೆ ಕುರಿತಂತೆ ನೀತಿ ಏಕೆ ಅಗತ್ಯವೆಂದರೆ, ಈ ರಾಜ್ಯಗಳಲ್ಲಿರುವ ಪ್ರಮುಖ ರಸ್ತೆ ಹಾಗೂ ರೈಲು ಮಾರ್ಗಗಳು ವರ್ಷದಲ್ಲಿ 3–5 ತಿಂಗಳು ಕಾಲ ಪ್ರವಾಹಕ್ಕೆ ತುತ್ತಾಗುತ್ತವೆ. ಹೀಗಾಗಿ ಈ ಪ್ರದೇಶದ ವರ್ತಮಾನ ಮತ್ತು ಭವಿಷ್ಯದ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸುವ ಆರ್ಥಿಕ ನೀತಿ ಈ ಮೂಲಭೂತ ಅಂಶವನ್ನು



ಒಳಗೊಂಡಿರುವುದು ಅಗತ್ಯ. ಇನ್ನೂ ನಿಖರವಾಗಿ ಹೇಳಬೇಕು ಎಂದರೆ, ವಿಪತ್ತು ನಿರ್ವಹಣೆ ಎಂಬುದನ್ನು ನೀತಿ ನಿರೂಪಣೆ ಹಾಗೂ ಅನುಷ್ಠಾನದ ಎಲ್ಲ ಹಂತಗಳಲ್ಲಿ ಇರುವಂತೆ ನೋಡಿಕೊಳ್ಳುವುದು ಮುಖ್ಯ. ಆದರೆ, ಇಂತಹ ನೀತಿಯು ನದಿಯ ತೀರದಲ್ಲಿ ವಾಸಿಸುತ್ತಿರುವ ಸಮುದಾಯಗಳಿಗೆ ಅನುಕೂಲವಾದೀತು? ಈ ಜಲ ಮಾರ್ಗದಲ್ಲಿ ಸಂಚರಿಸುವ ಬೃಹತ್ ಹಡಗುಗಳಿಂದ ಜೀವವೈವಿಧ್ಯ, ಮೀನು ಹಾಗೂ ಇತರ ಜೀವರಾಶಿಗಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಈಶಾನ್ಯ ರಾಜ್ಯಗಳಲ್ಲಿನ ನದಿಗಳಿಗೆ ನಿರ್ಮಿಸಲು ಉದ್ದೇಶಿಸಲಾಗಿರುವ ಬೃಹತ್ ಮೂಲಸೌಕರ್ಯಗಳ ಕಾಮಗಾರಿಯಿಂದಾಗಿ ನದಿ ಪರಿಸರದ ಮೇಲೆ ಅಗಾಧ ಪರಿಣಾಮ ಬೀರುತ್ತದೆ ಎಂದು ಹಲವಾರು ಅಧ್ಯಯನಗಳಿಂದ ತಿಳಿದು ಬಂದಿದೆ. ಜಲಚರ ಜೀವ ಸಂಕುಲಕ್ಕೆ ಏನಾಗುತ್ತದೆ, ಮೀನುಗಳ ಪ್ರಭೇದಗಳಿಗೆ, ಈ ನದಿಗಳ ನೀರಿನ ಮೇಲೆ ಅವಲಂಬಿತ ಕೃಷಿ ಹಾಗೂ ಮೀನುಗಾರಿಕೆಯಲ್ಲಿ ತೊಡಗಿರುವ ಸಮುದಾಯಗಳ ಮೇಲೆ ಯಾವ ರೀತಿಯ ದುಷ್ಪರಿಣಾಮ ಉಂಟಾಗುತ್ತದೆ? ದಕ್ಷಿಣ ಏಶಿಯಾದಲ್ಲಿ 400ಕ್ಕಿಂತ ಕಡಿಮೆ ಇರುವ ಹಾಗೂ ಅಳಿವಿನಂಚಿನಲ್ಲಿರುವ ಡಾಲ್ಫಿನ್‌ಗಳ ಗತಿ ಏನು ಎಂಬ ಪ್ರಶ್ನೆಗಳೂ ಉದ್ಭವವಾಗುತ್ತವೆ. ಇಷ್ಟೆಲ್ಲಾ ಸವಾಲುಗಳ ನಡುವೆಯೂ ಸಾಕಷ್ಟು ಸಾಧನೆಗೆ, ಸರಳವಾಗಿ ಅನುಷ್ಠಾನ ಮಾಡಬಹುದಾದ ಹಲವಾರು ವಲಯಗಳೂ ಇವೆ. ಆಗ್ನೇಯ ಏಶಿಯಾದ ವಿಶ್ವವಿದ್ಯಾಲಯಗಳು, ಮಾಧ್ಯಮ, ಕರಕುಶಲ ಕ್ಷೇತ್ರದಲ್ಲಿ ನಿರತ ಸಂಸ್ಥೆಗಳು, ಸಂಗೀತ ಕಾರ್ಯಕ್ರಮಗಳ ವಿನಿಮಯ, ಉತ್ಸವಾಚರಣೆಗಳು ಈ ಪ್ರದೇಶದ ಜನರನ್ನು ಪರಸ್ಪರ ಹತ್ತಿರ ತರಬಲ್ಲವು.

ಇದು ಸಾಧ್ಯವಾಗಬೇಕಾದರೆ ಎಲ್ಲ ರಾಷ್ಟ್ರಗಳ ಸರ್ಕಾರಗಳ, ಅಂತಾರಾಷ್ಟ್ರೀಯ ಸಂಘಟನೆಗಳು ಹಾಗೂ ಕಾರ್ಪೊರೇಟ್ ವಲಯದ ಬೆಂಬಲ, ಸಹಕಾರ ಬೇಕಾಗುತ್ತದೆ. ದೂರಗಾಮಿ ಪರಿಣಾಮದ ಆಧಾರದ ಮೇಲೆ ಅವಲೋಕಿಸಿದರೆ, ಜನಾಂಗೀಯ ಗುಂಪುಗಳ ನಡುವೆ ಸಂಘರ್ಷವನ್ನು ನಿವಾರಿಸಬೇಕು. ಇದನ್ನ ಸಾಧಿಸುವಲ್ಲಿ ರಾಜ್ಯ ಅಥವಾ ಸರ್ಕಾರ ಹಲವಾರು ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು; ಕೇವಲ ವ್ಯಾಪಾರ ವಹಿವಾಟಿಗಲ್ಲದೇ, ವಿದೇಶಿ ಪ್ರವಾಸಿಗರಿಗೆ ಈ ಪ್ರದೇಶವನ್ನು ಆಕರ್ಷಕ ತಾಣವನ್ನಾಗಿ ಅಭಿವೃದ್ಧಿಪಡಿಸುವುದು ಅಗತ್ಯ.

ಏಕೆಂದರೆ, ಪದೇಪದೇ ಮುಷ್ಕರ, ಬಂದ್‌ಗಳಿಂದ ವ್ಯಾಪಾರ ವಹಿವಾಟು, ಜನಜೀವನ ಅಸ್ತವ್ಯಸ್ತವಾಗುವುದನ್ನು ಯಾವುದೇ ಉದ್ದಿಮೆಗಳ ಸಮೂಹವೂ ಇಷ್ಟಪಡುವುದಿಲ್ಲ. ಈ ನಿಟ್ಟಿನಲ್ಲಿ ದೃಢ ಹೆಜ್ಜೆ ಇಡುವುದರಿಂದ ಭಾರತದ ಯುವ ಜನಾಂಗಕ್ಕೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಅವಕಾಶ ಒದಗಿಸಿದಂತಾಗುತ್ತದೆ. ಶಾಂತಿ, ಗೌರವಯುತವಾಗಿ ಹಾಗೂ ನ್ಯಾಯಬದ್ಧ ನೆಲೆಗಟ್ಟಿನಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಉತ್ತೇಜನ ನೀಡುತ್ತದೆ.

ಭೌತಿಕ ಮೂಲಸೌಕರ್ಯಗಳ ಅಭಿವೃದ್ಧಿ, ವ್ಯಾಪಾರ, ಅಭಿವೃದ್ಧಿಯಷ್ಟೇ ಅಲ್ಲದೇ, ಆಂತರಿಕವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯತ್ಯಾಸಗಳನ್ನು ಮೀರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿರ್ಧಾರ ಕೈಗೊಂಡಿದ್ದೆ ಆದರೆ ಈ ಪ್ರದೇಶದ ಸರ್ವಾಂಗೀಣ ಪ್ರಗತಿ ಶತಸಿದ್ಧ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ಜಿಲ್ಲೆ ಹಾಗೂ ಅಂಚೆ ಪಿನ್ ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಚಂದಾದಾರರು, ಸರಿ ಇದೆಯೇ ಎಂದು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ. ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ರಜಾದಿನಗಳನ್ನು ಹೊರತುಪಡಿಸಿ ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)**

# ಈಶಾನ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ

* ನತಲೈ ವೆಸ್ಟ್ ಖಾರ್‌ಕೊಂಗೊರ್



**ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಬದ್ಧತೆ, ಅಧಿಕಾರಶಾಹಿ ಬೆಂಬಲ ಮತ್ತು ಬದ್ಧತೆ, ಉತ್ತಮ ಆಡಳಿತ ಮತ್ತು ಖಾಸಗಿ, ಸಾರ್ವಜನಿಕ ಜನರ ಸಹಭಾಗಿತ್ವ (ಪಿಪಿಪಿಪಿ) ಮಾದರಿಯನ್ನು ಅನುಸರಿಸಬೇಕಾಗಿದೆ. ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರಸ್ತುತ ಇರುವ ಶೈಕ್ಷಣಿಕ ವ್ಯವಸ್ಥೆಯನ್ನು ಸದೃಢಗೊಳಿಸಬೇಕಿದೆ. ಆ ಮೂಲಕ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಈಶಾನ್ಯ ಭಾಗಗಳಿಂದ ಜನರು ವಲಸೆ ಹೋಗುವುದನ್ನು ತಪ್ಪಿಸುವುದರ ಜತೆಗೆ ಬಂಡುಕೋರರ ಸಮಸ್ಯೆಗಳನ್ನೂ ಸಹ ಹತ್ತಿಕ್ಕಬಹುದಾಗಿದೆ.**

ಎಂಟು ರಾಜ್ಯಗಳನ್ನು ಒಳಗೊಂಡಿರುವ ಈಶಾನ್ಯ ಭಾಗದಲ್ಲಿ ಸಾಕ್ಷರತೆ ಪ್ರಮಾಣ ದೇಶದ ಸರಾಸರಿಗಿಂತ ಜಾಸ್ತಿ ಇದೆ. 2011ರ ಮಾರ್ಚ್‌ನಲ್ಲಿ ದಾಖಲಾಗಿರುವಂತೆ ದೇಶದ ಸಾಕ್ಷರತೆ ಪ್ರಮಾಣ ರಾಷ್ಟ್ರೀಯ ಸರಾಸರಿ ಶೇ.74.04ರಷ್ಟಿದೆ, ಆದರೆ ಈಶಾನ್ಯ ಭಾಗದಲ್ಲಿ ಆ ಪ್ರಮಾಣ ಶೇ.77.76 ಇದೆ. ಹೆಚ್ಚಿನ ಸಾಕ್ಷರತಾ ಪ್ರಮಾಣ ಇದ್ದರೂ ಸಹ ಈಶಾನ್ಯ ಭಾಗದಲ್ಲಿ ಶಿಕ್ಷಣ ವ್ಯವಸ್ಥೆ ಸಂಘಟಿತವಾಗಿಲ್ಲ ಮತ್ತು ಅದು ಹಲವು ಮಿತಿಗಳನ್ನು, ಸವಾಲುಗಳನ್ನು ಎದುರಿಸುತ್ತಿದೆ.

ಅದರಲ್ಲೂ ವಿಶೇಷವಾಗಿ ತಾಂತ್ರಿಕ ಶಿಕ್ಷಣ ಹಿಂದುಳಿದಿರುವುದರಿಂದ ಉನ್ನತ ಶಿಕ್ಷಣ ಪಡೆಯುವ ಆಕಾಂಕ್ಷೆ ಇರುವ ಬಹುತೇಕರು ಆ ಪ್ರಾಂತ್ಯದಿಂದ ಹೊರನಡೆಯುತ್ತಿದ್ದಾರೆ. ಬಹುತೇಕ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ನಿಯಂತ್ರಿಸುತ್ತಿದೆ, ಆದರೆ ಅದು ರಾಷ್ಟ್ರೀಯ ಮಟ್ಟಕ್ಕೆ ಸರಿಸಮನಾಗಿಲ್ಲ.

ರಾಜ್ಯ ಸರ್ಕಾರ ಇನ್ನೂ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನೇ ಅನುಸರಿಸಿಕೊಂಡು ಬರುತ್ತಿದೆ. ಆ ರೀತಿಯ ಶಿಕ್ಷಣ ವ್ಯವಸ್ಥೆಯಿಂದಾಗಿ ಪ್ರಾಂತ್ಯದಿಂದ ಹೊರಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವುದಲ್ಲದೆ, ಉನ್ನತ ಶಿಕ್ಷಣದಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಶೇ.50.05ಕ್ಕೆ ಏರಿಕೆಯಾಗಿದೆ. 1 ರಿಂದ 8ನೇ ತರಗತಿವರೆಗಿನ ಹೊರಗುಳಿಯುವ ಮಕ್ಕಳ ಪ್ರಮಾಣ ರಾಷ್ಟ್ರೀಯ ಸರಾಸರಿ 2011–12ರಲ್ಲಿ ಶೇ.40.8ರಷ್ಟಿದೆ.

ವಿದ್ಯಾರ್ಥಿಗಳಿಗೆ ತಾಂತ್ರಿಕ ಹಾಗೂ ಪ್ರಾಯೋಗಿಕವಾಗಿ ಬೆಳವಣಿಗೆ ಹೊಂದಲು ಅವಕಾಶಗಳು ಇಲ್ಲದ ಪಠ್ಯಕ್ರಮದಿಂದಾಗಿ ಉದ್ಯೋಗಾವಕಾಶ ಸಿಗುವ ಪ್ರಮಾಣ ಕಡಿಮೆ ಇದೆ ಮತ್ತು ನಿರುದ್ಯೋಗವೂ ಹೆಚ್ಚುತ್ತಿದೆ. ಪ್ರೌಢಶಾಲಾ ವಿದ್ಯಾರ್ಥಿಗಳು, ಪದವಿ ಅಥವ ಡಿಪ್ಲೊಮಾ ಹೊಂದಿರುವವರು, ಸ್ನಾತಕೋತ್ತರ ಪದವಿ ಹೊಂದಿರುವವರು ಸಾಕಷ್ಟು ಜನರಿದ್ದರೂ ಸಹ ಒಂದು ಅವರು ನಿರುದ್ಯೋಗಿಗಳಾಗಿದ್ದಾರೆ ಇಲ್ಲವೇ ಅವರಿಗೆ ಸೂಕ್ತ ಉದ್ಯೋಗ ಸಿಕ್ಕಿಲ್ಲ.

ದೇಶದ ಇತರೆ ಭಾಗಗಳಿಗೆ ಹೋಲಿಸಿದರೆ ಈಶಾನ್ಯ ರಾಜ್ಯಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ವೃತ್ತಿಪರ ಸಂಸ್ಥೆಗಳ ಕೊರತೆ ಇದೆ. ಈಶಾನ್ಯ ರಾಜ್ಯಗಳಲ್ಲಿನ ಶಿಕ್ಷಣ ವ್ಯವಸ್ಥೆ ತನ್ನದೇ ಆದ ನಕಾರಾತ್ಮಕ ಅಂಶಗಳಿಂದ ಹಿನ್ನೆಡೆ ಅನುಭವಿಸುತ್ತಿರುವುದಲ್ಲದೆ, ಬಂದ್, ಮುಷ್ಕರ ಮತ್ತಿತರ ಹೊರಗಿನ ಅಂಶಗಳಿಂದಲೂ ಸಹ ತೊಂದರೆ ಎದುರಿಸುವಂತಾಗಿದೆ. ಕೆಲವೊಮ್ಮೆ ವರ್ಷದಲ್ಲಿ 100 ದಿನಗಳೂ ತರಗತಿಗಳು ನಡೆದಿಲ್ಲದಿರುವಂತಹ ವಾತಾವರಣವಿದೆ. ಇದರಿಂದಾಗಿ ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಶಿಕ್ಷಣಕ್ಕಾಗಿ ಪ್ರಾಂತ್ಯದಿಂದ ಹೊರಗೆ ಕಳುಹಿಸುವುದು ಅನಿವಾರ್ಯವಾಗಿದೆ. ಜೊತೆಗೆ ಮಕ್ಕಳ ಕಳ್ಳ ಸಾಗಾಣೆ ಮತ್ತಿತರ ಅಂಶಗಳೂ ಇದಕ್ಕೆ ಕಾರಣವಾಗಿದೆ. ಇದೇ ಕಾರಣಕ್ಕಾಗಿ ಸುಪ್ರೀಂಕೋರ್ಟ್, ಮಣಿಪುರ ರಾಜ್ಯದಿಂದ 12 ವರ್ಷಗೊಳಗಿನ ಮಕ್ಕಳು ಹೊರಹೋಗುವುದನ್ನು ತಡೆಯುವಂತೆ ಆದೇಶಿಸಿತ್ತು.

* ಅಧ್ಯಕ್ಷರು, ಈಶಾನ್ಯ ಪ್ರದೇಶಾಭಿವೃದ್ಧಿ ಕೇಂದ್ರ, ಐಐಎಂ ಶಿಲ್ಲಾಂಗ್. E-mail : nwk@iimshillong.in

ತೃಪ್ತಿದಾಯಕವಲ್ಲದ ಶಿಕ್ಷಣ ವ್ಯವಸ್ಥೆಯ ಜೊತೆಗೆ, ಬಂಡುಕೋರರ ಸಮಸ್ಯೆಯಿಂದಾಗಿ ವಿದ್ಯಾರ್ಥಿಗಳು ಈಶಾನ್ಯ ಭಾಗವನ್ನು ತೊರೆದು ದೇಶದ ಇತರೆ ಪ್ರದೇಶಗಳಿಗೆ ಹೋಗುತ್ತಿದ್ದಾರೆ. ಈಶಾನ್ಯ ಭಾಗದ ಬಹುತೇಕ ರಾಜ್ಯಗಳು ಪ್ರತ್ಯಕ್ಷವಾಗಿ ಅಥವ ಪರೋಕ್ಷವಾಗಿ ಬಂಡುಕೋರರ ಸಮಸ್ಯೆಯನ್ನು ಎದುರಿಸುತ್ತಿವೆ. ಆ ಬಗ್ಗೆ ಕೆಲವು ಉಲ್ಲೇಖಗಳನ್ನು ಮಾಡುವುದಾದರೆ, ಅಸ್ಸಾಂನಲ್ಲಿ ಕರ್ಬಿ ಆಂಗ್‌ಲಾಂಗ್ ಮತ್ತು ಉಲ್ಫಾ ಬಂಡುಕೋರರ ಬಿಕ್ಕಟ್ಟು, ನಾಗಾಲ್ಯಾಂಡ್‌ನಲ್ಲಿ ನಾಗ ವಿವಾದ ಮತ್ತು ನಾಗಾ–ಕುಕಿ ಬಿಕ್ಕಟ್ಟು, ಅರುಣಾಚಲ ಪ್ರದೇಶದಲ್ಲಿ ಚಕ್ಮಾ ಹಾಜೋಂಗ್ ಮತ್ತು ಅರುಣಾಲಚಲೀಸ್ ವಿವಾದ, ಜೊತೆಗೆ ಎಲ್ಲ ಈಶಾನ್ಯ ರಾಜ್ಯಗಳಲ್ಲೂ ಹೊರಗಿನವರು, ಒಳಗಿನವರ ನಡುವಿನ ಸಮಸ್ಯೆ ಇದ್ದೇ ಇದೆ.

ಗಡಿಯಾಚೆಯಿಂದ ನಡೆಯುವ ಮಾದಕ ವಸ್ತುಗಳ ಕಳ್ಳ ಸಾಗಾಣೆ, ಭಯೋತ್ಪಾದನೆ ಅಲ್ಲದೆ ಸೇನೆ ಮತ್ತು ಉಗ್ರಗಾಮಿಗಳ ನಡುವೆ ಪದೇ ಪದೇ ಸಂಘರ್ಷ ನಡೆಯುವುದರಿಂದ ಈಶಾನ್ಯ ಭಾಗದ ಜನರ ಜೀವನ ಕಷ್ಟಕರ ಮತ್ತು ನೋವುದಾಯಕವಾಗಿದೆ. ಸಾಮಾಜಿಕ ಮತ್ತು ರಾಜಕೀಯ ಅಸ್ಥಿರತೆಯಿಂದಾಗಿ ಪ್ರಾಂತ್ಯದಲ್ಲಿ ಉಗ್ರಗಾಮಿ ಗುಂಪುಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ, ರಕ್ತಪಾತ, ಸಾರ್ವಜನಿಕ ಬಂದ್, ಮುಷ್ಕರಗಳು, ಸೇನಾ ಪಡೆಗಳ ವಿಶೇಷಾಧಿಕಾರ, ಸರ್ಕಾರಗಳಲ್ಲಿನ ಭ್ರಷ್ಟಾಚಾರ ಪದ್ಧತಿ ಮತ್ತಿತರ ಕಾರಣಗಳಿಂದಾಗಿ ಭಾಗದ ರಾಜ್ಯಗಳು ದಶಕಗಳಿಂದ ಹಾಗೆ ಇವೆ.

ಕೆಲವು ಪ್ರದೇಶಗಳಲ್ಲಿ ಜನರ ಜೀವನ ಭಯಾನಕವಾಗಿದೆ, 100ಕ್ಕೂ ಅಧಿಕ ದಿನಗಳು ಸಾರ್ವಜನಿಕ ಮುಷ್ಕರವಿರುತ್ತದೆ, ಶಾಲೆ ಮತ್ತು ಅಂಗಡಿ ಮುಂಗಟ್ಟುಗಳು ಮುಚ್ಚಿರುತ್ತವೆ, ರಸ್ತೆ ಬಂದ್ ಆಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಕೇವಲ ಎರಡು ಗಂಟೆ ವಿದ್ಯುತ್ ಪೂರೈಕೆ ಇರುತ್ತದೆ, ನೀರು ಸರಬರಾಜು ಕೂಡ ವಾರಕ್ಕೆ ಒಂದು ಅಥವಾ ಎರಡು ಬಾರಿ ಇರುತ್ತದೆ, ಸಂಜೆ ನಾಲ್ಕು ಗಂಟೆ ನಂತರ ಮಾರುಕಟ್ಟೆ ಮತ್ತು ಅಂಗಡಿಗಳು ಬಂದ್ ಆಗುತ್ತವೆ, ರಾತ್ರಿ ಎಂಟು ಗಂಟೆ ನಂತರ ಬೀದಿಗಳು ಬಿಕೋ ಎನ್ನುತ್ತಿರುತ್ತವೆ, ಯಾರ ಮೇಲೆ ಬೇಕಾದರೂ ದೌರ್ಜನ್ಯವೆಸಗಬಹುದು, ಅಪಹರಿಸಬಹುದು, ಕೆಲವು ರಾಜ್ಯಗಳಲ್ಲಿ ರಾತ್ರಿ ವೇಳೆ ಉಗ್ರಗಾಮಿಗಳು ಅಥವಾ ರಾತ್ರಿ ಪಾಳಿಯ ಪೊಲೀಸರೇ ಅಪಹರಣ ಮಾಡಿ ಕೊಂದುಹಾಕುವ ಘಟನೆಗಳೂ ವರದಿಯಾಗಿವೆ.

ದಶಕಗಳಿಂದ ಇದೇ ಸಮಸ್ಯೆಗಳು ಇದ್ದರೂ ಸಹ ಈಶಾನ್ಯ ರಾಜ್ಯಗಳ ಜನತೆ ತಮ್ಮ ಹಳ್ಳಿ, ಪಟ್ಟಣ ಮತ್ತು ನಗರಗಳಲ್ಲೇ ವಾಸಿಸುತ್ತಿದ್ದಾರೆ. ದೇಶದ ಎಲ್ಲ ನಗರಗಳಲ್ಲಿ ಜಾಗತೀಕರಣದಿಂದ ಏನೆಲ್ಲಾ ಬದಲಾವಣೆಗಳಾಗುತ್ತಿದ್ದರೂ ಅಲ್ಲಿನ ಮೂಲ ಜನರು ತಮ್ಮ ರಾಜ್ಯಗಳನ್ನು ತೊರೆದು ಹೊರಬರಲು ಬಯಸುತ್ತಿಲ್ಲ.

ಜಾಗತೀಕರಣದಿಂದಾಗಿ ಸಿಗುವ ಪ್ರಯೋಜನಗಳನ್ನು ಪಡೆಯಲು ಈಶಾನ್ಯ ಭಾಗದ ಯುವ ಜನರು, ವಿಶೇಷವಾಗಿ ಬಿಪಿಒ, ಶಾಪಿಂಗ್ ಮಾಲ್ಸ್, ಆತಿಥ್ಯ ಮತ್ತು ಉದ್ದಿಮೆಗಳಲ್ಲಿ ಉದ್ಯೋಗಾವಕಾಶಗಳನ್ನು ಅರಸಿ ವಲಸೆ ಹೋಗುತ್ತಿದ್ದಾರೆ. ಇದರ ಜೊತೆಗೆ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಉದ್ಯೋಗಾವಕಾಶಗಳ ಕೊರತೆ ಇರುವುದರಿಂದ ಈಶಾನ್ಯ ಭಾಗದ ಯುವಜನರು, ಉದ್ಯೋಗ ಅರಸಿ ಹೊರಬರುವುದು ಅನಿವಾರ್ಯವಾಗಿದೆ.






ಭಿನ್ನ ಧರ್ಮಗಳು ಮತ್ತು ಸಮುದಾಯಗಳ ನಡುವೆ ನಡೆಯುತ್ತಿರುವ ಕೋಮು ಘರ್ಷಣೆಗಳು ಮತ್ತು ಬಂಡುಕೋರರ ಹಾವಳಿಯಿಂದಾಗಿ ಸಹಸ್ರಾರು ಗ್ರಾಮಗಳು ನಾಶವಾಗಿವೆ, ಹಲವರು ಸಾವನ್ನಪ್ಪಿದ್ದಾರೆ, ಹಲವರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಇನ್ನೂ ಹಲವರು ಸ್ಥಳಾಂತರಗೊಂಡಿದ್ದಾರೆ, ಕೆಲವರು ಗೆಳೆಯರು ಮತ್ತು ಸಂಬಂಧಿಗಳ ನೆರವಿನಿಂದ ವಲಸೆ ಹೋಗುವ ಅಪಾಯ ಎದುರಿಸಿದ್ದಾರೆ. ಎಲ್ಲ ಸಮಸ್ಯೆಗಳಿಂದ ಬೇಸತ್ತ ಬಹುತೇಕ ಜನರು ಬೃಹತ್ ನಗರಗಳಾದ ದೆಹಲಿ, ಕೊಲ್ಕತ್ತಾ, ಮುಂಬೈ ಮತ್ತು ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಾರೆ. ಇದಲ್ಲದೆ, ಕೆಲವು ಈಶಾನ್ಯ ರಾಜ್ಯಗಳಲ್ಲಿ ಸಣ್ಣ ಹಾಗೂ ದೊಡ್ಡ ನದಿಗಳು ಹರಿಯುವುದರಿಂದ ಅವುಗಳು ಪ್ರವಾಹ ಪರಿಸ್ಥಿತಿಯನ್ನು ನಿರ್ಮಿಸುತ್ತವೆ ಹಾಗೂ ಆಗ್ಗಿಂದಾಗ್ಗೆ ಜಲಾವೃತ್ತಗೊಳ್ಳುತ್ತಿರುತ್ತವೆ. ಬಹುತೇಕ ಪ್ರದೇಶಗಳು ನೀರಿನ ಮುಳುಗುವುದರಿಂದ ಅಲ್ಲಿ ಸಾರಿಗೆ ಮತ್ತು ಸಂಪರ್ಕ ಸಮಸ್ಯೆಗಳು ಎದುರಾಗುವುದಲ್ಲದೆ, ಆದಾಯ ಮೂಲ ಇರುವುದಿಲ್ಲ. ಇದರಿಂದಾಗಿ ಅರ್ಹ ಮತ್ತು ವಿದ್ಯಾರ್ಹತೆ ಹೊಂದಿರುವ ಯುವಕರು ಯಾವುದೇ ಉದ್ಯೋಗ ಸಿಗದಿರುವುದರಿಂದ ಅವರು ಭವಿಷ್ಯವನ್ನು ಕಂಡುಕೊಳ್ಳಲು ಬಲವಂತವಾಗಿ ಮನೆಗಳನ್ನು ತೊರೆಯಬೇಕಾದ ಪರಿಸ್ಥಿತಿ ಎದುರಾಗುತ್ತಿದೆ.

ಆಧುನಿಕ ಸೌಕರ್ಯಗಳಾದ ವಿದ್ಯುತ್ ಮತ್ತು ಅಂತರ್ಜಾಲ ಕೊರತೆ ಇದೆ. ಕೆಲವು ಗುಡ್ಡಗಾಡು ಪ್ರದೇಶಗಳಲ್ಲಿ ಸ್ಥಳೀಯ ಪತ್ರಿಕೆಗಳೇ ಸಿಗದಂತಹ ಪರಿಸ್ಥಿತಿ ಇದೆ. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಈಶಾನ್ಯ ಭಾಗದ ಸಮಸ್ಯೆಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲದಿರುವುದೂ ಸಹ ಒಂದು ಸಮಸ್ಯೆಯೇ. ಹಾಗಾಗಿ ಈಶಾನ್ಯ ರಾಜ್ಯಗಳಿಂದ ವಲಸೆ ಬರುವವರಿಗೆ ವಸತಿ



ಮತ್ತು ಜೀವನೋಪಾಯ ನೀಡಲು ರಾಜಧಾನಿ ದೆಹಲಿ ಸೂಕ್ತ ತಾಣ ಎಂದು ಪರಿಗಣಿಸಲಾಗುತ್ತಿದೆ.

ಈಶಾನ್ಯ ಭಾಗದಿಂದ ಜನರು ದೇಶದ ಇತರೆಡೆ ವಲಸೆ ಹೋಗುವುದನ್ನು ತಗ್ಗಿಸಬೇಕಾದರೆ, ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಮತ್ತು ಆಮೂಲಾಗ್ರ ಬದಲಾವಣೆ ಆಗಬೇಕಿದೆ. ಕೈಗಾರಿಕಾ ತರಬೇತಿ, ಗುಣಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಾಗೂ ಉದ್ಯಮಕ್ಕೆ ಪೂರಕವಾದ ಮಾನವ ಸಂಪನ್ಮೂಲ ಸೃಷ್ಟಿಗೆ ಒತ್ತು ನೀಡಬೇಕಾಗಿದೆ. ಆ ಭಾಗದಲ್ಲಿ ಉದ್ಯೋಗಾವಕಾಶ ಸೃಜಿಸುವ ದರವನ್ನು ಹೆಚ್ಚಿಸಲು ಕಾರ್ಪೊರೇಟ್ ಕಂಪನಿಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದಡಿ ತಾಂತ್ರಿಕ ಮತ್ತು ತಾಂತ್ರಿಕೇತರ ಸಂಸ್ಥೆಗಳನ್ನು ತೆರೆದು ಅಲ್ಲಿ ಶಿಕ್ಷಣ ನೀಡಲು ಮುಂದಾಗಬೇಕು.

ಮೇಕ್ ಇನ್ ಇಂಡಿಯಾ ಮತ್ತು ನವೋದ್ಯಮ ಮಾದರಿಯ ಅವಕಾಶಗಳನ್ನು ಸೃಷ್ಟಿಸಿಕೊಂಡು ಈಶಾನ್ಯ ಭಾಗದಲ್ಲಿ ಉದ್ಯೋಗಾವಕಾಶ ಸೃಷ್ಟಿಗೆ ಇರುವ ಹರವನ್ನು ಗಮನಿಸಿದರೆ ಈಶಾನ್ಯ ರಾಜ್ಯಗಳು ಭವಿಷ್ಯದಲ್ಲಿ ಎದುರಾಗುವ ಉದ್ಯೋಗಾವಕಾಶಗಳ ಬೇಡಿಕೆಗೆ ಸಜ್ಜಾಗಬೇಕು.

ಪ್ರಾಥಮಿಕ, ದ್ವಿತೀಯ ಮತ್ತು ಸೇವಾ ವಲಯಗಳಲ್ಲಿ ಹಾಗೂ ಖನಿಜ, ಅರಣ್ಯ, ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಮೀನುಗಾರಿಕೆ, ರೇಷ್ಮೆ, ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗಲಿವೆ. ಅದಕ್ಕಾಗಿ ಈಶಾನ್ಯ ರಾಜ್ಯಗಳ ಪಠ್ಯಕ್ರಮದತ್ತ ಗಮನ ಕೇಂದ್ರೀಕರಿಸುವ ಅಗತ್ಯವಿದೆ. ಜತೆಗೆ ಶಿಕ್ಷಕರಿಗೆ ತರಬೇತಿ ನೀಡುವುದು, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವೃತ್ತಿಪರ ತರಬೇತಿ ನೀಡುವುದು, ಅತ್ಯಾಧುನಿಕ ತರಬೇತಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ.

ಈಶಾನ್ಯ ರಾಜ್ಯಗಳ ಬಹುದೊಡ್ಡ ಶಕ್ತಿ ಎಂದರೆ ಬಹುತೇಕ ಜನ ಇಂಗ್ಲಿಷ್ ಮಾತನಾಡುವುದು, ಸಾಂಸ್ಕೃತಿಕವಾಗಿ ಭಿನ್ನತೆ ಇದ್ದರೂ ಹೆಚ್ಚಿನ ಸಾಕ್ಷರತೆ ಇಲ್ಲಿನ ಜನರಲ್ಲಿದೆ, ಹಾಗಾಗಿ ಇಲ್ಲಿ ಬೇಕಾಗಿರುವುದು ಕ್ರಿಯೆಯೇ ಹೊರತು ಅಧ್ಯಯನವಲ್ಲ, ಇತ್ತೀಚಿನ ವರ್ಷಗಳಲ್ಲಿ ಹಲವು ಸಂಘಟನೆಗಳು ನಡೆಸಿದ ಅಧ್ಯಯನಗಳು, ಸಮಾವೇಶಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಕಮ್ಮಟಗಳು ನಿಗದಿತ ಫಲ ನೀಡುವಲ್ಲಿ ವಿಫಲವಾಗಿವೆ ಮತ್ತು ಸಂಪನ್ಮೂಲಗಳ ನಷ್ಟವಾಗುವುದನ್ನು ತಪ್ಪಿಸಲೂ ಸಹ ಆಗಿಲ್ಲ. ಈಗ ಬೇಕಾಗಿರುವುದು ಸರಿಯಾದ ದಿಕ್ಕಿನಲ್ಲಿ ನಡೆಯಲು ಸರಿಯಾದ ಕಾರ್ಯತಂತ್ರ, ಸರ್ಕಾರದ ವಿವಿಧ ಇಲಾಖೆಗಳ ಮಟ್ಟದಲ್ಲಿ, ಐಸಿಸಿ, ಎಫ್‌ಐಸಿಸಿಐ, ಫೈನರ್ ಮತ್ತಿತರ ನಾಗರಿಕ ಸಂಘಟನೆಗಳು ಈಶಾನ್ಯ ರಾಜ್ಯಗಳನ್ನು ವಿಶ್ವದ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ತಾಣವನ್ನಾಗಿ ರೂಪುಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ. ಅದಕ್ಕಾಗಿ ನಮಗೆ ಬೇಕಾಗಿರುವುದು, ಸಮಗ್ರ ಯೋಜನೆ ಮತ್ತು ಕಾರ್ಯತಂತ್ರ. ಪ್ರಮುಖ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸಲು ಕೈಗೊಂಡಿರುವ ಮೂಲಸೌಕರ್ಯ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಹಲವು ಆಯಾಮದ ಕಾರ್ಯತಂತ್ರಗಳನ್ನು ಅನುಸರಿಸಬೇಕಿದೆ. ಟ್ರೆಕ್ಕಿಂಗ್ ಮತ್ತು ಇ-ಟೂರಿಸಂ, ಜೀವವೈವಿಧ್ಯ ಟೂರಿಸಂ ಉತ್ತೇಜನಕ್ಕೆ ವೈಹೆಚ್‌ಎ ಅಂತಹ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ. ಇದಲ್ಲದೆ ಸಾಹಸ ಕ್ರೀಡೆಗಳಿಗೆ ಅತ್ಯುತ್ತಮವಾದ ಸ್ಥಳಗಳಿದ್ದು, ಅದನ್ನು ಬಳಸಿಕೊಂಡು ವೃತ್ತಿಪರ ಸಾಹಸಿಗಳ ಸಹಾಯದಿಂದ ಸಾಹಸ ಕ್ರೀಡಾ ತಾಣವನ್ನಾಗಿ ರೂಪುಗೊಳಿಸಲು ಸಹ ಅವಕಾಶಗಳಿವೆ. ಈಶಾನ್ಯ ಭಾಗದಲ್ಲಿ ಪ್ರವಾಸೋದ್ಯಮವನ್ನು ಸುಸ್ಥಿರ ರೀತಿಯಲ್ಲಿ ಉತ್ತೇಜಿಸಲು ಈಶಾನ್ಯ ಪ್ರವಾಸೋದ್ಯಮ ನೀತಿಯನ್ನು ರೂಪಿಸಬೇಕಾಗಿದೆ. ಆ ಮೂಲಕ ಗೋವಾ ಮತ್ತು ಕೇರಳ ಮಾದರಿಯಲ್ಲಿ ಈಶಾನ್ಯ ಭಾಗದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬಹುದಾಗಿದೆ. ಇದಲ್ಲದೆ ಕೆಲವೊಂದು ಸಾಂಸ್ಥಿಕ ಸಮಸ್ಯೆಗಳಿವೆ, ಸಮುದಾಯ ಆಧರಿತ ಸಂಸ್ಥೆಗಳಿಗೆ ಸ್ಥಳೀಯ ಅವಕಾಶಗಳನ್ನು ಬಳಸಿಕೊಂಡು ಉದ್ದಿಮೆಗಳನ್ನು ನಡೆಸಲು ಪರಿಣಾಮಕಾರಿ ಸಾಲ ವಿತರಣಾ ಪದ್ಧತಿಯನ್ನು ಜಾರಿಗೊಳಿಸಬೇಕಿದೆ. ಸಾಂಪ್ರದಾಯಿಕ ದೇಸಿ ಮಾರುಕಟ್ಟೆ ಹೊಂದಿರುವ ಈಶಾನ್ಯ ಭಾಗ ನೆರೆ ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ಗಳೊಂದಿಗೆ ಸಂಪರ್ಕ ಹೊಂದಿದ್ದು, ಉತ್ತಮ ಅವಕಾಶಗಳಿವೆ, ಈ ಭಾಗ ದಕ್ಷಿಣ ಪೂರ್ವ ಏಶಿಯಾ ರಾಷ್ಟ್ರಗಳಿಗೆ ಹೆಬ್ಬಾಗಿಲಾಗಿದೆ.

ಹಣಕಾಸು ಸಂಸ್ಥೆಗಳೂ ಸಹ ಅವಕಾಶಗಳನ್ನು ಬಳಸಿಕೊಂಡು ತಮ್ಮ ವಹಿವಾಟನ್ನು ವಿಸ್ತರಿಸಿಕೊಳ್ಳುವ ಮೂಲಕ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕಾಗಿದೆ. ಆರ್ಥಿಕ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಲು ಕಾಫಿ, ಟೀ, ವೈದ್ಯಕೀಯ ಸಸ್ಯಗಳು, ತೋಟಗಾರಿಕಾ ಉತ್ಪನ್ನಗಳು ಮತ್ತು ಸುಗಂಧಿತ ದ್ರವ್ಯಗಳಿಗೆ ಪ್ರತ್ಯೇಕ ವಿಶೇಷ ವಿತ್ತ ವಲಯಗಳನ್ನು ಸ್ಥಾಪಿಸಬೇಕು, ಅಲ್ಲದೆ ಈ ವ್ಯವಸ್ಥೆಯನ್ನು ಬೆಂಬಲಿಸಲು ಸಂಶೋಧನಾ ಮತ್ತು ಅಭಿವೃದ್ಧಿ ಕೆಲಸವನ್ನು ಕೈಗೊಳ್ಳಬೇಕು, ಬೇಡಿಕೆಗಳಿಗೆ ತಕ್ಕಂತೆ ತಂತ್ರಜ್ಞಾನ ಆಧಾರಿತ ಸಣ್ಣ ಉದ್ದಿಮೆಗಳ ಸ್ಥಾಪನೆಗೆ ಮುಂದಾಗಬೇಕು. ಪರಿಣಾಮಕಾರಿ ಪೂರೈಕೆ ವ್ಯವಸ್ಥೆಗೆ ಅಗತ್ಯವಾದ ಮಾರುಕಟ್ಟೆ ವ್ಯವಸ್ಥೆಯನ್ನೂ ಸಹ ರೂಪಿಸಬೇಕು ಮತ್ತು ಅದಕ್ಕಾಗಿ ಐಐಎಂ ಶಿಲ್ಲಾಂಗ್‌ನಂತಹ ಪರಿಣಿತ ಸಂಸ್ಥೆಯ ಸಹಾಯ ಪಡೆಯಬೇಕು.

ಇದೆಲ್ಲದಕ್ಕೂ ಮುಖ್ಯವಾಗಿ, ರಾಜಕೀಯ ಬದ್ಧತೆ, ಅಧಿಕಾರಶಾಹಿ ಬೆಂಬಲ ಮತ್ತು ಬದ್ಧತೆ, ಉತ್ತಮ ಆಡಳಿತ ಮತ್ತು ಖಾಸಗಿ, ಸಾರ್ವಜನಿಕ ಜನರ ಸಹಭಾಗಿತ್ವ (ಪಿಪಿಪಿ) ಮಾದರಿಯನ್ನು ಅನುಸರಿಸಬೇಕಾಗಿದೆ. ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರಸ್ತುತ ಇರುವ ಶೈಕ್ಷಣಿಕ ವ್ಯವಸ್ಥೆಯನ್ನು ಸದೃಢಗೊಳಿಸಬೇಕಿದೆ. ಆ ಮೂಲಕ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಈಶಾನ್ಯ ಭಾಗಗಳಿಂದ ಜನರು ವಲಸೆ ಹೋಗುವುದನ್ನು ತಪ್ಪಿಸುವುದರ ಜತೆಗೆ ಬಂಡುಕೋರರ ಸಮಸ್ಯೆಗಳನ್ನೂ ಸಹ ಹತ್ತಿಕ್ಕಬಹುದಾಗಿದೆ. ❑

# ಈಶಾನ್ಯ : ಆರೋಗ್ಯ ಮತ್ತು ಲಿಂಗ ದೃಷ್ಟಿಕೋನ

* ಡಾ. ಅರುಣಾ ಭಟ್ಟಾಚಾರ್ಯ ಚಕ್ರವರ್ತಿ



**ಕಡಿದಾದ ಭೂ ಪ್ರದೇಶ ಮತ್ತು ಸಾರಿಗೆ-ಸಂವಹನ ಸಮಸ್ಯೆಗಳನ್ನು ಈ ಪ್ರದೇಶದಲ್ಲಿ ಕುಂಠಿತ ಅಭಿವೃದ್ಧಿಗೆ ಕಾರಣವಾಗಿ ನೀಡುತ್ತಾ ಬರಲಾಗಿದೆ. ಈ ವಿಚಾರದಲ್ಲಿ ಮತ್ತಷ್ಟು ಆಳಕ್ಕೆ ಇಳಿಯುವುದಾದರೆ, ಕುಂಠಿತ ಅಭಿವೃದ್ಧಿಗೆ ಕಾರಣವಾಗುತ್ತಿರುವ ಹಲವಾರು ಅಂಶಗಳು ಕಾಣಸಿಗುತ್ತವೆ.**

ಅಭಿವೃದ್ಧಿ ಕುರಿತಾದ ಯಾವುದೇ ಒಂದು ಚರ್ಚೆಯು ಅದರ ವಿವಿಧ ಆಯಾಮಗಳು, ವ್ಯಾಪ್ತಿ, ಪ್ರಧಾನ ಅಂಶಗಳು, ಮೂಲಾಂಶಗಳು ಮತ್ತು ಅವುಗಳ ಅಲ್ಪಕಾಲೀನ ಹಾಗೂ ದೀರ್ಘಕಾಲೀನ ಪರಿಣಾಮಗಳು – ಈ ಎಲ್ಲ ವಿಚಾರಗಳ ಒಟ್ಟಾರೆ ಗ್ರಹಿಕೆಯನ್ನು ಒಳಗೊಂಡಿರಬೇಕು. ಇದು ನಿಜಕ್ಕೂ ಜಟಿಲವಾದ ವಿಚಾರ. ಸೂಕ್ತ ಸಮಯದಲ್ಲಿ, ಸೂಕ್ತ ಸ್ಥಳಗಳಲ್ಲಿ, ಸೂಕ್ತ ರೀತಿಯ ಸಾಧನೆ ಮಾಡಲು ಮತ್ತು ಅದಕ್ಕೆ ಬೇಕಾದ ಯೋಜನೆ ತಯಾರಿಸಲು ಇಲ್ಲಿ ನೈಪುಣ್ಯ ಮತ್ತು ದೂರದೃಷ್ಟಿಯ ಅಗತ್ಯವಿರುತ್ತದೆ.

ಅತಿ ಹೆಚ್ಚು ಸಂಖ್ಯೆಯ ಯುವ ಜನತೆಯನ್ನು ಹೊಂದಿರುವ ಭಾರತದಂತಹ ದೇಶದಲ್ಲಿ, ಶಿಕ್ಷಣ ಮತ್ತು ಆರೋಗ್ಯ ಪ್ರಮುಖ ಅಭಿವೃದ್ಧಿ ಸೂಚ್ಯಂಕಗಳು. ಹೀಗಾಗಿ ಈ ಕ್ಷೇತ್ರಗಳತ್ತ ದೂರಗಾಮಿ ದೃಷ್ಟಿ ಹರಿಸುವುದು ಅಗತ್ಯವಾಗಿದೆ. 'ಆರ್ಥಿಕ ಅಭಿವೃದ್ಧಿಯ ಸುಸ್ಥಿರತೆಯನ್ನು ಕಾಪಾಡಬೇಕಾದರೆ, ನಿಮಗೆ ಸುಶಿಕ್ಷಿತ ಮತ್ತು ಆರೋಗ್ಯವಂತ ಕಾರ್ಯಪಡೆ ಅಗತ್ಯ' ಎಂದು ಹೇಳುವ ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಶ್ರೀ ಅಮರ್ತ್ಯ ಸೇನ್ ಅವರ ಮಾತಿನಲ್ಲೂ ಇದೇ ಅರ್ಥ ಪ್ರತಿಧ್ವನಿಸುತ್ತದೆ.

ನಿಜಕ್ಕೂ ಭಾರತ ತನ್ನ ದೀರ್ಘಾವಧಿ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಯಶಸ್ಸು ಗಳಿಸಲು ಬಯಸುವುದಾದರೆ, ಯುವ ಜನತೆಗೆ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ಒದಗಿಸುವತ್ತ ತನ್ನ ನಿಧಿಗಳನ್ನು ವಿವೇಚನೆಯಿಂದ ಬಳಸಬೇಕಾಗುತ್ತದೆ.

### ಈಶಾನ್ಯದತ್ತ ಚಿತ್ತ

ಅಭಿವೃದ್ಧಿ ಆಯಾಮಗಳ ವಿಚಾರದಲ್ಲಿ ಈಶಾನ್ಯ ಭಾರತದಲ್ಲೂ ಯಾವುದೇ ಸೈದ್ಧಾಂತಿಕ ವ್ಯತ್ಯಾಸ ಕಾಣಸಿಗುವುದಿಲ್ಲ. ಆದರೆ, ಈ ಪ್ರದೇಶದ ವಿಚಾರವನ್ನು ನಾವು ಪ್ರಸ್ತಾಪಿಸುವಾಗ ಈ ಚರ್ಚೆಯು ವಿಶಿಷ್ಟ ತಿರುವು ಪಡೆದುಕೊಳ್ಳುತ್ತದೆ.

ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೊರಾಂ, ನಾಗಾಲ್ಯಾಂಡ್, ತ್ರಿಪುರಾ ಮತ್ತು ಸಿಕ್ಕಿಂ – ಈ ರಾಜ್ಯಗಳನ್ನು ಈಶಾನ್ಯ ಭಾರತ ಪ್ರದೇಶ ಒಳಗೊಂಡಿದೆ. ಸಂಕೀರ್ಣ ಭೌಗೋಳಿಕ-ರಾಜಕೀಯ ಪ್ರದೇಶದಲ್ಲಿ ನೆಲೆಸಿರುವ ಈ ಪ್ರಾಂತ್ಯವು 2000 ಕಿಲೋ ಮೀಟರ್‌ಗಿಂತಲೂ ಮಿಗಿಲಾದ ತನ್ನ ಗಡಿಯುದ್ದಕ್ಕೂ ಭೂತಾನ್, ಚೀನಾ, ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಕೇವಲ 20 ಕಿ.ಮೀ. ಅಗಲದ ಭೂಭಾಗವು ಈಶಾನ್ಯ ರಾಜ್ಯ ಪ್ರದೇಶಕ್ಕೆ ಭಾರತದೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಜನಾಂಗ ಮತ್ತು ಭಾಷೆಗಳ ದೃಷ್ಟಿಯಿಂದ ಭಾರತದಲ್ಲೇ ಅತ್ಯಂತ ವೈವಿಧ್ಯಮಯವೆನಿಸಿರುವ ಈ ಪ್ರದೇಶದಲ್ಲಿ, ಪ್ರತಿ ರಾಜ್ಯವೂ ವಿಭಿನ್ನ ಸಂಸ್ಕೃತಿ, ಸಂಪ್ರದಾಯಗಳನ್ನು ಹೊಂದಿದೆ. ಈಶಾನ್ಯ ಭಾರತವು 166ಕ್ಕೂ ಹೆಚ್ಚು ಜನಾಂಗಗಳು ಮತ್ತು ಅಪಾರ ಸಂಖ್ಯೆಯ ಭಾಷೆಗಳ ತವರಾಗಿದೆ. ಇಲ್ಲಿನ ಹಚ್ಚಹಸಿರು ಭೌಗೋಳಿಕ ಮೇಲ್ಮೈ, ವಿಭಿನ್ನ ಸಮುದಾಯಗಳು, ಭೌಗೋಳಿಕ ಮತ್ತು ಪ್ರಾಕೃತಿಕ ವೈವಿಧ್ಯತೆಗಳು ಈಶಾನ್ಯ ರಾಜ್ಯ ಪ್ರದೇಶವನ್ನು ದೇಶದ ಇತರ ಭಾಗಗಳಿಗಿಂತ ಭಿನ್ನವಾಗಿಸಿವೆ. ಇಲ್ಲಿರುವ

* ಪ್ರಾಧ್ಯಾಪಕರು, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್-ದೆಹಲಿ. Email : aruna.bhattacharya@iiphd.org

ಸ್ಥಳವಿಶೇಷ, ಜನಸಂಖ್ಯೆ, ಭಾಷೆ ಹಾಗೂ ಭೌಗೋಳಿಕ–ರಾಜಕೀಯ ಅಂಶಗಳು ಸಹ ಈಶಾನ್ಯ ಪ್ರಾಂತ್ಯವನ್ನು ಭಾರತದ ಇತರ ಪ್ರಮುಖ ಪ್ರದೇಶಗಳಿಗಿಂತ ವಿಶಿಷ್ಟ ಹಾಗೂ ಪ್ರತ್ಯೇಕವಾಗಿಸಿವೆ. ಈ ಎಲ್ಲಾ ಅಂಶಗಳಿಂದ ಉಂಟಾಗಿರುವ ಅಂತರವು, ಈಶಾನ್ಯ ರಾಜ್ಯಗಳು ಹಾಗೂ ಒಟ್ಟಾರೆ ಭಾರತದ ಅಭಿವೃದ್ಧಿಯ ಮೇಲೆ ವಿವಿಧ ಹಂತಗಳಲ್ಲಿ ಪರಿಣಾಮ ಬೀರುತ್ತಿದೆ.

### ಈಶಾನ್ಯದ ಸಮಸ್ಯೆ ಏನು?

ಕಡಿದಾದ ಭೂ ಪ್ರದೇಶ ಮತ್ತು ಸಾರಿಗೆ–ಸಂವಹನ ಸಮಸ್ಯೆಗಳನ್ನು ಈ ಪ್ರದೇಶದಲ್ಲಿ ಕುಂಠಿತ ಅಭಿವೃದ್ಧಿಗೆ ಕಾರಣವಾಗಿ ನೀಡುತ್ತಾ ಬರಲಾಗಿದೆ. ಈ ವಿಚಾರದಲ್ಲಿ ಮತ್ತಷ್ಟು ಆಳಕ್ಕೆ ಇಳಿಯುವುದಾದರೆ, ಕುಂಠಿತ ಅಭಿವೃದ್ಧಿಗೆ ಕಾರಣವಾಗುತ್ತಿರುವ ಹಲವಾರು ಅಂಶಗಳು ಕಾಣಸಿಗುತ್ತವೆ. ಸುಂದರ ಭೌಗೋಳಿಕ ಪ್ರದೇಶದ ಹೊರತಾಗಿಯೂ ಆಂತರಿಕವಾಗಿ ಮತ್ತು ಬಾಹ್ಯವಾಗಿ ಉದ್ಭವವಾಗುವ ಸಾಮಾಜಿಕ–ರಾಜಕೀಯ ಕಾರಣಗಳಿಂದಾಗಿ ಈ ಪ್ರದೇಶವು ಕೈಗಾರಿಕೆಗಳ ಸ್ಥಾಪನೆ, ಹೂಡಿಕೆಗಾಗಿ ಉದ್ಯಮಿಗಳನ್ನು ಆಕರ್ಷಿಸುವಲ್ಲಿ ವಿಫಲವಾಗಿದೆ. ಪರಿಣಾಮವಾಗಿ, ಸುಸ್ಥಿರ ಅಭಿವೃದ್ಧಿಗೆ ಅತ್ಯಗತ್ಯವೆನಿಸಿರುವ ಮೂಲಸೌಕರ್ಯ ಅಭಿವೃದ್ಧಿಯೇ ಇಲ್ಲಿ ಸೊರಗಿಹೋಗಿದೆ. ಈಶಾನ್ಯ ರಾಜ್ಯಗಳಲ್ಲಿ ಅಭಿವೃದ್ಧಿಗಾಗಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಲ್ಲಿ ರಾಜಕೀಯ ನಿರುತ್ಸಾಹವೂ ಮೂಲಸೌಕರ್ಯ ಕೊರತೆಗೆ ಮತ್ತೊಂದು ಕಾರಣವಾಗಿದೆ. ಇದರಿಂದಾಗಿ ಇಲ್ಲಿ ಉತ್ಕೃಷ್ಟತೆಯ ಬದಲಿಗೆ ಕಳಪೆಯೇ ಹೆಚ್ಚಾಗಿದೆ. ಪ್ರಮುಖ ರಾಜಕೀಯ ನಾಯಕರು ತೋರುವ ಉದಾಸೀನ ಧೋರಣೆಯಿಂದಾಗಿ, ಈ ಭಾಗದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದ್ದು, ಭ್ರಷ್ಟಾಚಾರ ಇದಕ್ಕೆ ಮತ್ತಷ್ಟು ನೀರೆರೆಯುತ್ತಿದೆ. ಸಾಮಾಜಿಕ ನ್ಯಾಯ ಮರೀಚಿಕೆಯಾಗಿದೆ. ಇಂತಹ ಪರಿಸ್ಥಿತಿಗಳು ಜನರ ಮೇಲೆ ಅದರಲ್ಲೂ ಸುಲಭವಾಗಿ ಪ್ರಭಾವಕ್ಕೆ ಒಳಗಾಗಬಲ್ಲ ಯುವಜನರು ಹಾಗೂ ಅವರ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ನೊಬೆಲ್ ಪುರಸ್ಕೃತ ಸಾಹಿತಿ ಪರ್ಲ್ ಎಸ್. ಬಕ್ ಅವರ ಪ್ರಕಾರ "ಯುವಕರಲ್ಲಿ ಯುಕ್ತಾಯುಕ್ತ ಪರಿಜ್ಞಾನ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದರಿಂದ ಅವರು ಅಸಾಧ್ಯವಾದುದನ್ನು ಮಾಡಲು ಪ್ರಯತ್ನಿಸುತ್ತಾರೆ, ತಲೆಮಾರಿನಿಂದ ತಲೆಮಾರಿಗೆ ಇದು ಹೀಗೆಯೇ ಮುಂದುವರೆಯುತ್ತಿದೆ".

### ಮಾದಕ ವಸ್ತು ಬಳಕೆ

ಅಂತಾರಾಷ್ಟ್ರೀಯ ಗಡಿಗಳಿಗೆ ಹೊಂದಿಕೊಂಡಿರುವಂತಹ ಪ್ರತಿಕೂಲ ಪರಿಸ್ಥಿತಿ ಹಾಗೂ ಕುಖ್ಯಾತ 'ಗೋಲ್ಡನ್ ಟ್ರಯಾಂಗಲ್'ಗೆ ಸಾಮಿಪ್ಯದ ಹಿನ್ನೆಲೆಯಲ್ಲಿ ದೇಶದ ಇತರ ಭಾಗಗಳಿಗೆ ಹೋಲಿಸಿದರೆ ಈಶಾನ್ಯ ರಾಜ್ಯಗಳು ಅತಿ ಹೆಚ್ಚು ಮಾದಕ ದ್ರವ್ಯದ ಹಾವಳಿಗೆ ಗುರಿಯಾಗಿವೆ (ಗುರಿಯಾಗುತ್ತಿವೆ). ಇತ್ತೀಚಿನ ವರ್ಷಗಳಲ್ಲಿ, ಇಂಜೆಕ್ಷನ್ ಮೂಲಕ ಮಾದಕ ದ್ರವ್ಯ ದೇಹಕ್ಕೆ ಸೇರಿಸಿಕೊಳ್ಳುವ ವ್ಯಸನಿಗಳು, ಅತಿ ಹೆಚ್ಚು ಪ್ರಮಾಣದಲ್ಲಿ 'ಎಚ್‌ಐವಿ'





ಸೋಂಕಿನ ಸಂಭವನೀಯತೆಗೆ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಿದ್ದಾರೆ. ಮಾದಕ ಪದಾರ್ಥ ಬಳಕೆಯು ಒಂದು ಸಂಕೀರ್ಣ ವಿಷಯ. ಲೈಂಗಿಕ ಜಾಲ ಮತ್ತು ಡ್ರಗ್ ಇಂಜೆಕ್ಟಿಂಗ್ ಜಾಲಗಳ ನಡುವೆ ಪರಸ್ಪರ ಅತಿವ್ಯಾಪನೆ ಇದೆ. ಮಾದಕ ವಸ್ತುವಿನ ಬಗೆ, ಅವುಗಳ ಸರಬರಾಜು, ಹಾನಿ ನಿಯಂತ್ರಣ ಸೇವೆ ಹಾಗೂ ಅವುಗಳ ಲಭ್ಯತೆ ಕುರಿತು ತಿಳಿವಳಿಕೆ, ಸಾಮಾಜಿಕ, ರಚನಾತ್ಮಕ, ರಾಜಕೀಯ–ಕಾನೂನು ಸಂವಹನ – ಹೀಗೆ ಇಂತಹ ಪ್ರತಿಯೊಂದು ಅಂಶಗಳೂ ಮಾದಕ ವ್ಯಸನಿಯ ಜೀವನದಲ್ಲಿ ಮಾದಕ ಪದಾರ್ಥ ಬಳಕೆಯ ಆಯಾಮಗಳ ಬಗ್ಗೆ ಸಂಕೀರ್ಣತೆ ಹೆಚ್ಚಿಸಲು ಕಾರಣವಾಗಬಲ್ಲವು. ಭಾರತದಲ್ಲಿ 180,000 ಮಂದಿ ಇಂಜೆಕ್ಷನ್ ಮೂಲಕ ಮಾದಕ ದ್ರವ್ಯ ಸೇವಿಸುವ ವ್ಯಸನಿಗಳಿದ್ದಾರೆ. ಈ ಪೈಕಿ ಬಹುಸಂಖ್ಯಾತರು ಸೂಜಿ ಮತ್ತು ಸಿರಿಂಜ್‌ಗಳನ್ನು ಪರಸ್ಪರ ಹಂಚಿಕೊಳ್ಳುವಂತಹ ಅಸುರಕ್ಷಿತ ಅಭ್ಯಾಸ ರೂಢಿಸಿಕೊಂಡಿದ್ದಾರೆ. ಇದೇ ವೇಳೆ, ಈ ಜಾಲವು ಅಸುರಕ್ಷಿತ ಲೈಂಗಿಕ ವರ್ತನೆಯಿಂದಾಗಿಯೂ ಅಪಾಯಕ್ಕೆ ಸಿಲುಕಿದೆ. ಈ ರೀತಿಯ ಅಪಾಯಕಾರಿ ನಡವಳಿಕೆಗಳು 'ಎಚ್‌ಐವಿ' ಸೋಂಕಿನ ತ್ವರಿತ ಹಬ್ಬುವಿಕೆಗೆ ಕಾರಣವಾಗಿದೆ. ಲಿಂಗ, ಮಾದಕ ಪದಾರ್ಥ ಮತ್ತು ಆರೋಗ್ಯ ವಿಚಾರಗಳ ಪರಸ್ಪರ ಅತಿವ್ಯಾಪನೆ: ಪುರುಷ ಪ್ರಧಾನ ಸಾಮಾಜಿಕ ರಚನೆ, ಅದರಲ್ಲೂ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದಿಂದಾಗಿ ಮಾದಕ ಪದಾರ್ಥ ಬಳಕೆಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರ ಅವರಿಗೆ ಸವಾಲಾಗಿ ಪರಿಣಮಿಸಿದೆ. ಮಹಿಳೆಯರೊಂದಿಗೆ ಸುರಕ್ಷಿತ ಲೈಂಗಿಕತೆ ಕಾಯ್ದುಕೊಳ್ಳುವ ಸಲುವಾಗಿ ಮನವೊಲಿಕೆ ಮಾಡುವಲ್ಲಿ ಮಹಿಳೆಯರು ಮತ್ತು ಪುರುಷರ ಸಾಮಾಜಿಕ ಸಹಭಾಗಿತ್ವ ಮತ್ತು ಅವರು ಹೊಂದಿರುವ ಪ್ರಭಾವದಲ್ಲಿ ಭಾರಿ ಅಂತರವಿದೆ. ಪ್ರಸ್ತುತ ಈ ಸಮುದಾಯಗಳಲ್ಲಿ ಇರುವ ಐಇಸಿ/ಬಿಸಿಸಿ (ಮಾಹಿತಿ–ಶಿಕ್ಷಣ–ಸಂವಹನ ಮತ್ತು



ನಡವಳಿಕೆ ಬದಲಾವಣೆ ಸಂವಹನ) ಮಟ್ಟವು, ಮಹಿಳೆಯರಿಗೆ ತಮ್ಮನ್ನು ತಾವು ಹಾನಿಯಿಂದ ರಕ್ಷಿಸಿಕೊಳ್ಳಲು ಅನುಸರಿಸಬೇಕಾದ ಮುಂಜಾಗೃತಾ ಕ್ರಮಗಳ ಆಯ್ಕೆಗೆ ಸಮರ್ಥರನ್ನಾಗಿಸಿಲ್ಲ. ಹಾನಿ ನಿಯಂತ್ರಣ ಆಂದೋಲನದ ಅಡಿಯಲ್ಲಿ, ಐಇಸಿ/ಬಿಸಿಸಿ ಮಟ್ಟ ಹೆಚ್ಚಳಕ್ಕೆ ಕಾರ್ಯತಂತ್ರಗಳನ್ನು ರಚಿಸುವ ಸದಾವಕಾಶವಿದ್ದು, ಇದರಿಂದ ಮಹಿಳೆಯರನ್ನು ಲೈಂಗಿಕ ಸೋಂಕು (ಎಸ್‌ಟಿಐ) / 'ಎಚ್‌ಐವಿ'ಯಿಂದ ರಕ್ಷಿಸಲು ಮತ್ತು ಅವರ ಸಂತಾನೋತ್ಪತ್ತಿ ಸಂಬಂಧಿತ ಆರೋಗ್ಯ ಕಾಪಾಡಲು ನೆರವಾಗಲಿದೆ. ಇದಿಷ್ಟೇ ಅಲ್ಲದೆ, ಇಂಜೆಕ್ಷನ್ ಮೂಲಕ ಮಾದಕ ಪದಾರ್ಥ ಸೇವಿಸುವ ಮಹಿಳೆಯರು (ಎಫ್‌ಐಡಿಯು) ಮತ್ತು ಮಹಿಳಾ ಲೈಂಗಿಕ ಕಾರ್ಯಕರ್ತರು (ಎಫ್‌ಎಸ್‌ಡಬ್ಲ್ಯು) ಸಮಾಜದಲ್ಲಿ ಮತ್ತಷ್ಟು ಹೆಚ್ಚಿನ ಕಳಂಕ ಮತ್ತು ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಹಾನಿ ನಿಯಂತ್ರಣ ಕ್ರಮಗಳನ್ನು ಸಮಗ್ರ ಮಟ್ಟದಲ್ಲಿ ಸಮುದಾಯದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುವುದಾದರೆ, ಸಮುದಾಯಗಳು, ಕಾರ್ಯಕರ್ತರು ಹಾಗೂ ಕಾರ್ಯಕ್ರಮದ ಇತರ ಸಹಭಾಗಿಗಳಲ್ಲಿ 'ಇಂಜೆಕ್ಷನ್ ಮೂಲಕ ಮಾದಕ ಪದಾರ್ಥ ಸೇವಿಸುವ ಮಹಿಳೆಯರ' (ಎಫ್‌ಐಡಿಯು) ಸಮಸ್ಯೆಗಳ ಬಗ್ಗೆ ಸಂವೇದನೆ ಮೂಡಿಸುವುದು ಅತ್ಯಗತ್ಯ ಎಂಬುದು ನಮ್ಮ ಅಭಿಪ್ರಾಯ.

ಪರಿಸ್ಥಿತಿ ಸುಧಾರಣೆಗೆ ಏನು ಮಾಡಬಹುದು? ಜನಜಾಗೃತಿ, ಸಲಹೆ ಮತ್ತು ಮಾದಕ ಪದಾರ್ಥ ಬಳಕೆ ಕುರಿತ ಸಾರ್ವಜನಿಕ ಚರ್ಚೆ, ಇಂಜೆಕ್ಷನ್ ಮೂಲಕ ಮಾದಕ ಪದಾರ್ಥ ಸೇವಿಸುವ ಜಾಲ ಮತ್ತು ಲೈಂಗಿಕ ಜಾಲಗಳಿಂದ ತೊಂದರೆಗೀಡಾದವರಿಗೆ ಆರೋಗ್ಯ ಸೌಲಭ್ಯಗಳ ಒದಗಿಸುವಂತಹ ಕ್ರಮಗಳಿಗೆ ಒತ್ತು ನೀಡಬೇಕು.

ಇಂಜೆಕ್ಷನ್ ಮೂಲಕ ಮಾದಕ ಸೇವನೆ ವಿಷಯದಲ್ಲಿ ಹಾನಿ ನಿಯಂತ್ರಣ ಕಾರ್ಯಕ್ರಮ ಜಾರಿಗೊಳಿಸುವುದಾದರೆ, ಅದಕ್ಕೆ ಬಹುಮುಖಿ ಕ್ರಮಗಳನ್ನು ಅನುಸರಿಸುವುದು ಅತ್ಯಗತ್ಯ. ವೈದ್ಯಕೀಯ, ಮನಃಶಾಸ್ತ್ರೀಯ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಬೇಕಾಗಿದೆ. ವರ್ತನೆಗೆ ಸಂಬಂಧಿಸಿದ ಇತರ ಅಂಶಗಳಂತೆಯೇ, ಇಂಜೆಕ್ಷನ್ ಮೂಲಕ ಮಾದಕ ಸೇವನೆ ಸಮಸ್ಯೆಯನ್ನು ಸಮಗ್ರ ದೃಷ್ಟಿಯಿಂದ ನೋಡುವ ಅಗತ್ಯವಿದೆ. ಈ ಸಂದರ್ಭದಲ್ಲಿ (ಅ) ಮಾದಕ ಪದಾರ್ಥಕ್ಕೆ ದಾಸರಾಗಲು ಪ್ರತಿ ವ್ಯಕ್ತಿಯ ವೈಯಕ್ತಿಕ ಕಾರಣ ಮತ್ತು ಪ್ರಭಾವಶಾಲಿ ಅಂಶಗಳು (ಆ) ಸುರಕ್ಷಿತ ವರ್ತನೆಗಳ ಅಡವಳಿಕೆಗೆ ಇರುವ ಆಯ್ಕೆ ಮತ್ತು ಅವಕಾಶಗಳು (ಇ) ಕುಟುಂಬ/ ಸಮುದಾಯದಿಂದ ಸೂಕ್ಷ್ಮ ಮತ್ತು ಪೂರ್ವಾಗ್ರಹರಹಿತ ಬೆಂಬಲ – ಈ ಅಂಶಗಳನ್ನು ಪರಿಗಣಿಸಬೇಕು. ಇಂಜೆಕ್ಷನ್ ಮೂಲಕ ಮಾದಕ ಸೇವನೆಗೆ ಸಂಬಂಧಿಸಿದಂತೆ ಜಾರಿಗೊಳಿಸಲಾಗುವ ಹಾನಿ ನಿಯಂತ್ರಣ ಕಾರ್ಯಕ್ರಮಗಳಲ್ಲಿ, ಸಾಮಾನ್ಯವಾಗಿ 'ಪ್ರತಿಕ್ರಿಯಾತ್ಮಕ' ಕ್ರಮಗಳನ್ನು ಅನುಸರಿಸಲಾಗುತ್ತದೆ. ಮಾದಕ ಪದಾರ್ಥ ಸೇವನೆ ಮತ್ತು ಅದಕ್ಕೆ ಸಂಬಂಧಿಸಿದ ಅಪಾಯಗಳ



ವಿಚಾರವು ಹೊಂದಿರುವ ಸಂಕೀರ್ಣ ಆಯಾಮಗನ್ನು ಪರಿಗಣಿಸುವುದಾದರೆ, 'ರೋಗ ನಿಯಂತ್ರಣ'ಕ್ಕಿಂತಲೂ 'ರೋಗ ತಡೆ' (ಪ್ರಾಥಮಿಕ ತಡೆ) ವಿಧಾನಗಳೇ ಹೆಚ್ಚು ಪರಿಣಾಮಕಾರಿ ಎಂಬುದನ್ನು ಹಾನಿ ನಿಯಂತ್ರಣ ಕಾರ್ಯಕ್ರಮ ಆಯೋಜಕರು ಅರಿತಿರಬೇಕು. ಯುವ ಜನತೆಯ ಸಬಲೀಕರಣ ಮತ್ತು ಹದಿಹರೆಯದವರಿಗಾಗಿ 'ಪ್ರಾಥಮಿಕ ತಡೆ' ವಿಧಾನ ಅನುಷ್ಠಾನ ಅವಶ್ಯಕವಾಗಿದೆ. ಆದ್ದರಿಂದ, ಹದಿಹರೆಯದ ಮತ್ತು ಯುವ ಸಮುದಾಯದ ಮೇಲೆ ನೇರವಾಗಿ 'ಮರುಸಂಧಾನ' ಪ್ರಯತ್ನಗಳನ್ನು ಅನ್ವಯಿಸುವತ್ತ ಗಮನ ಕೇಂದ್ರೀಕರಿಸುವುದು ಅತಿಮುಖ್ಯ. ಅದರಲ್ಲೂ ವಿಶೇಷವಾಗಿ ಮಾದಕ ದ್ರವ್ಯ ವ್ಯಸನಿಗಳಿರುವ ಕುಟುಂಬದ ವಿಚಾರದಲ್ಲಿ ಇದು ಸತ್ಯವೆನಿಸಿದೆ. ಏಕೆಂದರೆ, ಇಡೀ ಕುಟುಂಬಗಳೇ ಮುಂದೆ ಮಾದಕ ದ್ರವ್ಯ ಸೇವನೆ ವ್ಯಸನಕ್ಕೆ ಗುರಿಯಾಗಬಹುದಾದ ಸಾಧ್ಯತೆ ಹೆಚ್ಚಾಗಿರುತ್ತದೆ.

### ಉಪಸಂಹಾರ

ಈಶಾನ್ಯ ಭಾರತ ಪ್ರದೇಶದ ಅಭಿವೃದ್ಧಿ ಕುರಿತಾದ ಚರ್ಚೆಗೆ ಅನೇಕ ದೃಷ್ಟಿಕೋನಗಳು, ವಿವಿಧ ಮಧ್ಯಸ್ಥಗಾರರು, ಬಲಿಷ್ಠ ಮತ್ತು ಸಮರ್ಪಿತ ಜನಾದೇಶ ಹಾಗೂ ಈ ಭಾಗದ ಜನರೊಂದಿಗೆ ನಿರಂತರ ಮಾತುಕತೆ ಅತ್ಯಗತ್ಯವಾಗಿದೆ. ಜನರ ಭಾಗವಹಿಸುವಿಕೆಯು ಅವರ ಸಬಲೀಕರಣಕ್ಕೆ ನೆರವಾಗುತ್ತದೆ. ಅಭಿವೃದ್ಧಿಗೆ ಸಬಲ ಜನತೆಯೇ ಮೂಲ ಅಗತ್ಯವಾಗಿದೆ. ❑

## ಯೋಜನಾ

## ಮೇ 2016 ಸಂಚಿಕೆಯ ವಿಷಯ

## ವಿಶೇಷ ಚೇತನರು

# ಈಶಾನ್ಯದಲ್ಲಿ ಪರಿಸರ ಸ್ನೇಹಿ ಕೃಷಿ



* ನೀರೇಂದ್ರ ದೇವ್

ಜಲಸಂರಕ್ಷಣೆ ಮತ್ತು ಕೃಷಿ ಮಾಡುವಲ್ಲಿ ಇಲ್ಲಿನ ಪ್ರತಿ ಬುಡಕಟ್ಟು ಮತ್ತು ಜನಾಂಗೀಯ ಸಮುದಾಯ ತಮ್ಮದೇ ಆದ ಅನನ್ಯ ಸಾಂಪ್ರದಾಯಿಕ ವಿಧಾನವನ್ನು ಅವಲಂಬಿಸಿದ್ದು, ಇದರಿಂದಾಗಿಯೇ ಈ ವಲಯ ಹಲವಾರು ಸಾಂಪ್ರದಾಯಿಕ ನೀರು ಕೊಯ್ಲು ವ್ಯವಸ್ಥೆಯ ತವರಾಗಿದೆ.

'ಬೆಳಗ್ಗೆ ನಿಮ್ಮ ನೆರಳು ನಿಮ್ಮ ಬೆನ್ನ ಹಿಂದಿರುವುದು; ಅಥವಾ ಸಂಜೆ ನಿಮ್ಮ ನೆರಳು ನಿಮ್ಮನ್ನು ತಲುಪಲು ಮುಂದಾಗುವುದಾದರೂ ಇದಕ್ಕಿಂತ ಭಿನ್ನವಾಗಿರುವುದನ್ನು ನಾನು ನಿಮಗೆ ತೋರಿಸುತ್ತೇನೆ' ಇದು ಕವಿ ಟಿ. ಎಸ್. ಎಲಿಯೆಟ್‌ನ ಮಾತು. ಇದನ್ನು ಬೇರೆ ಭಾವನೆಯಿಂದ ಆತ ಹೇಳಿರುವುದಾದರೂ, ಒಟ್ಟು ಅರ್ಥದಲ್ಲಿ ಈ ಮಾತು ಈಶಾನ್ಯ ಭಾರತದ ಗ್ರಾಮೀಣ ಪ್ರದೇಶದ ನೈಜ ಮುಖವನ್ನು ಪರಿಚಯ ಮಾಡಿಕೊಡುತ್ತದೆ. ದೇಶದ ಮೂಲೆಯ ಗುಡ್ಡಗಾಡು ಪ್ರದೇಶವಾದ ಇಲ್ಲಿನ ಜನರು ಕೃಷಿಗೆ ಸಾಂಪ್ರದಾಯಿಕ ತೋಟಗಾರಿಕೆಯ ವಿಧಾನವನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ಪ್ರಾಯಶಃ ಎಲಿಯೆಟ್ ಅವರ ಮಾತುಗಳು ದಶಕಗಳಿಂದೀಚೆಗೆ ಅಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ ಎಂಬುದಕ್ಕೆ ಕೈಗನ್ನಡಿಯೆಂದೇ ಹೇಳಬಹುದು.

ಈಶಾನ್ಯ ಭಾರತದ ಜನರಿಗೆ ಕೃಷಿಯೇ ಪ್ರಮುಖ ಜೀವನಾಧಾರ. ಹೀಗಾಗಿ ಈ ವಲಯವನ್ನು ಇನ್ನಿಲ್ಲದಂತೆ ಕಾಡುವ ನೈಸರ್ಗಿಕ ಪ್ರಕೋಪ ಹಾಗೂ ಸರಣಿ ಹಿಂಸಾಚಾರದಂತಹ ಮಾನವ ನಿರ್ಮಿತ ವಿಕೋಪಗಳನ್ನು ನಿವಾರಿಸಲು ರಹದಾರಿಯಾಗಿರುವ ಕೃಷಿ ಕ್ಷೇತ್ರದ ಕಡೆಗೆ ಗಮನಹರಿಸಲೇಬೇಕಾಗಿದೆ. ಅರುಣಾಚಲ ಪ್ರದೇಶ, ಅಸ್ಸೋಂ (ಅಸ್ಸಾಂ), ಸಿಕ್ಕಿಂ, ಮಣಿಪುರ, ಮಿಜೋರಾಂ, ಮೇಘಾಲಯ, ನಾಗಾಲ್ಯಾಂಡ್ ಮತ್ತು ತ್ರಿಪುರಾ ಸೇರಿದಂತೆ ಈಶಾನ್ಯದ ಎಂಟು ರಾಜ್ಯಗಳ ಸಮಗ್ರ ಅಭಿವೃದ್ಧಿಯಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸುತ್ತಿದೆ.

ದೇಶದ ಈಶಾನ್ಯ ವಲಯ ಅತ್ಯಂತ ಹೆಚ್ಚು ಜನಾಂಗೀಯ ವೈವಿಧ್ಯವನ್ನು ಹೊಂದಿರುವ ಪ್ರದೇಶವಾಗಿದೆ. ಸಿಕ್ಕಿಂ ಸೇರಿದಂತೆ ಪ್ರತಿ ಎಂಟು ರಾಜ್ಯಗಳು ತೋಟಗಾರಿಕೆಯಲ್ಲಿ ತನ್ನದೇ ಆದ ಸಂಸ್ಕೃತಿ ಮತ್ತು ವಿಧಾನವನ್ನು ಹೊಂದಿವೆ. ಭಾರತೀಯರಾಗಿ ನಾವು ಸಾಂಸ್ಕೃತಿಕ ವೈವಿಧ್ಯ ಮತ್ತು ಬಹು ನಾಗರಿಕತೆಯನ್ನು ಆನಂದದಿಂದ ಅನುಭವಿಸುತ್ತಿದ್ದು, ಅದುವೇ ಭಾರತದ ಅತಿ ದೊಡ್ಡ ಬಲವಾಗಿದೆ. ಈ ವಲಯದಲ್ಲಿ ಏಕರೀತಿಯ ಕೃಷಿ ವಿಧಾನವನ್ನು ಊಹಿಸಿಕೊಳ್ಳುವುದು ತಪ್ಪಾಗುತ್ತದೆ. ಇಲ್ಲಿನ ಪ್ರತಿ ಸಮುದಾಯವು, ಸ್ಥಳೀಯ ಜನರ ತೋಟಗಾರಿಕೆ ಮಾಡುವ ಸಾಮರ್ಥ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡು ನೀರಿನ ಅಭಾವದಿಂದ ನೀರಾವರಿಗೆ ಆಗುವ ನಷ್ಟವನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಬಂದಿದೆ.


ಜಲ ಸಂರಕ್ಷಣೆ ಮತ್ತು ಕೃಷಿ ಮಾಡುವಲ್ಲಿ ಇಲ್ಲಿನ ಪ್ರತಿ ಬುಡಕಟ್ಟು ಮತ್ತು ಜನಾಂಗೀಯ ಸಮುದಾಯ ತಮ್ಮದೇ ಆದ ಅನನ್ಯ ಸಾಂಪ್ರದಾಯಿಕ ವಿಧಾನವನ್ನು ಅವಲಂಬಿಸಿದ್ದು, ಇದರಿಂದಾಗಿಯೇ ಈ ವಲಯ ಹಲವಾರು ಸಾಂಪ್ರದಾಯಿಕ ನೀರು ಕೊಯ್ಲು ವ್ಯವಸ್ಥೆಯ ತವರಾಗಿದೆ. ಅಸ್ಸಾಂನ 'ಡಾಂಗ್ಸ್ ಅಥವಾ ಕಿರು ಕಾಲುವೆ', ಮೇಘಾಲಯದ 'ಬಿದಿರು ಹನಿ ನೀರಾವರಿ ಅಥವಾ ಬ್ಯಾಂಬೂ ಡ್ರಿಪ್ ಇರಿಗೇಶನ್', ಅರುಣಾಚಲದ ಝಿರೋ ಕಣಿವೆಯ 'ವೆಟ್ ರೈಸ್ ಆಂಡ್ ಫಿಶ್ ಕಲ್ಟಿವೇಶನ್ ಸಿಸ್ಟಂ', ನಾಗಾಲ್ಯಾಂಡ್‌ನ ಫೇಕ್ ಜಿಲ್ಲೆಯಲ್ಲಿ ಚಖೆಸಾಂಗ್ ನಾಗಾ ಬುಡಕಟ್ಟು ಜನಾಂಗದ

* ನವದೆಹಲಿಯ ವಿಶೇಷ ಪ್ರತಿನಿಧಿ, ದಿ ಸ್ಟೇಟ್ಸ್‌ಮೆನ್. E-mail : nirendev1@gmail.com

'ಝೂಬೂ', ಮಿಝೋರಾಂನ 'ರೂಫ್ ಟಾಪ್ ರೈನ್ ವಾಟರ್ ಹಾರ್ವೆಸ್ಟಿಂಗ್ ಸಿಸ್ಟಂ' – ಇವು ಅಲ್ಲಿರುವ ಕೆಲವು ವಿಶಿಷ್ಟ ಜಲ ಸಂರಕ್ಷಣೆ ವಿಧಾನಗಳಾಗಿವೆ. ಇನ್ನು ಸಿಕ್ಕಿಂನ ಸಾವಯವ ಕೃಷಿ ಪದ್ಧತಿಯು ತನ್ನದೇ ಆದ ಯಶಸ್ಸಿನಿಂದ ಸಾಕಷ್ಟು ಪ್ರಸಿದ್ಧವಾಗಿದೆ.

ಇದಲ್ಲದೆ ಈಶಾನ್ಯ ಭಾರತದ ಕೃಷಿಯಲ್ಲಿ ಇನ್ನೊಂದು ಹೆಚ್ಚು ಪ್ರಖ್ಯಾತವಾಗಿರುವ ಮತ್ತು ವಿಶೇಷತೆ ಹೊಂದಿರುವ ವಿಧಾನ ಕೂಡ ಇದೆ. ಇದನ್ನು ಸಾಮಾನ್ಯವಾಗಿ ಜುಮ್ ಬೇಸಾಯ ಅಥವಾ ಶಿಫ್ಟಿಂಗ್ ಬೇಸಾಯ ಎಂದು ಕರೆಯುತ್ತಾರೆ. ಹಲವಾರು ಬೇಸಾಯಗಾರರು ಕಾಡು ಕಡಿದು ಅದನ್ನು ಸುಟ್ಟು (ಸ್ಲಾಶ್ ಆಂಡ್ ಬರ್ನ್) ಬೆಳೆ ಬೆಳೆಯುವ ವಿಧಾನವನ್ನು ತಮ್ಮ ತೋಟಗಾರಿಕೆಯಲ್ಲಿ ಬಳಸುತ್ತಾರೆ.

ಈಶಾನ್ಯ ಭಾರತದ ಒಟ್ಟು ಕೃಷಿಯಲ್ಲಿ ಶೇ. 85ರಷ್ಟು ಭಾಗ ಶಿಫ್ಟಿಂಗ್ ಕಲ್ಟಿವೇಶನ್ ಅಥವಾ ಜುಮ್ ವಿಧಾನದಿಂದಲೇ ಮಾಡುತ್ತಾರೆ. ಕೃಷಿ ಭೂಮಿಯ ಅವಶ್ಯಕತೆ ಹೆಚ್ಚುತ್ತಿರುವುದರಿಂದ ಪರಿಸರದ ಮೇಲೆ ಒತ್ತಡ ಹೆಚ್ಚುತ್ತಿದೆ ಮತ್ತು ಒಟ್ಟಾರೆ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಪರಿಸರದ ದೃಷ್ಟಿಯಿಂದ ನೋಡುವುದಾದರೆ ಇಡೀ ಈಶಾನ್ಯ ವಲಯವು ಅರೆ ಉಷ್ಣವಲಯದ ಬೇಸಿಗೆ–ಮಳೆಗಾಲದ ವಾತಾವರಣದಡಿಯಲ್ಲಿ ಬರುತ್ತಿದ್ದು, ಸ್ಥಳೀಯ ನೀರು ಸಂರಕ್ಷಣೆ ವಿಧಾನವು ಒಟ್ಟು ಬೆಳೆ ಉತ್ಪಾದನೆಯನ್ನು ಹೆಚ್ಚಿಸುವುದು ಮಾತ್ರವಲ್ಲ ಮಣ್ಣಿನ ಸವಕಳಿಯನ್ನು ತಡೆಯುವಲ್ಲಿ ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸಲು ನೆರವಾಗಿರುವುದು ಕಂಡು ಬರುತ್ತಿದೆ. ಆದಾಗ್ಯೂ ಜಲ ಸಂರಕ್ಷಣೆಯಲ್ಲಿ ಸಾಕಷ್ಟು ಅವಕಾಶಗಳು ಮತ್ತು ಆವಿಷ್ಕಾರಗಳಿದ್ದರೂ ಇಲ್ಲಿನ ಕೃಷಿ ಆರ್ಥಿಕತೆ ಉತ್ತರಾಭಿಮುಖವಾಗಿ ಪ್ರಗತಿಯನ್ನು ಕಂಡೇ ಇಲ್ಲದಿರುವುದು ತೋರಿ ಬರುತ್ತಿದೆ. ಐತಿಹಾಸಿಕ ಮತ್ತು ಭಾಗಶಃ ಭೌಗೋಳಿಕ ಕಾರಣಗಳಿಂದಾಗಿ ಈಶಾನ್ಯ ಭಾರತದ ಕೃಷಿ ಕ್ಷೇತ್ರವು ಇನ್ನೂ ಸೊರಗುತ್ತಲೇ ಇದೆ. ಸ್ಥೂಲವಾಗಿ ಹೇಳುವುದಾದರೆ ಈಶಾನ್ಯ ರಾಜ್ಯಗಳಲ್ಲಿ ಕೋಲ್ಡ್ ಸ್ಟೋರೇಜ್ ಸೌಲಭ್ಯ, ಮಾರುಕಟ್ಟೆಯ ಅವಕಾಶ ಮತ್ತು ಹೊಸ ಉದ್ಯೋಗಾವಕಾಶಗಳ ಸೃಷ್ಟಿಯ ನಿಟ್ಟಿನಲ್ಲಿ ಸಾಕಷ್ಟು ಗಮನ ಹರಿಸಬೇಕಾಗಿದೆ.



ಇತ್ತೀಚಿನ ವರ್ಷಗಳಲ್ಲಿ ನೂತನ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕೃಷಿ ಕ್ಷೇತ್ರದ ಕಡೆಗೆ ಹೆಚ್ಚು ಗಮನ ನೀಡಲಾಗಿದೆ ಮತ್ತು ಕೆಲವು ವರ್ಷಗಳ ಹಿಂದೆ ಆರಂಭಗೊಂಡ ಎರಡನೇ ಹಸಿರು ಕ್ರಾಂತಿ ಯೋಜನೆಯಡಿ ಹಲವಾರು ವಿನೂತನ ಕ್ರಮಗಳನ್ನು ಕೈಗೊಳ್ಳಲಾಗಿದ್ದು ಅವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ. ಆದರೆ ಕೆಲವೊಂದು ನಿರ್ದಿಷ್ಟ ಅಡೆತಡೆಗಳ ಬಗ್ಗೆ ಪ್ರಮುಖವಾಗಿ ಗಮನ ಹರಿಸಬೇಕಾಗಿದೆ ಮತ್ತು ಅಂತಹ ಪ್ರದೇಶಗಳಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಅಡ್ಡಿಗಳನ್ನು ನಿವಾರಿಸಬೇಕಾಗಿದೆ.

ಈಶಾನ್ಯ, ಭಾರತದ ಆರ್ಥಿಕತೆಯಲ್ಲಿ ಅಗ್ರ ಸ್ಥಾನದಲ್ಲಿ ಕೃಷಿ ಕ್ಷೇತ್ರವಿದ್ದರೂ ಬೆಳೆಯ ಪ್ರಮಾಣ ಮತ್ತು ಆರ್ಥಿಕತೆಯ ಚೇತರಿಕೆಯ ಅಂಶಗಳತ್ತ ಗಮನ ಹರಿಸಿದರೆ ಇನ್ನೂ ಅದು ನಿರೀಕ್ಷೆಯ ಮಡುವಿನಲ್ಲೇ ಉಳಿದಿದೆ.

ಈಶಾನ್ಯ ಭಾರತದ ಆರ್ಥಿಕತೆಯ ಪ್ರಮುಖ ಶಕ್ತಿಯಾಗಿದ್ದರೂ ಈ ಭಾಗದ ಒಟ್ಟು ಕೃಷಿ ಉತ್ಪನ್ನ ಮತ್ತು ಆರ್ಥಿಕತೆಯ ಉತ್ತೇಜನಕ್ಕೆ ಬಹು ಕಾಲದಿಂದ ಕಾಯುತ್ತಲೇ ಸಾಗಿದೆ. ಆದಾಗ್ಯೂ, ಈಗಾಗಲೇ ಆ ನಿಟ್ಟಿನಲ್ಲಿ ಕ್ರಮ ಆಗಿಲ್ಲ ಎಂದು ಹೇಳುವ ಹಾಗಿಲ್ಲ. ರಾಜ್ಯಗಳ ಸುಮಾರು ಶೇ. 75ಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು, ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ.

ಆದರೆ ಬೇಸಾಯ ಮಾಡುವ ಪ್ರದೇಶಗಳ ಒಟ್ಟು ವಿಸ್ತೀರ್ಣ (ತೋಟಗಾರಿಕೆ ವಿಭಾಗ) ಒಟ್ಟಾರೆ ಭಾರತದ ಶೇ. 40ಕ್ಕೆ ಹೋಲಿಸಿದರೆ ಶೇ. 20ಕ್ಕಿಂತ ಕಡಿಮೆಯಿದೆ. ದೇಶದ ಇತರೆಡೆಗಳಿಗೆ ಹೋಲಿಸಿದರೆ ಹಲವು ಬೆಳೆ ಮತ್ತು ಉತ್ಪಾದನೆಯಲ್ಲಿ (ಪ್ರಮಾಣಕ್ಕೆ ಅನುಸಾರ) ಈಶಾನ್ಯ ವಲಯ ತುಂಬಾ ಹಿಂದುಳಿದಿದೆ. ಆದ್ದರಿಂದ ಹಣ್ಣು ಹಂಪಲು ಸೇರಿದಂತೆ ಆಹಾರ ಧಾನ್ಯಗಳ ಅವಶ್ಯಕತೆಗಳಿಗಾಗಿ ಈ ಪ್ರದೇಶ ದೇಶದ ಬೇರೆ ಭಾಗಗಳನ್ನು ಅಲಂಬಿಸಬೇಕಾಗಿದೆ. ಇದೇ ವೇಳೆ, ಈ ವಲಯವು ತೋಟಗಾರಿಕೆ ಮತ್ತು ಇತರ ಬೇಸಾಯ ಉತ್ಪನ್ನಗಳ ಉತ್ಪಾದನೆಯಲ್ಲಿ ಸಾಕಷ್ಟು ಸಾಮರ್ಥ್ಯ ಹೊಂದಿದೆ ಎಂಬುದನ್ನು ಪರಿಗಣಿಸಲೇಬೇಕಾಗುತ್ತದೆ.

ಈಶಾನ್ಯ ಭಾರತ ಮತ್ತು ಅದರಲ್ಲೂ ಮುಖ್ಯವಾಗಿ ಅಸ್ಸಾಂನಂತಹ ರಾಜ್ಯಗಳು ಒಟ್ಟು ಭಾರತದಲ್ಲಿ ಉತ್ಪಾದನೆಯಾಗುವ ಚಹಾ, ಅಕ್ಕಿ, ಸಾಸಿವೆ, ಸೆಣಬು, ಆಲೂಗಡ್ಡೆ, ಸಿಹಿ ಗೆಣಸು, ಬಾಳೆಹಣ್ಣು, ಪರಂಗಿ, ಸಿಟ್ರಸ್ ಹಣ್ಣುಗಳು, ದಟ್ಟ ಎಲೆಯ ತರಕಾರಿಗಳು, ಗಿಡಮೂಲಿಕೆ ಮತ್ತು ಸಂಬಾರ ಪದಾರ್ಥಗಳ ಪ್ರಮಾಣದಲ್ಲಿ ಗಣನೀಯ ಪಾಲು ಹೊಂದಿದೆ. ಮೇಘಾಲಯವು ಗೋಡಂಬಿ ಮತ್ತು ದ್ರಾಕ್ಷಿ, ಶುಂಠಿ ಮತ್ತು ಮೆಣಸುಗಳಿಗೆ ಹೆಸರಾಗಿದ್ದರೆ, ತ್ರಿಪುರಾ, ಮಿಜೊರಾಂ ಮತ್ತು ಮಣಿಪುರ ಬಿದಿರಿನ ಮತ್ತು ಆಹಾರ ಉತ್ಪನ್ನಗಳಿಗೆ ಪ್ರಸಿದ್ಧವಾಗಿದೆ. ಅದೇ ರೀತಿ ನಾಗಾಲ್ಯಾಂಡ್ ಅನಾನಸಿನಂತಹ ಹಣ್ಣುಗಳನ್ನು ಹೆಚ್ಚು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಹೀಗಾಗಿ ಒಟ್ಟಾರೆ ಅಡೆತಡೆಗಳು ಮತ್ತು ಮಿತಿಗಳ ಹೊರತಾಗಿಯೂ ಕೃಷಿ ಮತ್ತು

ತೋಟಗಾರಿಕೆಗಳು ಒಟ್ಟಾಗಿ ಯಶಸ್ಸಿನಲ್ಲಿ ಪಥದಲ್ಲಿ ಸಾಗಿದ್ದು, ಭವಿಷ್ಯದಲ್ಲಿ ಇನ್ನಷ್ಟು ಉತ್ತುಂಗಕ್ಕೆ ಏರುವ ಭರವಸೆ ನೀಡುತ್ತಿದೆ.

**ಜನರ ಸಾಮರ್ಥ್ಯ**

ಈಶಾನ್ಯ ರಾಜ್ಯಗಳಲ್ಲಿ ಜನಸಂಖ್ಯೆ ಮೂಲಭೂತವಾಗಿ ಗ್ರಾಮಾಧಾರಿತವಾಗಿದೆ. ಆದ್ದರಿಂದ ಸ್ಥಳೀಯ ಭಾವನಾತ್ಮಕ ಬಾಂಧವ್ಯವನ್ನು ಬಿಟ್ಟು ಇಲ್ಲಿನ ಕೃಷಿ ಕ್ಷೇತ್ರವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ವೈಟ್ ಕಾಲರ್ ಉದ್ಯೋಗ, ಕೈಗಾರಿಕೆ ಮತ್ತು ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವವರು ಕೂಡ ಸಾಮಾನ್ಯವಾಗಿ ಕೃಷಿಯ ಕುರಿತ ತಮ್ಮ ಒಲವನ್ನು ಬಿಟ್ಟುಕೊಡುವುದಿಲ್ಲ. ಈ ಒಲವು ಬೇಸಾಯ ಕ್ಷೇತ್ರದ ಅವಶ್ಯಕತೆಗಳಿಗೆ ಅನುಗುಣವಾದ ಸಾಕಷ್ಟು ಆಸ್ತಿ ಉಳಿಕೆ ಮತ್ತು ಉದ್ಯೋಗಾವಕಾಶ ಸೃಷ್ಟಿಯ ಭರವಸೆಯನ್ನು ಮೂಡಿಸಿದೆ.

ಆದ್ದರಿಂದ ಪರಿಸರ ಹಾನಿಯಿಲ್ಲದೆ ಹಾಗೂ ಯಾವುದೇ ರೀತಿಯಲ್ಲಿ ಪೋಲಾಗದಂತೆ ಸೀಮಿತ ಸಂಪನ್ಮೂಲದಲ್ಲಿ ಅಕ್ಕಿ ಮತ್ತು ಮೀನು ಉತ್ಪಾದಿಸುವ ಅರುಣಾಚಲ ಪ್ರದೇಶದ 'ವೆಟ್ ರೈಸ್ ಕಂ ಫಿಶ್ ಕಲ್ಟಿವೇಶನ್' ರೀತಿಯ ನೀರು ಸಂರಕ್ಷಣೆಯ ಸಾಂಪ್ರದಾಯಿಕ ವಿಧಾನವನ್ನು ನಾವು ಹೊಂದಿದ್ದೇವೆ.

**ಸಾವಯವ ರಾಜ್ಯ**

ಸಾವಯವ ಬೇಸಾಯದಲ್ಲಿ ಒಂದು ಪ್ರಯೋಗ ಕೂಡ ಆಗಿದೆ. ಈ ನಿಟ್ಟಿನಲ್ಲಿ 2016ರ ಜನವರಿ 18ರಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸಿಕ್ಕಿಂ ರಾಜ್ಯವನ್ನು ದೇಶದ ಮೊದಲ ಸಾವಯವ ರಾಜ್ಯ ಎಂದು ಘೋಷಿಸಿರುವುದು ನಿರ್ದಿಷ್ಟ ಫಲಿತಾಂಶದತ್ತ ಮೊದಲ ಹೆಜ್ಜೆಯೆಂದೇ ಹೇಳಬಹುದು. ಕಳೆದ ಒಂದು ದಶಕದಲ್ಲಿ



ಸಿಕ್ಕಿಂನಲ್ಲಿ ಮಾಡಿದ ಕಠಿಣ ಪರಿಶ್ರಮದಿಂದಾಗಿ 75,000 ಹೆಕ್ಟೇರ್ ಕೃಷಿ ಭೂಮಿಯನ್ನು ಸಂರಕ್ಷಿತ ಸಾವಯವ ಕೃಷಿ ಭೂಮಿಯಾಗಿ ಪರಿವರ್ತಿಸಲು ಸಾಧ್ಯವಾಗಿದೆ. ಇದು ರಾಜ್ಯದಲ್ಲಿ ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಿ ಒಟ್ಟಾರೆ ಬೆಳೆ ಉತ್ಪಾದನೆಯ ಪ್ರಮಾಣ ಹೆಚ್ಚಿಸಲು ನೆರವಾಗಿದ್ದು ಜೊತೆಗೆ ಇದು ಪ್ರವಾಸೋದ್ಯಮ ಕ್ಷೇತ್ರಕ್ಕೂ ಉತ್ತೇಜನ ನೀಡುವ ನಿರೀಕ್ಷೆಯಿದೆ.

ನಾಗಾಲ್ಯಾಂಡ್‌ನ ಫೆಕ್ ಜಿಲ್ಲೆಯಲ್ಲಿ ಅಳವಡಿಸಿಕೊಂಡಿರುವ ಝೂಬೊ ವ್ಯವಸ್ಥೆಯಲ್ಲಿ ಗುಡ್ಡದ ಮೇಲಿರುವ ಸಂರಕ್ಷಿತ ಅರಣ್ಯ ಭೂಮಿಯಲ್ಲಿ ನೀರು ಸಂರಕ್ಷಣೆ ಮತ್ತು ಮಧ್ಯ ಭಾಗದಲ್ಲಿ ಟ್ಯಾಂಕ್ ಗಳ ಮೂಲಕ ಹಾಗೂ ಕೆಳ ಭಾಗದಲ್ಲಿರುವ ಜಾನುವಾರು ಸಾಕಣೆಯ ಪ್ರದೇಶ ಮತ್ತು ಗದ್ದೆಗಳಲ್ಲಿ ನೀರು ಸಂರಕ್ಷಿಸಲು ಸಾಧ್ಯವಾಗಿದೆ. ಇಲ್ಲಿ ಕೆರೆಯಲ್ಲಿ ಸಂಗ್ರಹವಾದ ನೀರು ಗೋಮಾಳದ ಮೂಲಕ ಭತ್ತದ ಗದ್ದೆಗಳಿಗೆ ಸಾಗುವ ನೀರಾವರಿ ವ್ಯವಸ್ಥೆಯಿದೆ.

ಇದರಿಂದ ಜಾನುವಾರುಗಳ ಸೆಗಣಿ ಮತ್ತು ಮೂತ್ರ ಮಿಶ್ರಿತ ನೀರು ಬಿದಿರಿನ ಕತ್ತರಿಸಿದ ಹಾಳೆಗಳ ಮೂಲಕ ಬೇಸಾಯ ಭೂಮಿಗೆ ಹೋಗಿ ಬೆಳೆಗೆ ಪೌಷ್ಟಿಕಾಂಶ ಒದಗಿ ಉತ್ತಮ ಫಸಲು ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಈಶಾನ್ಯ ರಾಜ್ಯಗಳಲ್ಲಿ ಕೃಷಿ ಕ್ಷೇತ್ರಕ್ಕೆ ಬಹು ಹಂತದ ಸ್ಥಿತ್ಯಂತರವನ್ನು ಯಾವ ರೀತಿ ತರಬಹುದು ಎಂಬುದನ್ನು ಪರೀಕ್ಷಿಸುವುದು ಸೂಕ್ತವಾಗುತ್ತದೆ.

ಇದರಲ್ಲಿ ಉಳಿದ ಅಂಶಗಳ ಜೊತೆಗೆ

ಎ) ನಿರುದ್ಯೋಗದ ಮೂಲೋತ್ಪಾಟನೆ ಮತ್ತು ನಿರ್ದಿಷ್ಟವಾಗಿ ಹೆಚ್ಚು ಉದ್ಯೋಗ ಒದಗಿಸುವಿಕೆ

ಬಿ) ಕುಡಿಯುವ ನೀರು, ಗ್ರಾಮೀಣ ರಸ್ತೆಗಳು, ಪ್ರಾಥಮಿಕ ಶಿಕ್ಷಣ, ಆರೋಗ್ಯ ಸಂರಕ್ಷಣೆ ಮತ್ತು ಭೂರಹಿತರಿಗೆ ಮನೆ ನಿರ್ಮಾಣ, ಬೆಳೆಗೆ ಪೌಷ್ಟಿಕಾಂಶ ಒದಗಿಸಲು ಉತ್ತೇಜನದಂತಹ ದಂತಹ ಮೂಲಭೂತ ಆರ್ಥಿಕ ಬೆಂಬಲ ನೀಡಿಕೆಯನ್ನು ಖಾತರಿ ಮಾಡಬೇಕು.

ಸಿ) ಆದಾಯ ಮತ್ತು ಸಂಪತ್ತಿನ ಅಸಮತೋಲನವನ್ನು ಗಣನೀಯ-



ವಾಗಿ ಕಡಿಮೆ ಮಾಡುವತ್ತ ಕ್ರಮ ತೆಗೆದುಕೊಳ್ಳಬೇಕು

ಡಿ) ಪ್ರಗತಿಯ ದರ ಹೆಚ್ಚಳದ ಗುರಿ ಸಾಧಿಸುವುದು ಮತ್ತು ಪ್ರಗತಿಯ ಸ್ಥಿರವಾದ ಬೆಳವಣಿಗೆ ಮುಂದುವರಿಸುವಂತೆ ನೋಡಿ-ಕೊಳ್ಳುವುದು.

ಮನುಷ್ಯನ ಭವಿಷ್ಯ ಮತ್ತು ಶ್ರೇಯೋಭಿವೃದ್ಧಿ ಮಣ್ಣಿನ ಜೊತೆ ಬೆಸೆದುಕೊಂಡಿದೆ ಎಂಬ ಅಸ್ಸಾಮಿ ಸಾಹಿತ್ಯವನ್ನು ಉಲ್ಲೇಖಿಸುತ್ತಾ ಜೀವನದ ಕುರಿತ ಹಳೆಯ ಅರಿವನ್ನು ಅಂತಿಮ ವಿಶ್ಲೇಷಣೆಯಾಗಿ ಬಳಸಬಹುದು.

ಕೃಷಿ ಜನರ ಸಾಮರ್ಥ್ಯವನ್ನು ಪ್ರಕಟಿಸಲು ನಿಜ ಅರ್ಥದಲ್ಲೂ ಅವಕಾಶವನ್ನು ಒದಗಿಸಿಕೊಟ್ಟಿದೆ ಎಂದು ಹೇಳಬಹುದು. ಭೂಮಿಯನ್ನು ತಾಯಿಯಾಗಿಯೂ ಭೂಮಿಯ ಮೇಲ್ಮೆಯನ್ನು ತಾಯಿಯ ಮಡಿಲಾಗಿಯೂ ಈಶಾನ್ಯ ರಾಜ್ಯಗಳ ಜನರು ನಂಬುತ್ತಾರೆ. ಮಾತೆಯ ಬಗ್ಗೆ ಯಾವ ರೀತಿ ಕಾಳಜಿ ತೆಗೆದುಕೊಳ್ಳಬೇಕು ಹಾಗೂ ಆ ಮೂಲಕ ಆಕೆಯ ಶುಭಾಶೀರ್ವಾದ ಹೇಗೆ ಪಡೆಯಬೇಕು ಎಂಬ ಬಗ್ಗೆ ಮತ್ತು ಬೇಸಾಯವನ್ನು ಯಾವ ರೀತಿ ಮಾಡಬೇಕು ಎಂಬ ಕುರಿತು ಇವರಷ್ಟು ತಜ್ಞರು ಮತ್ತೊಬ್ಬರಿಲ್ಲ ಎಂದೇ ಹೇಳಬಹುದು.

ಎಲ್ಲರಿಂದಲೂ ಸ್ವೀಕಾರಾರ್ಹವಾದ ಮತ್ತು ಪರಿಸರ ಸಂರಕ್ಷಣೆಯ ಕಾಳಜಿ ಹೊಂದಿರುವ ಬೇಸಾಯ ಪದ್ಧತಿಯನ್ನು ಅವಿಷ್ಕರಿಸುವುದು ಕೂಡ ಅವರಿಗೆ ತಿಳಿದಿದೆ. ಜನರ ಸಹಭಾಗಿತ್ವ ಮತ್ತು ನೈಸರ್ಗಿಕ ಸಂಪನ್ಮೂಲಗಳ ವಿವೇಚನಾಯುಕ್ತ ಬಳಕೆಯಿಂದ ಒಟ್ಟಾರೆ ಸಂರಕ್ಷಣೆ ಸಾಧ್ಯ. ಇದರಿಂದಾಗಿ ಸಹಜವಾಗಿಯೇ ಪ್ರಗತಿ ಕಾರ್ಯಸಾಧುವಾಗುತ್ತದೆ. ❑

# ಈಶಾನ್ಯ ಭಾರತದಲ್ಲಿ ಬುಡಕಟ್ಟು ಅಭಿವೃದ್ಧಿ

* ಎನ್‌ಸಿ ಸಕ್ಸೇನಾ



ದೇಶದ ಇತರೆ ರಾಜ್ಯಗಳು ಮತ್ತು ಬುಡಕಟ್ಟು ಜನಾಂಗಗಳ ಈಶಾನ್ಯ ಭಾರತದ ನಡುವೆ ಇರುವ ಅಂತರವನ್ನು ಗಮನಾರ್ಹವಾಗಿ ಕಡಿಮೆ ಮಾಡುವ ಅವಶ್ಯಕತೆ ಇದ್ದು ಅದಕ್ಕೆ ಕೇವಲ ಬಂಡವಾಳ ಸಂಪನ್ಮೂಲಗಳ ಹರಿವನ್ನು ಹೆಚ್ಚು ಮಾಡುವ, ಜೊತೆಗೆ ಆಡಳಿತ ಯಂತ್ರವನ್ನು ಬಹುವಾಗಿ ಸುಧಾರಿಸುವ ಅವಶ್ಯಕತೆ ಇದೆ.

ಭಾರತದಲ್ಲಿ ಒಟ್ಟು ಬುಡಕಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡ 12 ರಷ್ಟು ಮಾತ್ರ ಭಾರತದ ಎಂಟು ಈಶಾನ್ಯ ರಾಜ್ಯಗಳಲ್ಲಿ ವಾಸಿಸುತ್ತಿದ್ದು ಆದರೆ ಮಧ್ಯ ಭಾರತದ ರಾಜ್ಯಗಳ ರೀತಿ ಇವರು ಅಲ್ಪ ಸಂಖ್ಯಾತರಾಗದೆ ಮಿಜೊರಾಂ, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಇವರು ರಾಜ್ಯದ ಜನಸಂಖ್ಯೆಯ ಶೇಕಡ 80 ರಷ್ಟಿರುವುದರಿಂದಲೇ ಇವರು ರಾಜಕೀಯವಾಗಿ ಹೆಚ್ಚು ಗಮನ ಸೆಳೆಯುತ್ತಾರೆ. ಕಳೆದ ಕೆಲವು ದಶಕಗಳಿಂದ ಈಶಾನ್ಯದ ಕೆಲವು ರಾಜ್ಯಗಳಿಗೆ ಪಕ್ಷದ ರಾಜ್ಯಗಳಿಂದ ಹಾಗೂ ಬಾಂಗ್ಲಾದೇಶದಿಂದ ಹೆಚ್ಚಿನ ವಲಸಿಗರು ಬರುತ್ತಿದ್ದು ಇದು ಪ್ರಾದೇಶಿಕ ಜನಸಂಖ್ಯೆಯ ಅಸಮತೋಲನ ಉಂಟು ಮಾಡುತ್ತಿದೆ. ತ್ರಿಪುರಾದಲ್ಲಿ ಬುಡಕಟ್ಟು ಜನಸಂಖ್ಯೆ 1951ರಲ್ಲಿ ಶೇಕಡ 56 ಇದ್ದದ್ದು 2001ಕ್ಕೆ ಶೇ. 30ಕ್ಕೆ ಇಳಿದಿದೆ. ಇದೇ ರೀತಿ ಅರುಣಾಚಲ ಪ್ರದೇಶದಲ್ಲಿ 1951ರಲ್ಲಿ ಶೇ. 90 ರಿಂದ 1991ಕ್ಕೆ ಶೇ. 64ಕ್ಕೆ ಇಳಿದಿದೆ. ಮುಸ್ಲಿಂ ವಲಸೆಗಾರರಿಂದ ಅಸ್ಸಾಂನ ಬುಡಕಟ್ಟು ಜನಾಂಗವಾದ ಬೋಡೊ ಅಸ್ಸಾಂನ ಅನೇಕ ಜಿಲ್ಲೆಗಳಲ್ಲಿ ನೆಲಭೂಮಿ ಕಳೆದುಕೊಂಡು, ಅಲ್ಪ ಸಂಖ್ಯಾತರಾಗಿದ್ದು ಇದು ಆಗಿಂದಾಗ್ಗೆ ಅಲ್ಲಿ ದೊಡ್ಡ ಪ್ರಮಾಣದ ಹಿಂಸೆ ನಡೆಯಲು ಕಾರಣವಾಗುತ್ತಿದೆ.

ಜನಸಂಖ್ಯೆಯ ಈ ರೀತಿ ವಿಭಜನೆಯಿಂದ ರಾಜ್ಯಗಳ ಆಡಳಿತ ಬುಡಕಟ್ಟು ಮತ್ತು ಬುಡಕಟ್ಟೇತರದಲ್ಲಿ ಅಸಮಾನತೆಯಿಂದ ಹಂಚಿಕೆಯಾಗಿದ್ದು ಹೆಚ್ಚಿನ ಅಧಿಕಾರ ಅದರಲ್ಲೂ ರಾಜಕೀಯ ಮತ್ತು ಆರ್ಥಿಕ ಶಕ್ತಿಗಳು ಬುಡಕಟ್ಟೇತರ ಪಂಗಡಗಳಲ್ಲಿ (ಅಸ್ಸಾಂನ ಅಹೋಮ, ಮಣಿಪುರದ ಮೈಥೀಸ್ ಮತ್ತು ತ್ರಿಪುರದ ಬಂಗಾಳಿಗಳು) ಕೇಂದ್ರೀಕೃತವಾಗಿವೆ. ಬುಡಕಟ್ಟು ಜನಾಂಗದೊಳಗೆ ದೊಡ್ಡ ಪ್ರಮಾಣದಲ್ಲಿ ಉಪಪಂಗಡಗಳಿದ್ದು, ಈಶಾನ್ಯ ಭಾರತದಲ್ಲಿ ಇಂತಹ 220ಕ್ಕೂ ಹೆಚ್ಚಿನ ಜನಾಂಗಗಳಿದ್ದು ಪ್ರತಿಯೊಂದು ತನ್ನದೇ ಆದ ಭಿನ್ನ ಸಂಸ್ಕೃತಿ, ಸಂಪ್ರದಾಯ ಹೊಂದಿದ್ದು ತಮ್ಮದೇ ಆದ ಬುಡಕಟ್ಟು ಭಾಷೆಯಲ್ಲಿ ಮಾತನಾಡುತ್ತಾರೆ. ಈ ರೀತಿಯ ಸಾಂಸ್ಕೃತಿಕ ಭಿನ್ನತೆಗಳು ಈಶಾನ್ಯ ರಾಜ್ಯಗಳಲ್ಲಿ ಅಂತರ್ ಬುಡಕಟ್ಟು ಘರ್ಷಣೆಗೆ ಕಾರಣವಾಗುತ್ತಿದ್ದು, ಆ ರಾಜ್ಯಗಳ ಶಾಂತಿ ನೆಲೆಸುವಿಕೆ ಮತ್ತು ಅಭಿವೃದ್ಧಿ ಕ್ರಿಯೆಗೆ ಅಡಚಣೆ ಉಂಟು ಮಾಡುತ್ತಿವೆ.

## 6ನೇ ಷೆಡ್ಯೂಲ್

ಭಾರತ ಸಂವಿಧಾನದ 6ನೇ ಷೆಡ್ಯೂಲ್‌ನ ಒಂದು ಶಾಸನವು 1960ರ ಅವಿಭಜಿತ ಅಸ್ಸಾಂನಲ್ಲಿ ಅಲ್ಪ ಸಂಖ್ಯಾತರಾಗಿದ್ದ ಈ ಬುಡಕಟ್ಟು ಜನಾಂಗಕ್ಕೆ ತಮ್ಮದೇ ಆದ ಅಭಿವೃದ್ಧಿ ಮಾದರಿ ಹೊಂದಲು ಮತ್ತು ತಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ರಕ್ಷಿಸಿಕೊಂಡು ತಮ್ಮದೇ ಪ್ರತ್ಯೇಕ ತನವನ್ನು ಉಳಿಸಿಕೊಂಡು ಹೋಗುವ ಅನುಕೂಲ ಮಾಡಿಕೊಟ್ಟಿದೆ. ಆದರೆ ಹೆಚ್ಚಿನ ಬುಡಕಟ್ಟು ಜನಸಂಖ್ಯೆ ಹೊಂದಿರುವ ನಾಗಾಲ್ಯಾಂಡ್, ಮಿಜೊರಾಂ ಮತ್ತು ಮೇಘಾಲಯ ರಾಜ್ಯಗಳ ರಚನೆಯಿಂದ ಈ ಸನ್ನಿವೇಶ ಬದಲಾಯಿತು. ನಾಗಾಲ್ಯಾಂಡ್ ರಾಜ್ಯ ರಚನೆಗೊಂಡ ತಕ್ಷಣವೇ ತನ್ನದೇ ಆದ ಶಾಸನ ರಚಿಸಿತು. ಮಿಜೊರಾಂ ತನ್ನ ರಾಜ್ಯದೊಳಗಿನ ಅಲ್ಪ ಸಂಖ್ಯಾತ ಬುಡಕಟ್ಟಿಗೆ ಮಾತ್ರ ಈ 6ನೇ ಷೆಡ್ಯೂಲ್‌ನ ಅನುಕೂಲತೆ ಕಲ್ಪಿಸಿತು.

* ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಹಾಗೂ ಯುಎನ್‌ಡಿಪಿ ಸಲಹಾಗಾರರು. E-mail : naresh.saxena@gmail.com

ಮೇಘಾಲಯ ಸ್ವಾಯತ್ತ ಜಿಲ್ಲಾ ಮಂಡಳಿ (ಎಡಿಸಿ) ಗಳನ್ನು ಮುಂದುವರಿಸಿಕೊಂಡು ಹೋಯಿತು. ಇದೊಂದು ಶಾಸನ ಸಭೆಗೆ ಸಮಾನಾಂತರವಾಗಿರುವ ರಾಜಕೀಯ ಸಂಸ್ಥೆಯಾಗಿದ್ದು, ಶಾಸನ ಸಭೆಯಲ್ಲಿ ಅಪರಿಹಾರವಾದ ವಿಷಯಗಳಿಗೆ ಇಲ್ಲಿ ತಾತ್ಕಾಲಿಕ ಪರಿಹಾರ ನೀಡಲಾಗುತ್ತದೆ. ಈ ಮಂಡಳಿಗಳು ಮೇಘಾಲಯ ಅಸ್ಸಾಂನ ಭಾಗವಾಗಿದ್ದಾಗ ಮಾತ್ರ ಹೆಚ್ಚು ಸಮಂಜಸವಾಗಿದ್ದವು. ಅವು ತಮ್ಮದೇ ಆದ ಸ್ವಯಂ ಆಡಳಿತ ಹೊಂದಬಹುದಾಗಿದ್ದು ಬಹುಸಂಖ್ಯಾತ ಬುಡಕಟ್ಟೇತರ ಜನಾಂಗದ ವ್ಯಾಪ್ತಿಯಿಂದ ಹೊರಗಿದ್ದವು. ಈಗ ಮೇಘಾಲಯ ಶೇ. 85 ಬುಡಕಟ್ಟು ಜನಾಂಗ ಹೊಂದಿರುವ ಪ್ರತ್ಯೇಕ ರಾಜ್ಯವಾಗಿದ್ದು ರಾಜ್ಯದ ಪೂರ್ಣ ಆಡಳಿತ ಅವರ ಕೈಯಲ್ಲೇ ಇರುವುದರಿಂದಲೂ ಈ ಸ್ವಾಯತ್ತ ಜಿಲ್ಲಾ ಮಂಡಳಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದರಿಂದಲೂ ಇವು ರಾಜ್ಯದ ಆಡಳಿತದಲ್ಲಿ ಗೊಂದಲ ಸೃಷ್ಟಿಗೆ ಕಾರಣವಾಗುತ್ತಿದೆ.

6ನೇ ಷೆಡ್ಯೂಲ್‌ನ ಇನ್ನೊಂದು ಸಮಸ್ಯೆಯೆಂದರೆ ಈ ಸ್ವಾಯತ್ತ ಮಂಡಳಿ ಅಡಿಯಲ್ಲಿ ಇನ್ನೊಂದು ಚುನಾಯಿತ ಮಂಡಳಿ ಇಲ್ಲದಿರುವುದು. ತಳಮಟ್ಟದ ಚುನಾಯಿತ ಮಂಡಳಿ ಇಲ್ಲದಿರುವಿಕೆಯೇ ದೂರ ದೂರದ ಪ್ರದೇಶಗಳ ಅಭಿವೃದ್ಧಿಗೆ ತೊಡಕಾಗಿರುವುದು. ಈ ಮಂಡಳಿಯ ಕೆಳಗೆ ಗ್ರಾಮೀಣ ಮಟ್ಟದಲ್ಲಿ ಸಾಂಪ್ರದಾಯಿಕ ಸಂಸ್ಥೆಗಳಿದ್ದರೂ ಅವು ಪ್ರಜಾಪ್ರಭುತ್ವಕ್ಕನುಗುಣವಾಗಿ ಇರದೆ ಅವು ವಂಶಪಾರಂಪರ್ಯವಾಗಿ ಬರುವ ಮುಖ್ಯಸ್ಥನ ಮುಖಂಡತ್ವದಲ್ಲಿರುತ್ತದೆ. ಬೇರೆ ರಾಜ್ಯಗಳ ಗ್ರಾಮ ಪಂಚಾಯತಿ ಮಾದರಿಯಲ್ಲಿ ಇಲ್ಲೂ ಸಹ ತಳಮಟ್ಟದ ಚುನಾಯಿತ ಸಂಸ್ಥೆಗಳನ್ನೂ ಹೊಂದುವ ಅವಶ್ಯಕತೆ ಇದೆ. ಈ ಬಗ್ಗೆ ಜನರಲ್ಲಿ ಅರಿವು ಉಂಟು ಮಾಡುವ ಕೆಲಸ ಆಗಬೇಕಾಗಿದೆ.

### ಆರ್ಥಿಕ ಅಸಮಾನತೆ

ಹೆಚ್ಚಿನ ಬುಡಕಟ್ಟು ಜನರು ಗುಡ್ಡಗಾಡುಗಳಲ್ಲಿ ಸ್ವಲ್ಪ ಮಟ್ಟಿನ ಕೃಷಿಯೊಂದಿಗೆ ಉಣ್ಣೆ ಪ್ರಾಣಿಗಳ ಸಾಕುವಿಕೆ ಮತ್ತು ನೇಕಾರಿಕೆ ಮಾಡಿಕೊಂಡು ಜೀವಿಸುತ್ತಿರುತ್ತಾರೆ. ಈಶಾನ್ಯ ಭಾಗಗಳ ಬಹುತೇಕ ಗುಡ್ಡಗಾಡು ಸಮುದಾಯವು ಶಿಫ್ಟ್ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದರು. ಅವರ ಸಾಮಾಜಿಕ




ರಾಜಕೀಯ ಜೀವನವು ಸಾಂಪ್ರದಾಯಿಕ ಕಾನೂನು ಕಟ್ಟಳೆ ಆಚರಣೆಗಳಿಗೆ ಒಳಪಟ್ಟಿರುತ್ತದೆ. ಇವರು ಸಾಮೂಹಿಕ ಕೃಷಿಯಲ್ಲಿ ತೊಡಗಿಸಿಕೊಂಡು ಭೂಮಿಯ ಸಾಮೂಹಿಕ ಮಾಲಿಕತ್ವದಡಿಯಲ್ಲಿ ಉತ್ಪಾದನೆಗೆ ದಾರಿ ಮಾಡಿಕೊಂಡು ಜೀವಿಸುತ್ತಿದ್ದರು. ಈ ಸಮುದಾಯ ಕಳೆದ ಕೆಲವು ದಶಕಗಳಲ್ಲಿ ಉಂಟಾದ ಮಾರುಕಟ್ಟೆಯ ತೀವ್ರ ಬದಲಾವಣೆಯಿಂದ ಹಾಗೂ ವಲಸೆ ಜನರಿಂದ ತಮ್ಮ ಜಮೀನಿನ ಸಾಮೂಹಿಕ ಮಾಲಿಕತ್ವವನ್ನು ನಿಧಾನವಾಗಿ ವೈಯಕ್ತಿಕ ಮಾಲಿಕತ್ವಕ್ಕೆ ಕಳೆದುಕೊಳ್ಳುತ್ತಿದ್ದಾರೆ. ಇದು ಜನರ ನಡುವೆ ಆರ್ಥಿಕ ಅಸಮಾನತೆಗೆ ಕಾರಣವಾಗುತ್ತಿದೆ. ಹೊರಗಿನವರ ವಿರುದ್ಧವಾಗಿ ಸ್ಥಳೀಯರ ಹಿತರಕ್ಷಣೆ ಮಾಡಲು ಕಾನೂನುಗಳಿದ್ದರೂ ಅವು ವರ್ಗ ಸಂಘರ್ಷವನ್ನು ಕಾಪಾಡಲು ಸಮರ್ಥವಾಗಿಲ್ಲ. ಈ ಗುಡ್ಡಗಾಡು ಸಮುದಾಯದಲ್ಲಿ ಈಗ ಕೆಲವರು ಕೋಟ್ಯಾಧಿಪತಿಗಳಾಗಿದ್ದರೂ ಹೆಚ್ಚಿನವರಿಗೆ ಕೃಷಿ ಮಾಡಲೂ ಒಂದು ಎಕರೆ ಭೂಮಿಯೂ ಇಲ್ಲ. ಆಸಕ್ತಿಕರ ಸಂಗತಿಯೆಂದರೆ ಈ ಶ್ರೀಮಂತರು ಸ್ಥಳೀಯ ಹಕ್ಕುಗಳನ್ನು ಪಡೆಯಲು ಭಾರೀ ಕೂಗಾಟ ರಂಪಾಟ ಎಬ್ಬಿಸಿ ಅನುಕೂಲ ಪಡೆದುಕೊಂಡು ತಮ್ಮದೇ ಸಮುದಾಯದ ಬಡಜನರನ್ನೂ ನಿಯಂತ್ರಿಸುವುದರ ಮೂಲಕ ದುರ್ಲಾಭ ಪಡೆಯುತ್ತಿದ್ದಾರೆ. ತೋಟಗಾರಿಕೆ ವಾಣಿಜ್ಯ ಬೆಳೆ ಹಾಗೂ ಇತರೆ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದ್ದರಿಂದ ನಗರ ಪ್ರದೇಶಗಳಲ್ಲಿ ಹಾಗೂ ಹೆದ್ದಾರಿಗಳ ಪಕ್ಕದ ಭೂಮಿಗೆ ಬೆಲೆ ಹೆಚ್ಚಾಗಿ ಅವೆಲ್ಲವು ಖಾಸಗಿಯವರ ಪಾಲಾಗುತ್ತಿವೆ. ಈ ಗುಡ್ಡಗಾಡು ಯುವ ಪ್ರತಿಭೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯ ಕೌಶಲ್ಯ ಇಲ್ಲದಿರುವುದರಿಂದ ಅವರು ಹೆಚ್ಚಾಗಿ ರಿಯಲ್ ಎಸ್ಟೇಟ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ.

### ಮಹಿಳೆಯರ ಮೇಲೆ ದುಷ್ಪರಿಣಾಮ

ಖಾಸಗೀಕರಣವು ಮಹಿಳಾ ಬೇಧಭಾವವನ್ನು ಹೆಚ್ಚಿಸಲು ಕಾರಣವಾಗುತ್ತಿದೆ. ಉದಾ : ನಾಗಾ ಸಾಂಪ್ರದಾಯಿಕ ಕಾನೂನಿನ ಪ್ರಕಾರ ಮಹಿಳೆಯರು ಭೂಮಿ, ಆಸ್ತಿ ಹೊಂದುವಂತಿಲ್ಲ ಮತ್ತು ವಂಶಪಾರಂಪರ್ಯ ಹಕ್ಕು ಹೊಂದುವಂತಿಲ್ಲ. ಅಕಸ್ಮಾತ್ ಯಾವ ಮಹಿಳೆಯಾದರೂ ಭೂಮಿ ಹೊಂದುವ ಪ್ರಯತ್ನ ಪಟ್ಟರೆ ಅವರನ್ನು ಮಾಟಗಾತಿಯರೆಂದು ಬಿಂಬಿಸಿ ಅವರಿಂದ ಸಮಾಜಕ್ಕೆ ಅವರಿಂದ ಸಮಾಜಕ್ಕೆ ತೊಂದರೆ ಉಂಟಾಗುವುದೆಂದು ದೂಷಿಸುತ್ತಾರೆ. ಈ ಮಹಿಳೆಯರನ್ನೂ ಭೌತಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸುತ್ತಾರೆ. ಇದಲ್ಲದೆ ಇವರನ್ನು ಜೀವಂತವಾಗಿ ಹೂಳುವ ಮತ್ತು ಸುಟ್ಟಿರುವ ಉದಾಹರಣೆಗಳಿವೆ. ಈ ರೀತಿ ಮಹಿಳಾ ಮಾಟಗಾತಿಯರೆಂದು ಬೇಟೆಯಾಡಿರುವ ದೃಷ್ಟಾಂತಗಳು ಮತ್ತು ದೊಬ್ರಿ ಜಿಲ್ಲೆಗಳಲ್ಲಿ ಜರುಗಿವೆ. ಆ ಸಮುದಾಯದ ಶಕ್ತಿವಂತ ಸದಸ್ಯರು ಸಂಪನ್ಮೂಲಗಳ ಮೇಲೆ ಹೊಂದುವ ನಿಯಂತ್ರಣ, ವೈಯಕ್ತಿಕ ದ್ವೇಷಗಳು ಹಾಗೂ ಬಲವಾಗಿ ಬೇರೂರಿರುವ ಮೂಢನಂಬಿಕೆಗಳು ಇತ್ಯಾದಿಗಳು ಅಮಾಯಕರ ಬೇಟೆಗೆ ಕಾರಣವಾಗಿರುವ ಕೆಲವು ಅಂಶಗಳಾಗಿವೆ.

### ಭೂದಾಖಲೆಗಳ ಗೈರು

ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಿಜೊರಾಂ, ಮೇಘಾಲಯ, ಮಣಿಪುರದ ಬೆಟ್ಟ ಗುಡ್ಡ ಪ್ರದೇಶ ಮತ್ತು ಅಸ್ಸಾಂನ ಕೆಲವು ಬುಡಕಟ್ಟು ಪ್ರದೇಶಗಳಲ್ಲಿ ಯಾವುದೇ ಲಿಖಿತ ಭೂದಾಖಲೆಗಳು ಲಭ್ಯವಿಲ್ಲ ಮತ್ತು ಭೂ ಕಂದಾಯ ಪಾವತಿಯು ಆಗಿರುವುದಿಲ್ಲ. ಈ ಭೂ ದಾಖಲೆಗಳ ಕೊರತೆಯು ಬಡ ಹಿಡುವಳಿದಾರರಿಗೆ ಅಭದ್ರತೆಯನ್ನುಂಟು ಮಾಡುತ್ತಿದ್ದು, ಸುಸ್ಥಿತಿಯಲ್ಲಿರುವ

ಕೆಲವೇ ಜನರು ಭೂಮಿಯನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಬಡ ಕೃಷಿಕರ ಬೇಸಾಯದ ಉತ್ಪನ್ನ ಪಡೆಯಲು ತಡೆಯೊಡ್ಡುತ್ತಿದ್ದಾರೆ. ಇದಲ್ಲದೆ ಸರ್ಕಾರದಿಂದ ಬರುವ ಸಹಾಯಧನ ಮತ್ತಿತರ ನೆರವನ್ನು ಈ ಸಮುದಾಯದ ಸ್ಥಿತಿವಂತರೇ ಪಡೆಯುತ್ತಿರುವುದು ಈ ರಾಜ್ಯಗಳಲ್ಲಿ ಬಡತನ ಮತ್ತು ಅಸಮಾನತೆ ಹೆಚ್ಚಾಗಲು ಕಾರಣವಾಗುತ್ತಿದೆ. ಜನ ಸಾಮಾನ್ಯರ ಭೂಮಿಯನ್ನು ಸ್ಥಿತಿವಂತರು ಪಡೆಯುವ ಮೂಲಕ ಉಂಟಾಗುವ ಭೂ ಖಾಸಗೀಕರಣವನ್ನೂ ಅದು ಸಂಬಂಧಗಳ ಜೊತೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡಬಹುದೆಂದು ಧನಾತ್ಮಕವಾಗಿ ಅವಲೋಕಿಸಲಾಗುತ್ತದೆ. ಆದ್ದರಿಂದಲೆ ಇಲ್ಲಿ ಸಾಮಾಜಿಕ ಸಹ ಸಂಬಂಧಗಳು ಸೃಷ್ಟಿಯಾಗಿ ಅವು ಅಸಮಾನತೆಯ ಹೆಚ್ಚಳಕ್ಕೆ ಕಾರಣವಾಗುತ್ತವೆ.

**ಕಡಿಮೆ ವೆಚ್ಚದ ಬಂಡವಾಳ ಸಾಮರ್ಥ್ಯ**

ಸ್ವಾಯತ್ತ ಜಿಲ್ಲಾ ಮಂಡಳಿಯು ಸಂವಿಧಾನಾತ್ಮಕ ಸಂಸ್ಥೆಯಾಗಿದ್ದರೂ ಅದಕ್ಕೆ ಸಾಕಷ್ಟು ಹಣ ಹೊಂದಾಣಿಕೆಯ ಬೆಂಬಲವಿಲ್ಲ. ಇದರಿಂದ ತಮಗೆ ಹಂಚಿಕೆಯಾಗಿರುವ ಅಂಶಗಳ ಮೇಲೆ ವ್ಯವಹರಿಸಲು ಈ ಮಂಡಳಿ ಅಸಮರ್ಥವಾಗಿದ್ದು ಇದು ಜನರಲ್ಲಿ ಅತೃಪ್ತಿ ಉಂಟು ಮಾಡುತ್ತದೆ. ಆದ ಕಾರಣ ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಯೋಜನೆಯಡಿ ಮಧ್ಯಂತರ ಅನುದಾನ ಮಂಜೂರು ಮಾಡುವ ಪ್ರಯತ್ನದಲ್ಲಿದೆ. ಆದರೂ ಈ ಮಂಡಳಿಗಳ ಮತ್ತು ರಾಜ್ಯ ಸರ್ಕಾರಗಳ ಕಡಿಮೆ ವೆಚ್ಚ ಮಾಡುವ ಸಾಮರ್ಥ್ಯದ ಕಾರಣ ಒಟ್ಟಾರೆ ವೆಚ್ಚ ನಿರ್ವಹಣೆ ಬಹಳಷ್ಟು ಕಡಿಮೆಯಾಗಿದೆ. ಉದಾಹರಣೆಗೆ ಕೇಂದ್ರ ಬಜೆಟ್‌ನ ಶೇ. 10 ರಷ್ಟು ಹಣವನ್ನೂ ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ ಮೀಸಲಿರಿಸಿದೆ ಮತ್ತು ವೆಚ್ಚ ಮಾಡದ ಬಾಕಿಹಣವನ್ನು ರದ್ದಾಗದ ಬಾಬ್ತುವಿಗೆ ವರ್ಗಾಯಿಸಲಾಗಿದೆ. ಆದರೂ ಒಟ್ಟಾರೆ ಹಣದಲ್ಲಿ ಈ ರಾಜ್ಯಗಳ ಅಭಿವೃದ್ಧಿಗೆ ಹಂಚಿಕೆಯಾಗುತ್ತಿರುವ ಬಂಡವಾಳ ಅಷ್ಟೇನೂ ತೃಪ್ತಿಕರವಾಗಿಲ್ಲ. ಈ ರಾಜ್ಯಗಳು ಕೇಂದ್ರಕ್ಕೆ ಕಳುಹಿಸುವ ಪ್ರಸ್ತಾಪಗಳು ಅಷ್ಟೇನೂ ಉತ್ತಮವಾಗಿರುವುದು ಮತ್ತು ಕೇಂದ್ರದಿಂದ ಪಡೆಯುವ ಅನುದಾನವನ್ನು ಉತ್ತಮವಾಗಿ ಖರ್ಚು ಮಾಡಲು ಅಸಾಮರ್ಥ್ಯ ತೋರುತ್ತಿರುವುದು ಅಲ್ಲಿನ ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಇದಲ್ಲದೆ ಅನೇಕ ಬಾಹ್ಯ ಯೋಜನೆಗಳಿಗೆ ಅನೇಕ ನಿಯಮಗಳ ಪಾಲನೆಯಲ್ಲಿ (ಪರಿಸರ ಇಲಾಖಾ ಅನುಮತಿ ಭೂ ಶಾಸನ ಪಾಲನೆ) ಉಂಟಾಗಿರುವ ತೊಡಕಿನಿಂದ ಹಣ ವೆಚ್ಚ ಮಾಡಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಮಾಡಿರುವ ಹಣ ವೆಚ್ಚದ ಪ್ರಮಾಣ ಪತ್ರಸಲ್ಲಿಸದಿರುವಿಕೆ, ಯೋಜನೆಯ ಸಮಗ್ರ ವರದಿ ಸಲ್ಲಿಸದಿರುವಿಕೆ, ರಾಜ್ಯಮಟ್ಟದ ಹಣ ಮಂಜೂರು ಮಾಡುವ ಸಭೆ ಕರೆಯಲು ತಡಮಾಡುವುದು ಇತ್ಯಾದಿಗಳು ಹಣದ ಕಡಿಮೆ ಹಂಚಿಕೆಗೆ ಕಾರಣವಾದ ಕೆಲವು ಸಾಮಾನ್ಯ ಅಂಶಗಳಾಗಿವೆ. ಹಣ ಮಂಜೂರು ಮಾಡುವುದಷ್ಟನ್ನೇ ಒಳಗೊಂಡಿರುವುದಿಲ್ಲ. ಅದು ಅದೇ ಸಮಯದಲ್ಲಿ ಯೋಜನೆಗೆ ಬೇಕಾದ ಹುದ್ದೆಗಳ ಮಂಜೂರು, ಅವಶ್ಯಕ ಸಾಮಗ್ರಿಗಳ ಕಲೆ ಹಾಕುವಿಕೆ ಮತ್ತು ಯೋಜನಾ ಸ್ಥಳಕ್ಕೆ ಅವುಗಳ ಸಾಗಾಣಿಕೆ ಮತ್ತು ಇವೆಲ್ಲಕ್ಕಿಂತ ಮುಖ್ಯವಾಗಿ ಸರಿಯಾದ ಕಾಲಕ್ಕೆ ಕಾಮಗಾರಿಗಳಿಗೆ ಟೆಂಡರ್ ಕರೆಯುವಿಕೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಮಣಿಪುರ, ನಾಗಾಲ್ಯಾಂಡ್ ರಾಜ್ಯಗಳಲ್ಲಿ ನರೇಗಾ ಬಂಡವಾಳದ ಕಡಿಮೆ ಹಂಚಿಕೆಗೆ ಪ್ರಮುಖ ಕಾರಣವೆಂದರೆ ಜಿಲ್ಲಾ ಮಟ್ಟದಲ್ಲಿನ ಆನ್‌ಲೈನ್ ಸಂಪರ್ಕ ಜಾಲ ವ್ಯವಸ್ಥೆ ಅತ್ಯಂತ ಕನಿಷ್ಠವಾಗಿರುವುದರಿಂದ ಆನ್‌ಲೈನ್‌ನಲ್ಲಿ ಈ ಮೇಲಿನ ಎಲ್ಲಾ ಕ್ರಿಯೆಗಳನ್ನು ಕೈಗೊಳ್ಳಲು ಕಷ್ಟವಾಗುತ್ತಿರುವುದು.

**ಕ್ರಿಯಾಶೀಲ**

ರಾಜ್ಯ ಸರ್ಕಾರಗಳು ಯೋಜನಾ ಇಲಾಖೆಗಳನ್ನು ಬಲಗೊಳಿಸಿದರೆ ಈ ರೀತಿಯ ಮಂದಗತಿಯನ್ನು ತೆರೆಯಬಹುದಲ್ಲದೆ ಅದನ್ನು ಚುರುಕುಗೊಳಿಸಬಹುದಾಗಿದೆ. ಕಟು ಸತ್ಯವೇನೆಂದರೆ ಬಾಹ್ಯ ಧನಸಹಾಯ ಪಡೆಯಲು ಮತ್ತು ಭಾರತ ಸರ್ಕಾರದಿಂದ ಹೆಚ್ಚುವಿಧಪಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರಗಳು ತಯಾರಿಸಿ ಕಳುಹಿಸುತ್ತಿರುವ ಯೋಜನಾ ಪ್ರಸ್ತಾಪಗಳು ಅಷ್ಟೇನೂ ಉತ್ತಮವಾಗಿಲ್ಲದಿರುವುದು ಸಹ ಅವುಗಳ ಕಡಿಮೆ ಸಹಾಯಧನ ಪಡೆಯಲು ಕಾರಣವಾಗಿದೆ. ಬುಡಕಟ್ಟು ಜನಾಂಗಗಳ ಅವಶ್ಯಕತೆ ಮತ್ತು ಅವರ ವಾಂಛೆಗಳನ್ನು ಗಮನದಲ್ಲಿಟ್ಟುಕೊಳ್ಳುವ ಒಂದು ಬಲಯುತವಾದ ಯೋಜನಾ ಇಲಾಖೆಯು ರಾಜ್ಯದ ಅರ್ಹತಾ ಕಾರ್ಯಗಳ ಮೇಲೆ ವಿಶಾಲವಾದ ದೀರ್ಘ



ಅವಧಿಯ ಕಾರ್ಯಸೂಚಿ ತಯಾರಿಸಿ ಅದರ ಆಧಾರದ ಮೇಲೆ ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡು ಅದರ ಅನುಷ್ಠಾನಕ್ಕೆ ಸೂಕ್ತ ನಿರ್ವಹಣೆ ಮಾಡಿಕೊಂಡು ಅಗತ್ಯವೆನಿಸಿದರೆ ಯೋಜನೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಯೋಜನೆಯ ಗುರಿ ಮತ್ತು ಉದ್ದೇಶಗಳನ್ನೂ ಗರಿಷ್ಠ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಬೇಕು.

**ಇತರೆ ವಿಚಾರಗಳು**

ಕೇವಲ ಗುಡ್ಡಗಾಡು ಪ್ರದೇಶಗಳಷ್ಟೆ ಅಲ್ಲ. ಸಿಕ್ಕಿಂ ಹೊರತು ಪಡಿಸಿ ಪೂರ್ತಿ ಈಶಾನ್ಯ ರಾಜ್ಯಗಳಲ್ಲಿ ಕಡಿಮೆ ತಲಾದಾಯ ಖಾಸಗಿ ಹೂಡಿಕೆಯ ಕೊರತೆ, ಕಡಿಮೆ ಬಂಡವಾಳ ಕ್ರೋಢೀಕರಣ, ಮೂಲ ಸೌಕರ್ಯಗಳ ಕೊರತೆ ಇತ್ಯಾದಿಗಳು ಆ ರಾಜ್ಯಗಳ ಗಮನಾರ್ಹ ಲಕ್ಷಣಗಳಾಗಿವೆ. ಈ ರಾಜ್ಯಗಳು ರಸ್ತೆ, ರೈಲು ಮತ್ತು ವಿಮಾನ ಸಂಪರ್ಕಗಳಿಂದ ವಂಚಿತರಾಗಿರುವುದು, ಅವುಗಳ ಇನ್ನೊಂದು ಋಣಾತ್ಮಕ ಅಂಶವಾಗಿದೆ. ಶಕ್ತಿ ಮೂಲಗಳ ಕೊರತೆ ಇನ್ನೊಂದು ಸಮಸ್ಯೆಯಾಗಿದೆ. ಕಿರು ಜಲವಿದ್ಯುತ್ ಕೇಂದ್ರಗಳು ಮತ್ತು ಇತರೆ ನವೀಕರಿಸುವ ಶಕ್ತಿ ಮೂಲಗಳ ಸ್ಥಾಪನೆಯ ಅವಶ್ಯಕತೆ ಇದೆ. ಈ ರಾಜ್ಯಗಳ ತೆರಿಗೆ ಸಂಗ್ರಹಣೆ ಮತ್ತು ಆಂತರಿಕ ಸಂಪನ್ಮೂಲಗಳು ಬಹಳ ಕಡಿಮೆ ಇರುವ ಕಾರಣ ಇವು ಪೂರ್ತಿಯಾಗಿ ಕೇಂದ್ರ ಸರ್ಕಾರವನ್ನೇ ಅವಲಂಭಿಸಿವೆ. ಸ್ಥಳೀಯ ಗುಡ್ಡಗಾಡು ಸ್ಥಿತಿವಂತರು ಭೂ ಸ್ಥಿರಾಸ್ತಿಗಳ ಮೇಲೆ ಮಾತ್ರ ಹೂಡಿಕೆಗೆ ಇಷ್ಟ ಪಡುತ್ತಾರೆ. ಆದರೆ ಅಪಾಯದ ಹೂಡಿಕೆಗೆ ಹಿಂಜರಿಯುತ್ತಾರೆ.


ಭಾರತ ಸರ್ಕಾರದ ಒಟ್ಟು ಹೂಡಿಕೆಯ ಜೊತೆಗೆ ಆ ರಾಜ್ಯಗಳು ತಮ್ಮ ಆಡಳಿತವನ್ನು ಸುಧಾರಿಸಿಕೊಳ್ಳಬೇಕು.

(27ನೇ ಪುಟಕ್ಕೆ)

ಚಿಂತನೆ

# ಮೇಘಾಲಯದಲ್ಲಿ ಸ್ವಾಯತ್ತ ಮಂಡಳಿಗಳ ಪಾತ್ರ

* ಡಾ. ಚಿಂತಾಮಣಿ ರಾವತ್



ಜನಾಭಿಪ್ರಾಯ ಮತ್ತು ಸಮ್ಮತಿಯನ್ನು ಮುಕ್ತವಾಗಿ ವ್ಯಕ್ತಗೊಳಿಸುತ್ತಾ ಅದರ ಆಧಾರದಲ್ಲಿ ತಮ್ಮ ಅಗತ್ಯ ಸಾಮಾಜಿಕ ಆಗುಹೋಗುಗಳನ್ನು ನೋಡಿಕೊಳ್ಳುವ ಮತ್ತು ನಿರ್ವಹಿಸುವ ಖಾಸಿ ಹಿಲ್ ಗಳಲ್ಲಿನ ಬುಡಕಟ್ಟು ಜನರ ಸ್ವಯಂ ಸರ್ಕಾರದ ಪರಿಕಲ್ಪನೆಯು ಶತಮಾನಗಳಷ್ಟು ಹಳೆಯದು.

ಮೇಘಾಲಯವನ್ನು ಏಪ್ರಿಲ್ 2, 1970ರಲ್ಲಿ ಒಂದು ಸ್ವಾಯತ್ತ ರಾಜ್ಯವಾಗಿ ರಚಿಸಲಾಯಿತು. ಇದು ಯುನೈಟೆಡ್ ಖಾಸಿ–ಜೈನ್ತಿಯ ಹಿಲ್ಸ್ ಜಿಲ್ಲೆ ಮತ್ತು ಗಾರೊ ಹಿಲ್ ಜಿಲ್ಲೆಗಳನ್ನು ಒಳಗೊಂಡಿದ್ದು ಅದು ಜನವರಿ 21, 1972ರಲ್ಲಿ ಪೂರ್ಣ ರಾಜ್ಯದ ಸ್ಥಾನವನ್ನು ಪಡೆಯಿತು. ಸ್ಥಳೀಯ ಸ್ವಯಮಾಡಳಿತವು ಪ್ರಜಾತಂತ್ರದ ತಳಹದಿ. ಖಾಸಿ ಬುಡಕಟ್ಟು ತನ್ನ ಸಮಾಜದಲ್ಲಿ ಆಳವಾಗಿ ತಳವೂರಿದ ಮತ್ತು ಇನ್ನೂ ಜೀವಂತವಾಗಿರುವ ತನ್ನದೇ ಸಾಂಪ್ರದಾಯಿಕ ಸಾಮಾಜಿಕ–ರಾಜಕೀಯ ಸಂಸ್ಥೆಯನ್ನು ಹೊಂದಿತ್ತು. ಇಂದಿಗೂ ಕೂಡ ಈ ಸಂಸ್ಥೆಗಳು ಜನರ ದೈನಂದಿನ ಆಡಳಿತಕ್ಕೆ ಜವಾಬ್ದಾರಿಯುತವಾಗಿವೆ.

ಜನಾಭಿಪ್ರಾಯ ಮತ್ತು ಸಮ್ಮತಿಯನ್ನು ಮುಕ್ತವಾಗಿ ವ್ಯಕ್ತಗೊಳಿಸುತ್ತಾ ಅದರ ಆಧಾರದಲ್ಲಿ ತಮ್ಮ ಅಗತ್ಯ ಸಾಮಾಜಿಕ ಆಗುಹೋಗುಗಳನ್ನು ನೋಡಿಕೊಳ್ಳುವ ಮತ್ತು ನಿರ್ವಹಿಸುವ ಖಾಸಿ ಹಿಲ್ ಗಳಲ್ಲಿನ ಬುಡಕಟ್ಟು ಜನರ ಸ್ವಯಂ ಸರ್ಕಾರದ ಪರಿಕಲ್ಪನೆಯು ಶತಮಾನಗಳಷ್ಟು ಹಳೆಯದು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಭೂಮಿ ಮತ್ತು ಅರಣ್ಯ ಸಂಪನ್ಮೂಲಗಳ ಹಿತಾಸಕ್ತಿಯನ್ನೂ ಸೇರಿದಂತೆ, ಈಶಾನ್ಯ ಭಾರತದ ಬುಡಕಟ್ಟು ಜನರ ಹಿತಾಸಕ್ತಿಯನ್ನು ರಕ್ಷಿಸುವ ಅಗತ್ಯವನ್ನು ಭಾರತ ಸಂವಿಧಾನ ರಚನಾಕಾರರು ಅರಿತರು. ಇದು ಸ್ವಾಯತ್ತ ಜಿಲ್ಲಾ ಮಂಡಳಿಗಳ ಸ್ಥಾಪನೆಗೆ ಅವಕಾಶ ಒದಗಿಸಿದ ಆರನೆಯ ಷೆಡ್ಯೂಲನ್ನು ರೂಪಿಸುವುದಕ್ಕೆ ಎಡೆ ಮಾಡಿಕೊಟ್ಟಿತು. ಹೀಗಾಗಿ, ಭಾರತ ಸಂವಿಧಾನದ ಆರನೆಯ ಷೆಡ್ಯೂಲಿನ ಅನುಸಾರವಾಗಿ ಯುನೈಟೆಡ್ ಖಾಸಿ ಮತ್ತು ಜೈನ್ತಿಯ ಹಿಲ್ ಜಿಲ್ಲೆಗಳಲ್ಲಿ ಸ್ವಾಯತ್ತ ಯುನೈಟೆಡ್ ಖಾಸಿ–ಜೈತಿಯ ಜಿಲ್ಲಾ ಮಂಡಳಿಗಳನ್ನು ಸ್ಥಾಪಿಸಲಾಯಿತು. ನಂತರ ಅದನ್ನು ಖಾಸಿ ಹಿಲ್ಸ್ ಸ್ವಾಯತ್ತ ಜಿಲ್ಲಾ ಮಂಡಳಿ (ಕೆಹೆಚ್ಎಡಿಸಿ) ಮತ್ತು ಜೈನ್ತಿಯ ಹಿಲ್ಸ್ ಸ್ವಾಯತ್ತ ಜಿಲ್ಲಾ ಮಂಡಳಿ (ಜೆಹೆಚ್ಎಡಿಸಿ) ಎಂಬ ಹೆಸರಿನ ಎರಡು ಸ್ವಾಯತ್ತ ಜಿಲ್ಲಾ ಮಂಡಳಿಯಾಗಿ ಮಾಡಲಾಯಿತು. ಸ್ವಾಯತ್ತ ಜಿಲ್ಲಾ ಮಂಡಳಿ ಆಡಳಿತ ಪ್ರದೇಶಗಳ ಮಾರ್ಪಾಡು ಅಥವಾ ರದ್ದತಿಯ ಅಂತಿಮ ಅಧಿಕಾರವನ್ನು ರಾಜ್ಯಪಾಲರು ಹೊಂದಿರುತ್ತಾರೆ.

**ಜಿಲ್ಲಾ ಮತ್ತು ಪ್ರಾದೇಶಿಕ ಮಂಡಳಿ ರಚನೆ**

ಆರನೇ ಷೆಡ್ಯೂಲ್ ಪ್ರಕಾರ ಪ್ರತಿ ಸ್ವಾಯತ್ತ ಜಿಲ್ಲೆಯಲ್ಲಿ ಒಂದು ಜಿಲ್ಲಾ ಮಂಡಳಿ ಇರತಕ್ಕದ್ದು. ಅದರಲ್ಲಿ ಮೂವತ್ತು ಸದಸ್ಯರಿಗಿಂತ ಹೆಚ್ಚಿರದ, ಅವರ ಪೈಕಿ ನಾಲ್ಕು ವ್ಯಕ್ತಿಗಳಿಗಿಂತ ಹೆಚ್ಚಿರದಂತೆ ರಾಜ್ಯಪಾಲರಿಂದ ನೇಮಿಸಲ್ಪಟ್ಟವರು ಮತ್ತು ಮಿಕ್ಕವರು ಸಾರ್ವತ್ರಿಕ ಚುನಾವಣೆ ಮೂಲಕ ಆಯ್ಕೆಯಾಗಿರುವವರು ಇರುತ್ತಾರೆ.

ಷೆಡ್ಯೂಲಿನ ಅಡಿಯಲ್ಲಿ ರಚಿತವಾದ ಪ್ರತಿಯೊಂದು ಸ್ವಾಯತ್ತ ಪ್ರದೇಶದಲ್ಲಿ ಒಂದು ಪ್ರತ್ಯೇಕ ಪ್ರಾದೇಶಿಕ ಮಂಡಳಿ ಇರತಕ್ಕದ್ದು. ಪ್ರತಿಯೊಂದು ಜಿಲ್ಲಾ ಮತ್ತು ಪ್ರಾದೇಶಿಕ ಮಂಡಳಿ ಕ್ರಮವಾಗಿ ಆಯಾ ಜಿಲ್ಲಾ ಮತ್ತು ಆಯಾ ಪ್ರದೇಶದ ಹೆಸರು ಹೊಂದಿರುತ್ತದೆ. ಈ ಜಿಲ್ಲೆ, ಅಥವಾ ಪ್ರದೇಶಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಬುಡಕಟ್ಟು ಮಂಡಳಿ ಹಾಗೂ ಇತರೆ ಬುಡಕಟ್ಟು ಪ್ರಾತಿನಿಧಿತ್ವ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿ ಸಲಹೆಗಳನ್ನು ಕ್ರೋಢೀಕರಿಸಿ ಸಂವಿಧಾನದ ನಿಯಮಗಳನ್ನು ಮಾಡಬೇಕಾಗಿರುತ್ತದೆ.

* ಮುಖ್ಯಸ್ಥರು, ಕಾನೂನು ವಿಭಾಗ, ನಾರ್ತ್ ಈಸ್ಟರ್ನ್ ಹಿಲ್ ಯೂನಿವರ್ಸಿಟಿ, ಶಿಲ್ಲಾಂಗ್. E-mail : drchintamanirout@gmail.com

**ಕಾನೂನು ರಚಿಸುವ ಅಧಿಕಾರ**

ಜಿಲ್ಲಾ ಸ್ವಾಯತ್ತ ಮಂಡಳಿಗಳು ತಮ್ಮ ವ್ಯಾಪ್ತಿಯ ಪ್ರದೇಶದ ಭೂಮಿ ವಿಷಯದಲ್ಲಿ ಸಂಪೂರ್ಣ ಅಧಿಕಾರ ಹೊಂದಿರುತ್ತವೆ.

ಕೃಷಿ ಅಥವಾ ಹುಲ್ಲು ಮೇವಿನ ಉದ್ದೇಶಕ್ಕಾಗಿ ಮೀಸಲಾದ ಅರಣ್ಯದ ಯಾವುದೇ ಭೂಮಿಯನ್ನು ಬಿಟ್ಟು ಹಂಚಿಕೆ, ವಾಸ ಅಥವಾ ಬಳಕೆ, ಅಥವಾ ವಸತಿ ಅಥವಾ ಇತರೆ ಕೃಷಿಯೇತರ ಉದ್ದೇಶಗಳಿಗೆ ಅಥವಾ ಯಾವುದೇ ಹಳ್ಳಿ ಅಥವಾ ಪಟ್ಟಣದ ನಿವಾಸಿಗಳ ಹಿತಾಸಕ್ತಿಗೆ ಪ್ರೇರಕವಾಗಿರುವ ಸಾಧ್ಯತೆಯ ಇತರೆ ಯಾವುದೇ ಉದ್ದೇಶಗಳಿಗೆ ಅಥವಾ ಭೂಮಿಯ ಸ್ವಲ್ಪ ಭಾಗವನ್ನು ನಿಗದಿಮಾಡುವುದು; ಒಂದು ಮೀಸಲು ಅರಣ್ಯವಾಗಿರದ ಯಾವುದೇ ಅರಣ್ಯದ ನಿರ್ವಹಣೆ; ಕೃಷಿ ಉದ್ದೇಶಕ್ಕಾಗಿ ಯಾವುದೇ ಕಾಲುವೆ ಅಥವಾ ನೀರು–ಹರಿವಿನ ಬಳಕೆ; ಜುಮ್ ಅಥವಾ ಇತರೆ ರೀತಿಯ ವರ್ಗಾವಣೆ ಕೃಷಿ ಅಭ್ಯಾಸದ ನಿಯಮಾವಳಿಗಳು; ಹಳ್ಳಿ ಅಥವಾ ಪಟ್ಟಣ ಸಮಿತಿಗಳು ಅಥವಾ ಪ್ರಾಧಿಕಾರಗಳ ಸ್ಥಾಪನೆ ಮತ್ತು ಅವುಗಳ ಅಧಿಕಾರಗಳು; ಹಳ್ಳಿ ಅಥವಾ ಪಟ್ಟಣ ಪೋಲಿಸು ಮತ್ತು ಸಾರ್ವಜನಿಕ ಹಾಗೂ ನೈರ್ಮಲ್ಯ ಮುಖ್ಯಸ್ಥರ ನೇಮಕಾತಿ ಅಥವಾ ವಾರಸುದಾರಿಕೆ ಸೇರಿದಂತೆ ಹಳ್ಳಿ ಅಥವಾ ಪಟ್ಟಣ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಇತರೆ ವಿಷಯಗಳು; ಆಸ್ತಿ ವಾರಸುದಾರಿಕೆ, ಮದುವೆ ಮತ್ತು ವಿಚ್ಛೇದನೆ ಹಾಗೂ ಸಾಮಾಜಿಕ ಆಚರಣೆಗಳ ಕುರಿತಾಗಿ ಕಾನೂನನ್ನು ರಚಿಸುವ ಅಧಿಕಾರವನ್ನು ಹೊಂದಿರುತ್ತವೆ.

**ನ್ಯಾಯಾಡಳಿತ**

6ನೇ ಷೆಡ್ಯೂಲಿನ ನಿಬಂಧನೆಗಳು ಅನ್ವಯಿಸುವ ಇತರೆ ವ್ಯಾಜ್ಯಗಳು ಮತ್ತು ಪ್ರಕರಣಗಳನ್ನು ಹೊರತು ಪಡಿಸಿ, ಜಿಲ್ಲೆಯೊಳಗೆ, ಅಂತಹ ಪ್ರದೇಶಗಳೊಳಗಿನ ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಎಲ್ಲ ಕಕ್ಷಿಗಳ ನಡುವಿನ ವ್ಯಾಜ್ಯಗಳು ಮತ್ತು ಪ್ರಕರಣಗಳ ವಿಚಾರಣೆಗಾಗಿ ಹಳ್ಳಿ ಮಂಡಳಿಗಳು ಮತ್ತು ನ್ಯಾಯಾಲಯಗಳನ್ನು ರಚಿಸಬಹುದು ಮತ್ತು ಸೂಕ್ತ ವ್ಯಕ್ತಿಗಳನ್ನು ಅಂತಹ ಹಳ್ಳಿ ಮಂಡಳಿಗಳ ಸದಸ್ಯರಾಗಿ ಮತ್ತು ನ್ಯಾಯಾಲಯಗಳ ಅಧ್ಯಕ್ಷೀಯ ಅಧಿಕಾರಿಗಳಾಗಿ ನೇಮಿಸಬಹುದು,



ಮತ್ತು ಈ ಷೆಡ್ಯೂಲಿನ ಅಡಿಯಲ್ಲಿ ಕಾನೂನು ಆಡಳಿತಕ್ಕೆ ಅಗತ್ಯವಾದ ಅಂತಹ ಅಧಿಕಾರಿಗಳನ್ನೂ ಕೂಡ ನೇಮಿಸಬಹುದು. ಉಚ್ಚನ್ಯಾಯಾಲಯವು, ರಾಜ್ಯಪಾಲರು ಕಾಲಕಾಲಕ್ಕೆ ಆದೇಶದ ಮೂಲಕ ವಿಶ್ಲೇಷಿಸುವ, ಈ ಷೆಡ್ಯೂಲಿನ ನಿಬಂಧನೆಗಳು ಅನ್ವಯಿಸುವ ವ್ಯಾಜ್ಯಗಳು ಮತ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿಕಾರ ಕ್ಷೇತ್ರವನ್ನು ಹೊಂದಿರುತ್ತದೆ.

**ಪ್ರಾಥಮಿಕ ಶಾಲೆ ಸ್ಥಾಪನೆ**

ಸ್ವಾಯತ್ತ ಜಿಲ್ಲಾ ಮಂಡಳಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳು, ಆಸ್ಪತ್ರೆಗಳು, ಮಾರುಕಟ್ಟೆಗಳು, ಹಾಯ್ಗಡಗಳು, ಮೀನುಗಾರಿಕೆ ರಸ್ತೆಗಳು, ರಸ್ತೆ ಸಾರಿಗೆ ಮತ್ತು ಜಲಮಾರ್ಗಗಳನ್ನು ಸ್ಥಾಪಿಸಬಹುದು, ರಚಿಸಬಹುದು ಅಥವಾ ನಿರ್ವಹಿಸಬಹುದು ಮತ್ತು ರಾಜ್ಯಪಾಲರ ಪೂರ್ವಾನುಮತಿಯಿಂದ ಪ್ರಕಾರ ಅವುಗಳ ನಿಯಂತ್ರಣ ಹಾಗೂ ನಿರ್ವಹಣೆಗಾಗಿ ನಿಯಮಗಳನ್ನು ರಚಿಸಬಹುದು, ಮತ್ತು ನಿರ್ದಿಷ್ಟವಾಗಿ, ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಒದಗಿಸಬೇಕಾದ ಪ್ರಾಥಮಿಕ ಶಿಕ್ಷಣದ ರೀತಿ ಹಾಗೂ ಭಾಷೆಯನ್ನು ನಿಗದಿ ಪಡಿಸಬಹುದು.

**ಜಿಲ್ಲಾ ಮತ್ತು ಪ್ರಾದೇಶಿಕ ನಿಧಿಗಳು**

ಪ್ರತಿ ಸ್ವಾಯತ್ತ ಜಿಲ್ಲಾ ಮಂಡಳಿ, ಸಂದರ್ಭೋಚಿತವಾಗಿ, ಸಂವಿಧಾನಗಳ ನಿಬಂಧನೆಗಳಿಗೆ ಅನುಗುಣವಾಗಿ, ಆಯಾ ಜಿಲ್ಲೆ ಮತ್ತು ಪ್ರಾದೇಶಿಕ ಮಂಡಳಿಗಾಗಿ ಸ್ವೀಕರಿಸುವ ಎಲ್ಲಾ ಹಣವನ್ನು ಒಳಗೊಂಡ ಒಂದು ಜಿಲ್ಲಾ ನಿಧಿ, ಒಂದು ಪ್ರಾದೇಶಿಕ ನಿಧಿಯನ್ನು ಹೊಂದಿವೆ.

ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾದವರು, ಅಧ್ಯಕ್ಷರ ಅನುಮತಿಯಿಂದ, ನಿಗದಿಪಡಿಸಿದ, ಸ್ವರೂಪದಲ್ಲಿ, ಜಿಲ್ಲಾ ಮಂಡಳಿಯ ಅಥವಾ ಸಂದರ್ಭಾನುಸಾರವಾಗಿ, ಪ್ರಾದೇಶಿಕ ಮಂಡಳಿಯ ಲೆಕ್ಕಪತ್ರ ಇಡಬೇಕಾಗುತ್ತದೆ.

**ಉಪಸಂಹಾರ**

ಜಿಲ್ಲಾ ಮಂಡಳಿ, ನಿಜವಾದ ಅರ್ಥದಲ್ಲಿ ಸರ್ವವ್ಯಾಪಿ ಅಭಿವೃದ್ಧಿ ಮತ್ತು ಕಲ್ಯಾಣವನ್ನು ಉಂಟುಮಾಡಿ ಬುಡಕಟ್ಟು ಜನರ ಆಕಾಂಕ್ಷೆಗಳನ್ನು ಪೂರೈಸುವ ಸಾಧನವಾಗಿದೆ.

ಮೇಘಾಲಯ ರಾಜ್ಯದಲ್ಲಿ, ಜಿಲ್ಲಾ ಮಂಡಳಿ ಹಾಗೂ ಪ್ರಾದೇಶಿಕ ಮಂಡಳಿಗಳ ಕಾರ್ಯವೈಖರಿಯು ಬಹಳ ತೃಪ್ತಿದಾಯಕವಾಗಿದೆ ಮತ್ತು ತನ್ನ ಸಂವಿಧಾನಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪ್ರಶಂಸನೀಯವಾಗಿದೆ. ಅದು ಶ್ರಮ ಸಂಸ್ಕೃತಿಯಲ್ಲಿ ಮತ್ತು ಬುಡಕಟ್ಟು ಜನರ ಏಳಿಗೆಗಾಗಿ ನಿಜವಾಗಿ ಕೆಲಸಮಾಡಲು ಬಯಸುವ ಅರ್ಹ/ ಮತ್ತು ಸಮರ್ಥ ಜನರನ್ನು ಮಂಡಳಿಗೆ ಚುನಾಯಿಸುವಲ್ಲಿ ಸುಧಾರಣೆ ಕಾಣಬೇಕಿದೆ.

ಆರನೆಯ ಷೆಡ್ಯೂಲಿನಿಂದಾಗಿ ಯಾವಾಗಲೂ ಜಿಲ್ಲಾ ಮಂಡಳಿ, ಭೂಮಿ, ಅರಣ್ಯ, ಮಾರುಕಟ್ಟೆ, ವ್ಯಾಪಾರ, ಸುಂಕ / ಆಚರಣೆ ಮತ್ತು ಬಳಕೆಗಳನ್ನೂ ಸೇರಿದಂತೆ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಬುಡಕಟ್ಟು ಸಮುದಾಯದ ಏಳಿಗೆಗೆ ಕಾನೂನನ್ನು ರೂಪಿಸಬಹುದಾಗಿದೆ ಮತ್ತು ಅದು ಭೂ ಕಂದಾಯ, ಪ್ರಾಥಮಿಕ ಶಿಕ್ಷಣ, ಸುಂಕ/ ಆಚರಣೆ ಕಾನೂನುಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ರಚನೆಗೆ ಮತ್ತು ಆಡಳಿತಕ್ಕೆ ಪೂರ್ಣ ಸ್ವಾಯತ್ತತೆಯನ್ನು ಹೊಂದಿದೆ. ಇದಕ್ಕಾಗಿ ಜಿಲ್ಲಾ ಮಂಡಳಿಯ ಸದಸ್ಯರಿಗೆ ತರಬೇತಿ ನೀಡುವ ಅಗತ್ಯವಿದೆ ಮತ್ತು ಜನರ ಹೆಚ್ಚು ಭಾಗವಹಿಸುವಿಕೆ ಮತ್ತು ನಿರತತೆಯು ಗಳಿಗೆಯ ಅವಶ್ಯಕತೆಯಾಗಿದೆ.

ಕೊನೆಯದಾಗಿ, ಇಡಿ ವ್ಯವಸ್ಥೆಯ ಸೂಕ್ತ ಮೌಲ್ಯೀಕರಣ ಮತ್ತು ಕಾಲಕಾಲಿಕ ಪುನರ್ ವಿಮರ್ಶೆಯ ಅಗತ್ಯವು ಬಹಳ ಮುಖ್ಯವೆಂಬುದನ್ನು ಗಮನಿಸಬೇಕಾಗಿದೆ. ತನ್ಮೂಲಕ ಸ್ವಾಯತ್ತ ಜಿಲ್ಲಾ ಮಂಡಳಿಯ ಸ್ಥಾಪನೆಯ ಉದ್ದೇಶ ಹಾಗೂ ಗುರಿಗಳು ಅರ್ಥಪೂರ್ಣವಾಗುತ್ತವೆ ಮತ್ತು ಬುಡಕಟ್ಟು ಜನರ ಹಿತಾಸಕ್ತಿ ಹಾಗೂ ಆಕಾಂಕ್ಷೆಗಳನ್ನು ಕಾಪಾಡಿದಂತಾಗುತ್ತದೆ. ❑

# ಈಶಾನ್ಯ ವಲಯದಲ್ಲಿ ಮೂಲಸೌಲಭ್ಯ

* ಕೃಷ್ಣ ದೇವ್



ಭಾರತದ ಆ್ಯಕ್ಟ್–ಈಸ್ಟ್ ಕಾರ್ಯನೀತಿ ಪುನರ್ ರೂಪುಗೊಂಡಿದೆ. ಈ ಕಾರ್ಯನೀತಿಯ ಉದ್ದೇಶವು ಆರ್ಥಿಕ ಸಹಕಾರ, ಸಾಂಸ್ಕೃತಿಕ ಬಾಂಧವ್ಯಗಳು ಹಾಗೂ ಏಷ್ಯಾ ಪೆಸಿಫಿಕ್ ವಲಯದ ರಾಷ್ಟ್ರಗಳ ಜೊತೆ ಯುಕ್ತ ಸಂಬಂಧಗಳನ್ನು ಬೆಳೆಸುವುದೇ ಆಗಿದೆ.

ಭಾರತದ ಬೇರೆಡೆಗಳಿಗಿಂತ ಈಶಾನ್ಯ ಪ್ರದೇಶ ವಿಭಿನ್ನ ವಲಯವಾಗಿದ್ದು, ಅದರದೇ ಸಮಸ್ಯೆಗಳಿಂದ ಕೂಡಿರುವುದು 1947ರ ಭಾರತ ವಿಭಜನೆಯ ದೆಸೆಯಿಂದ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಈಶಾನ್ಯ ಭಾರತವು ಈಗಿನ ಬಾಂಗ್ಲಾದೇಶದ ಮೂಲಕ ಹಾಗೂ ಪೂರ್ವದಲ್ಲಿ ಬರ್ಮಾದೊಡನೆ (ಮ್ಯಾನ್ಮಾರ್) ಸಂಬಂಧವನ್ನು ಹೊಂದಿತ್ತು. ಆದರೂ ರಸ್ತೆ ಹಾಗೂ ರೈಲು ಮಾರ್ಗ ಸೌಲಭ್ಯಗಳು ಅಪೇಕ್ಷಿತ ಮಟ್ಟಕ್ಕೆ ಇರಲಿಲ್ಲ. ಆದರೂ ಆಗಿನ ಭೂಸಂಪರ್ಕವಾಗಿದ್ದ 27 ಕಿ.ಮೀ.ಗಳ 'ಕೋಳಿಕತ್ತು' ಎನ್ನುವಷ್ಟು ಕಿರಿದಾದ ಮಾರ್ಗದಲ್ಲಿಯೇ ಇದ್ದ ಸಂಬಂಧದಿಂದ ಪರಿಸ್ಥಿತಿ ಚೆನ್ನಾಗಿಯೇ ಇದ್ದಿತು. ಗಡಿ ಪ್ರದೇಶಗಳು ಬಂದ್ ಆದಾಗ ಚಿಟ್ಟಗಾಂಗ್ ಬಂದರಿಗಿದ್ದ ಪ್ರವೇಶಮಾರ್ಗಕ್ಕೆ ಕತ್ತರಿ ಹಾಕಿದಂತಾಯಿತು. ಇದರಿಂದ ಆ ವಲಯವು ಸಮುದ್ರ ಮಾರ್ಗಗಳಿಂದ ದೂರವಾಯಿತು. ಒಟ್ಟಿನಲ್ಲಿ ರಾಜಕೀಯ ವಿಭಜನಾ ರೇಖೆಯಿಂದಾಗಿ ಈಶಾನ್ಯ ಭಾಗದ ಮಾರುಕಟ್ಟೆ ಹಾಗೂ ಉತ್ಪಾದನಾ ಕೇಂದ್ರಗಳು ಪ್ರತ್ಯೇಕಿಸಲ್ಪಟ್ಟವು. ಇದರಿಂದ ಆ ಇಡೀ ವಲಯದ ಜನರ ಉಪಜೀವನಕ್ಕೆ ಅತೀವ ಪೆಟ್ಟುಬಿದ್ದಿದೆ. ಪ್ರಸ್ತುತ, ಈಶಾನ್ಯ ವಲಯದ 96% ರಷ್ಟು ಗಡಿಭಾಗವು ಉತ್ತರದಲ್ಲಿ ಚೀನಾ ಮತ್ತು ಭೂತಾನ್, ಪೂರ್ವದಲ್ಲಿ ಮ್ಯಾನ್ಮಾರ್ ಹಾಗೂ ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಬಾಂಗ್ಲಾದೇಶಗಳೊಡನೆ ಸೇರಿದ ಅಂತಾರಾಷ್ಟ್ರೀಯ ಗಡಿಭಾಗಗಳಾಗಿವೆ.

ಭೂರಾಜಕೀಯದಿಂದಾಗಿ ಈ ವಲಯವು ತನ್ನ ಪ್ರಧಾನ ಮಾರುಕಟ್ಟೆಗಳು ಹಾಗೂ ವ್ಯಾಪಾರ ಮಾರ್ಗಗಳಿಂದ ದೂರವಾಗಿ ಅದರ ಆರ್ಥಿಕತೆಗೆ ಕುತ್ತುಂಟಾಗಿದೆ ಮತ್ತು ಈಶಾನ್ಯ ವಲಯದ ಆರ್ಥಿಕ ರಚನೆಗೆ ಅಪಾರ ಹಾನಿಯುಂಟಾಗಿದೆ. ಈಗಿನ ಸಂದರ್ಭದಲ್ಲಿ ಆರ್ಥಿಕವಾಗಿ ಮುಂದುವರಿಯುತ್ತಿರುವ ಮುಖ್ಯ ತಾಣವಾದ "ಪೂರ್ವದೆಡೆಗೆ" ಪ್ರಪಂಚದ ಗಮನವು ಕೇಂದ್ರೀಕೃತವಾಗಿದೆ. ಎಂದರೆ, ಆಗ್ನೇಯ ಏಶಿಯಾ ಈಶಾನ್ಯ ಭಾರತದಿಂದ ಆರಂಭಗೊಳ್ಳುತ್ತದೆ. ಇಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ಗತಿಶೀಲತೆ ಹಾಗೂ ಮಾರುಕಟ್ಟೆಗಳನ್ನು ಒಳಗೊಳ್ಳಲು ಅತಿಮುಖ್ಯವಾಗಿ ಸಾರಿಗೆ ಮಾರ್ಗಗಳ ಜೋಡಣೆ ಹಾಗೂ ಬೇರೆ ಮೂಲಸೌಲಭ್ಯಗಳ ಅಭಿವೃದ್ಧಿಯಾಗಬೇಕು.

ಭಾರತದ ಮುಖ್ಯ ಭೂಭಾಗದೊಡನೆ ವಲಯಾಂತರ ಹಾಗೂ ವಲಯಗಳಲ್ಲಿನ ಆಂತರಿಕ ಸಂಬಂಧಗಳು ಅತ್ಯಗತ್ಯ. ಅಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ವ್ಯವಹಾರಗಳ ನಿರ್ವಹಣೆ, ಗಡಿ ಸೌಲಭ್ಯಗಳಲ್ಲಿ ಸುಧಾರಣೆ ಮತ್ತು ನೆರೆ ರಾಷ್ಟ್ರಗಳೊಡನೆ ವ್ಯಾಪಾರ ಸೌಕರ್ಯಗಳ ಬೆಳವಣಿಗೆಯೂ ಬಹಳವೇ ಮುಖ್ಯವಾಗುತ್ತದೆ. ಈಶಾನ್ಯದ ಆರ್ಥಿಕತೆಗೆ ಕೃಷಿ ಈಗಲೂ ಪ್ರಧಾನವಾಗಿದೆ. ಕೈಗಾರಿಕಾ ಚಟುವಟಿಕೆಯು ಈಗಲೀಗ ಚಹಾ ಉತ್ಪಾದನೆ, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಗಣಿಗಾರಿಕೆ ಮತ್ತು ಉಕ್ಕು ತಯಾರಿಕೆಗಳು ಹೀಗೆ ಪರಿಮಿತ ಪ್ರದೇಶಗಳಲ್ಲಿ ಬೆಳೆಯುತ್ತಿದೆ. ಆದರೆ ಈ ಕೈಗಾರಿಕೆಗಳು ಬೆಳೆಯಬಹುದಾದ ಮಟ್ಟಕ್ಕೆ ತಲುಪಿಲ್ಲ. ಕೈಗಾರಿಕೆಯು ಸಮರ್ಪಕವಾಗಿ ಬೆಳೆಯದೆ ಇರುವುದರಿಂದ ಅಲ್ಲಿನ ಅಪಾರವಾದ ಸಂಪನ್ಮೂಲಗಳ ಬಳಕೆಯಾಗದೆ, ಉದ್ಯೋಗಾವಕಾಶಗಳಿಲ್ಲದೆ ಅಗತ್ಯವಿರುವ ಸೇವಾವಿಭಾಗದ ಮೇಲಿನ ಒತ್ತಡ ಹೆಚ್ಚುತ್ತಿದೆ. ಆದ್ದರಿಂದ ಸಾರಿಗೆ

* ಸಾರಿಗೆ ತಜ್ಞರು. E-mail : kd.krishnadev@gmail.com

ಸಂಪರ್ಕ ಸುಧಾರಿಸಿದರೆ ಇಂಥ ಒತ್ತಡ ತಗ್ಗಿ, ಹೆಚ್ಚಿನ ಸಮತೋಲನ ಉಂಟಾಗಬಹುದು.

ಈಶಾನ್ಯದೆಡೆಗೆ ಕಾರ್ಯನೀತಿ (1991), ಈಶಾನ್ಯ ಕೈಗಾರಿಕಾ ಹಾಗೂ ಬಂಡವಾಳ ತೊಡಗಿಸಲು ಪ್ರೋತ್ಸಾಹ ಕಾರ್ಯನೀತಿ (2007) ಮತ್ತು 2008ರಲ್ಲಿ ಈಶಾನ್ಯ ಭಾಗದ ಮುನ್ನೋಟ 2020 – ಸರ್ಕಾರದ ಇಂತಹ ಕೆಲವು ಆರಂಭಿಕ ಹೆಜ್ಜೆಗಳು ಸರಿಯಾದ ದಿಕ್ಕಿನ ಪ್ರಯತ್ನಗಳೇ. ಆದರೆ ಇವಕ್ಕೆ ಹೊಂದಿಕೊಂಡಂತೆ ಸರಿಯಾದ ಕ್ರಮಗಳಿಗೆ ಒತ್ತು ಕೊಡಬೇಕು. ಈಶಾನ್ಯದಲ್ಲಿ ಬಂಡವಾಳಗಳನ್ನು ತೊಡಗಿಸುವ ಯೋಜನೆಗಳಾಗಿದ್ದರೂ, ಅಲ್ಲಿನ ಮೂಲಸೌಕರ್ಯಗಳು ಅತಿ ಕೆಳಮಟ್ಟದಲ್ಲಿವೆ. ಇದು ಬೆಳವಣಿಗೆಗೆ ತಡೆಯೊಡ್ಡಿರುವ ಒಂದು ಬಹಳವೇ ದೊಡ್ಡ ಅಡಚಣೆಯೆಂದು ಮುನ್ನೋಟ ಡಾಕ್ಯುಮೆಂಟಿನಲ್ಲಿ ಗುರುತಿಸಲ್ಪಟ್ಟಿದೆ.

ಈಗಿನ ಸರ್ಕಾರವು, ಭಾರತದ ಈಶಾನ್ಯದೆಡೆಗೆ ಕಾರ್ಯನೀತಿ ಎಂಬುದರ ಬಗೆಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ಆಸಿಯಾನ್ ಶೃಂಗಸಭೆ ಮ್ಯಾನ್ಮಾರಿನಲ್ಲಿ ನವೆಂಬರ್ 2014ರಲ್ಲಿ ನಡೆದಾಗ, ಪ್ರಧಾನ ಮಂತ್ರಿಗಳು ತಮ್ಮ ಆರಂಭಿಕ ಹೇಳಿಕೆಯಲ್ಲೆ ಆಸಿಯಾನ್ ಬ್ಲಾಕ್‌ನ 10 ರಾಷ್ಟ್ರಗಳ ಆರ್ಥಿಕ ಬೆಳವಣಿಗೆ, ವಾಣಿಜ್ಯ, ಬಂಡವಾಳ ಹೂಡಿಕೆಗಳು ಮತ್ತು ಕೈಗಾರಿಕೀಕರಣಗಳ ಹೊಸ ಯುಗಾರಂಭದ ಬಗೆಗೆ ಒತ್ತು ಕೊಡಬೇಕೆಂದು ಹೇಳಿದರು. ಈ ಕಾರ್ಯನೀತಿಯ ಮೂರು ಆಧಾರ ಸ್ತಂಭಗಳು ವಾಣಿಜ್ಯ, ಸಂಸ್ಕೃತಿ ಮತ್ತು ಸಂಬಂಧತೆಗಳು. ಭಾರತವು ಈಶಾನ್ಯದೆಡೆಗೆ ಕೇವಲ ಗಮನಹರಿಸಿರುವುದಷ್ಟೇ ಕೆಲಸವನ್ನೂ ಕೈಗೊಂಡಿದೆ ಆಕ್ಟಿಂಗ್ ಈಸ್ಟ್ ಎಂದು ಪ್ರಪಂಚಕ್ಕೆ ಮನವರಿಕೆಮಾಡಿಕೊಟ್ಟರು. ಇದರಿಂದ ಭಾರತದ ಆ್ಯಕ್ಟ್–ಈಸ್ಟ್ ಕಾರ್ಯನೀತಿ ಪುನರ್ ರೂಪುಗೊಂಡಿದೆ. ಈ ಕಾರ್ಯನೀತಿಯ ಉದ್ದೇಶವು ಆರ್ಥಿಕ ಸಹಕಾರ, ಸಾಂಸ್ಕೃತಿಕ ಬಾಂಧವ್ಯಗಳು ಹಾಗೂ ಏಷ್ಯ ಪೆಸಿಫಿಕ್‌ವಲಯದ ರಾಷ್ಟ್ರಗಳ ಜೊತೆ ಯುಕ್ತ ಸಂಬಂಧಗಳನ್ನು ಬೆಳೆಸುವುದೇ ಆಗಿದೆ. ನಿರಂತರವಾಗಿ ದ್ವಿಪಕ್ಷೀಯ, ಪ್ರಾದೇಶಿಕ ಹಾಗೂ ಬಹುಮಟ್ಟಗಳಲ್ಲಿ ಸಂಬಂಧಗಳನ್ನು ಬೆಳೆಸುವುದರಿಂದ ಅರುಣಾಚಲವೂ ಸೇರಿದಂತೆ ಈಶಾನ್ಯ ರಾಜ್ಯಗಳ ಈಗಿನ ಆರ್ಥಿಕ ಪ್ರತ್ಯೇಕತೆ ಕೊನೆಗೊಳ್ಳುತ್ತದೆ.

ನೆರೆ ದೇಶಗಳೊಡನೆ ಮತ್ತು ಆಂತರಿಕವಾಗಿ ಸಂಪರ್ಕ ಸಾಧಿಸುವುದು ಮತ್ತು ಮೂಲ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲೇಬೇಕೆಂಬುದು ಈಶಾನ್ಯ ಕಾರ್ಯನೀತಿಯು ಅನಿವಾರ್ಯ ಅಂಶಗಳು. ಹೀಗೆ ನೆರೆ ರಾಜ್ಯಗಳೊಡನೆ ಸಂಪರ್ಕ ಮತ್ತು ಆಂತರಿಕವಾಗಿ ಮೂಲ ಸೌಲಭ್ಯಗಳನ್ನು (ರಸ್ತೆ, ರೈಲು, ಒಳನಾಡು ಜಲಮಾರ್ಗ, ಟೆಲಿಕಾಮ್, ವಿಮಾನ ನಿಲ್ದಾಣಗಳು ಇತ್ಯಾದಿ) ಪೂರ್ತಿಯಾಗಿ ನೆಲೆಗೊಳ್ಳುವವರೆಗೆ ಇದಕ್ಕಾಗಿ ರೂಪಿಸಿರುವ ಕಾರ್ಯನೀತಿಯ ಸೂಕ್ಷ್ಮ ಹಾಗೂ ಸ್ಥೂಲ ಫಲಗಳನ್ನು ನಿರ್ಧರಿಸುವುದು ಸಾಧ್ಯವೇ ಇಲ್ಲ.

ಇದಲ್ಲದೆ, 'ಮೇಕ್ ಇನ್ ಇಂಡಿಯಾ' ಆರಂಭಿಕ ಪ್ರಯತ್ನದೊಂದಿಗೆ, 'ಮೇಕ್ ಇನ್ ನಾರ್ಥ್‌ಈಸ್ಟ್' ಎಂಬ ಶೀರ್ಷಿಕೆಯ ತಾತ್ವಿಕವಾದ ದಸ್ತಾವೇಜು ಕೂಡ ತಯಾರಾಗಿದೆ. ಮೇಕ್ ಇನ್ ನಾರ್ಥ್‌ಈಸ್ಟ್‌ನಂತಹ ಪ್ರಯತ್ನದಿಂದ ಈಶಾನ್ಯ ವಲಯಕ್ಕೆ ಆದಾಯದ ಉತ್ಪಾದನೆಯಾಗುವುದಲ್ಲದೆ ಈಗ ದೇಶದ ಬೇರೆಡೆಗಳಿಗೆ ಉದ್ಯೋಗಾವಕಾಶಗಳಿಗಾಗಿ ಯುವಜನರು ವಲಸೆಹೋಗುತ್ತಿರುವುದನ್ನು ಸಹ ತಡೆಗಟ್ಟುತ್ತದೆ. ಇನ್ನೂ ಮುಂದುವರಿದು ಇದು ಕೈಗಾರಿಕೆಯ ಹಾಗೂ ವ್ಯವಹಾರಗಳ ಬೆಳವಣಿಗೆಗೆ ದಾರಿಯಾಗುತ್ತದೆ ಮತ್ತು ಮನೋಭಾವಗಳಲ್ಲಿ ಈಗಿರುವ ಅಡಚಣೆಗಳನ್ನು ನಿವಾರಿಸಿ, ಭಾರತೀಯ ಮುಖ್ಯವಾಹಿನಿಗೆ ಈಶಾನ್ಯವನ್ನೂ ಒಳಗೊಳ್ಳುವಂತಾಗುತ್ತದೆ. ಇದರಿಂದ ಈ ಭಾಗದ ಬೆಳವಣಿಗೆ ಮತ್ತು ಅಭಿವೃದ್ಧಿಗಳು ಚುರುಕಾಗಿ ಮುಂದುವರಿಯುವಂತೆ ಮಾಡುತ್ತದೆ.

### ಗಮನಾರ್ಹ ವಿಷಯ

ಇತ್ತೀಚೆಗೆ ಈಶಾನ್ಯ ಭಾರತವು 'ಸ್ಟಾರ್ಟ್‌ಅಪ್'ಗಳ ಹೊಸ ಉದ್ದೇಶಿತ ಗುರಿಯಾಗಿ ರೂಪುಗೊಳ್ಳುತ್ತಿದೆ. ಈ ಯೋಜನೆಗೆ ಎರಡು ವರ್ಷಗಳ ಸಾಲಮುಕ್ತ ಸೌಲಭ್ಯ ಹಾಗೂ ಅವು 3 ತಿಂಗಳುಗಳಲ್ಲಿ ಹೊರಬೀಳಬಹುದಾದ ಅವಧಿ – ಇವು ಅಪ್ರತಿಮ ಅನುಕೂಲಗಳಾಗಿ ಒದಗಿವೆ. ಉದಯೋನ್ಮುಖ ಉದ್ಯಮಿಗಳಿಗೆ ಈ 'ವೆಂಚರ್' ನಿಧಿಯು ಉತ್ತೇಜಕವಾಗಿದೆ. ಇದರಿಂದ ಅವರ ಹಣಕಾಸು ತೊಂದರೆಗಳು



ದೂರವಾಗುತ್ತವೆ. ಅಲ್ಲದೆ ಈ ವಲಯದಲ್ಲಿ ಉದ್ಯೋಗಸ್ಥರಾಗುವ ಅವಕಾಶಗಳು ಹೆಚ್ಚಿದಾಗ ಅಲ್ಲಿನ ಆದಾಯವೂ ಹೆಚ್ಚುತ್ತದೆ. ಮತ್ತು ಇಂತಹ ಧನಾತ್ಮಕತೆಗಳಿಂದ ಯುವಜನರು ದೇಶದ ಬೆರೆಡೆಗಳಿಂದ ಇಲ್ಲಿಗೆ ಬಂದರೆ ಈಶಾನ್ಯ ರಾಜ್ಯಗಳ ಬೆಳವಣಿಗೆಯನ್ನು ಸಾಧಿಸಬಹುದು.

### ರಸ್ತೆ – ಸಂಪರ್ಕ

**ಈಶಾನ್ಯಕ್ಕೆ ವೇಗವಾಗಿ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮ** – ಇಂತಹ ಕಾರ್ಯಕ್ರಮದಿಂದ ಈಶಾನ್ಯವಲಯದಲ್ಲಿ ಅತಿದೂರ ಜಾಗಗಳಿಗೆ ಹಾಗೂ ಈಶಾನ್ಯ ರಾಜ್ಯ ರಾಜಧಾನಿಗಳು ಮತ್ತು ಜಿಲ್ಲಾ ಕೇಂದ್ರಗಳಿಗೆ ರಸ್ತೆ ಸಂಪರ್ಕ ಸಾಧಿಸಬಹುದು. ಇದು ಮೂರು ಹಂತದ ಪ್ರಾಜೆಕ್ಟ್. ಹೀಗೆ ಈಶಾನ್ಯದ ಜಿಲ್ಲಾಕೇಂದ್ರಗಳಿಂದ ಅವುಗಳಿಗೆ ಹತ್ತಿರವಾದ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧವೇರ್ಪಡಿಸಬಹುದು. ಈಶಾನ್ಯ ವಲಯಕ್ಕೆ ಇದೊಂದು ಅತಿ ಆಶಾದಾಯಕ ರಸ್ತೆ ಅಭಿವೃದ್ಧಿ ಕಾರ್ಯಕ್ರಮವಾಗಿದೆ. ಎನ್‌ಎಚ್‌ಎಪಿ, ರಾಜ್ಯಗಳ ಪಿಡಬ್ಲ್ಯುಡಿಗಳು ಮತ್ತು ಗಡಿರಸ್ತೆ ಸಂಸ್ಥೆಗಳು (ಬಿಆರ್‌ಒ) ಈ ಕಾರ್ಯಕ್ರಮವನ್ನು ಕೈಗೊಂಡು ನಡೆಸುತ್ತವೆ. ಈ ಕಾರ್ಯಕ್ರಮದ ಧ್ಯೇಯಗಳು ಹೀಗಿವೆ:

* ರಾಜ್ಯ ರಾಜಧಾನಿಗಳನ್ನು ಕೂಡುವ ರಾಷ್ಟ್ರೀಯ ಹೆದ್ದಾರಿಗಳನ್ನು ಎರಡು/ನಾಲ್ಕು ಪಥಗಳ ಹೆದ್ದಾರಿಗಳಾಗಿ ಉತ್ತಮೀಕರಿಸುವುದು.
* ಈಶಾನ್ಯವಲಯದ ಎಲ್ಲ 88 ಜಿಲ್ಲಾ ಕೇಂದ್ರಗಳಿಗೆ ಕನಿಷ್ಠ ಎರಡು ಪಥ ರಸ್ತೆಗಳ ಸಂಪರ್ಕ ಏರ್ಪಡಿಸುವುದು.
* ಈಶಾನ್ಯ ವಲಯದ ಹಿಂದುಳಿದ ಹಾಗೂ ಸುದೂರ ಜಾಗಗಳಿಗೆ ರಸ್ತೆ ಸಂಪರ್ಕಗಳನ್ನು ದೊರಕಿಸುವುದು.



* ಗಡಿಪ್ರದೇಶದಲ್ಲಿ ಅಯಕಟ್ಟಿನ ರಸ್ತೆಗಳ ಸುಧಾರಣೆ ಮಾಡುವುದು

* ನೆರೆ ರಾಷ್ಟ್ರಗಳೊಡನೆ ಸಂಪರ್ಕವನ್ನು ಸುಧಾರಿಸುವುದು.

ಮುಂದಿನ ಮೂರು ಹಂತಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಗುವುದು:

**1) ಹಂತ ಎ** – ಸರ್ಕಾರದಿಂದ ಅನುಮತಿಸಲಾಗಿರುವ ಸುಮಾರು 4,099 ಕಿ.ಮೀ.ನಷ್ಟು ರಸ್ತೆಗಳನ್ನು ಪ್ರಶಸ್ತಗೊಳಿಸುವುದು (2,041 ಕಿ.ಮಿ. ರಾಷ್ಟ್ರೀಯ ಹೆದ್ದಾರಿ ಮತ್ತು 2,058 ಕಿ.ಮೀ. ರಾಜ್ಯ ರಸ್ತೆಗಳು). ಆಗಸ್ಟ್ 2015ರ ವರೆಗೆ 2,989 ಕಿ.ಮೀ.ನಷ್ಟು ಮಂಜೂರಾಗಿದೆ ಮತ್ತು 1,565 ಕಿ.ಮೀ. ನಷ್ಟು ರಸ್ತೆಗಳ ಕೆಲಸಮುಗಿದಿದೆ. ಎ ಹಂತದ ಕಾರ್ಯವು ಮಾರ್ಚ್ 2017 ವೇಳೆಗೆ ಮುಗಿಯುವ ನಿರೀಕ್ಷೆಯಿದೆ.

**2) ಹಂತ ಬಿ** – ಇದರಲ್ಲಿ 3,723 ಕಿ.ಮೀ. ನಷ್ಟು ರಸ್ತೆಗಳ ಕೆಲಸ (1,285 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಮತ್ತು 2,438 ಕಿ.ಮೀ. ರಾಜ್ಯ ರಸ್ತೆಗಳು), 2017 ಮಾರ್ಚ್‌ಗೆ ಮುಗಿಯಬಹುದೆನ್ನುವ ಹಂತ ಎ ಕೆಲಸದ ನಂತರ, ಹಂತ ಬಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

**3) ಅರುಣಾಚಲ ಪ್ರದೇಶ ಪ್ಯಾಕೇಜ್** – ಈ ಕಾರ್ಯಕ್ರಮದಲ್ಲಿ 2,319 ಕಿ.ಮೀ. ಗಳಷ್ಟು ರಸ್ತೆ ಹಾಗೂ ಹೆದ್ದಾರಿಗಳ ಅಭಿವೃದ್ಧಿ ಕೆಲಸವಿದೆ (1,472 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಹಾಗೂ 847 ಕಿ.ಮೀ. ರಾಜ್ಯ / ಸಾಮಾನ್ಯ ಸಿಬ್ಬಂದಿ / ಆಯಕಟ್ಟಿನ ರಸ್ತೆಗಳು). ಇಷ್ಟಕ್ಕೆ ಸರಕಾರ ಅನುಮತಿ ನೀಡಿದೆ. 776 ಕಿ.ಮೀ. ಯೋಜನೆಗಳನ್ನು ಬಿಓಟಿ ವಿಧಾನದಲ್ಲಿ, ಉಳಿದುದನ್ನು ಆಯಾ ಕೆಲಸಗಳ ರೇಟ್ ಗುತ್ತಿಗೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು. ಆಗಸ್ಟ್ 2015ರ ವರೆಗೆ 1,552 ಕಿ.ಮೀ.ರಷ್ಟು ಮಂಜೂರಾಗಿದೆ, ಇದರಲ್ಲಿ 230 ಕಿ.ಮೀ.ಗಳಷ್ಟು ರಸ್ತೆ ಕೆಲಸ ಮುಗಿದಿದೆ. ಅರುಣಾಚಲಪ್ರದೇಶದ ಈ ಸಮಗ್ರ ಕಾರ್ಯವು ಮಾರ್ಚ್ 2018ರ ವರೆಗೆ ಮುಗಿಯಬೇಕೆಂಬ ಗುರಿಯಿದೆ.

### ಪೂರ್ವಪಶ್ಚಿಮ ಕಾರಿಡಾರ್ ಗುರಿ

ಈಶಾನ್ಯದ ಈ ದಾರಿಗಳಲ್ಲದೆ ಭಾರತದ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಶ್ರೀನಗರದಿಂದ (ಅಸ್ಸಾಮ್ / ಪಶ್ಚಿಮ ಬಂಗಾಳದ ಗಡಿ) ಅಸ್ಸಾಮಿನ ನಾಲ್ಕು ಪಥಗಳ 670 ಕಿ.ಮೀ. ಸಿಲ್ಚಾರ್‌ವರೆಗೆ ಮತ್ತು ಮೇಘಾಲಯದಲ್ಲಿ ಜೋವಾಯ್‌ನಿಂದ ರಟ್ಟೆಚೆರ್ರದ ವರೆಗೆ (104 ಕಿ.ಮೀ.) ಎರಡು ಓಣಿಗಳ ದಾರಿ ಕೆಲಸ ನಡೆಯುತ್ತಿದೆ. ಇದು ಡಿಸೆಂಬರ್ 2014ರ ವೇಳೆಗೆ ಮುಗಿಯಬೇಕಿತ್ತು. ಅಸ್ಸಾಮಿನಲ್ಲಿ ಪೂರ್ವ ಪಶ್ಚಿಮ ಕಾರಿಡಾರಿನ ಕೆಲಸ ನಿಧಾನಗೊಂಡಿದೆ. ಅದರ ಕಾರಣಗಳು ಹೀಗಿವೆ: ಅಗತ್ಯವಿರುವ ಜಾಗವನ್ನು ಲಗತ್ತಿಸಿಕೊಳ್ಳದಿರುವುದು, ಸ್ಥಳೀಯ ಸಂಸ್ಥೆಗಳು ಕೆಲವು ಅಗತ್ಯ ಪದಾರ್ಥಗಳ ಸ್ಥಳಾಂತರ ಮಾಡದಿರುವುದು, ಮರಗಳನ್ನು ಕಡಿಯುವುದು, ಮತ್ತೆ ಮತ್ತೆ ಆಗುವ ಬಂದ್‌ಗಳು, ಕಾಯಿದೆ ಹಾಗೂ ಶಿಸ್ತಿನ ದುರ್ಬಲ ಪರಿಸ್ಥಿತಿಗಳು, ಬ್ಯಾಂಕಿನ ವಿಲೇವಾರಿ ಸಮಸ್ಯೆ, ಉದ್ಯೋಗಸ್ಥ ಆಳುಬಲ ಹಾಗೂ ಯಂತ್ರ ವ್ಯವಸ್ಥೆಗಳ ಕೊರತೆ (ಇದು ಗುತ್ತಿಗೆದಾರರಿಂದಲೂ ಆಗುತ್ತದೆ), ಕಾಡನ್ನು ಸವರುವುದು, ಕಟ್ಟಲು ಬೇಕಾದ ಪದಾರ್ಥಗಳ ಸಂಗ್ರಹದ ಬಗೆಗೆ ಸ್ಥಳೀಯ ಆಡಳಿತ ವ್ಯವಸ್ಥೆಗಳು ಆಗಾಗ್ಗೆ ಪ್ರತಿಬಂಧಕಗಳನ್ನು ಒಡ್ಡುವುದು ಇತ್ಯಾದಿ. ಅಸ್ಸಾಮಿನ ಪೂರ್ವ–ಪಶ್ಚಿಮ ಕಾರಿಡಾರಿನ ಉದ್ದ 670 ಕಿ.ಮೀ. ಇದರಲ್ಲಿ 580 ಕಿ.ಮೀ.ನಷ್ಟು ಕೆಲಸ ಆಗಿದೆ. ಉಳಿದದ್ದು 2016 ಡಿಸೆಂಬರ್ ವೇಳೆಗೆ ಮುಗಿಯಬೇಕು.

### ರೈಲು ವ್ಯವಸ್ಥೆ

ಈಶಾನ್ಯವಲಯದಲ್ಲಿನ ರೈಲು ವ್ಯವಸ್ಥೆಯು (ಏಪ್ರಿಲ್ 2012 ರಂತೆ) 2,661 ಕಿ.ಮೀ.ನಷ್ಟು. ಇದರಲ್ಲಿ ಶೇಕಡಾ 60ರಷ್ಟು ಎಂದರೆ 1,601 ಕಿ.ಮೀ.ನಷ್ಟು ಬ್ರಾಡ್‌ಗೇಜ್‌ನಲ್ಲಿದೆ (ಅದೂ ಗೇಜ್ ಪರಿವರ್ತನೆಯ ನಂತರ). ಈಗ ಉಳಿದಿರುವ ಗೇಜ್ ಪರಿವರ್ತನಾ ಕೆಲಸ ಮುಗಿದರೆ ಕೇವಲ 20ಕಿ.ಮೀ.ನಷ್ಟು ಉಳಿಕೆ ಭಾಗ ಮಾತ್ರ ಮೀಟರ್ ಗೇಜ್‌ನಲ್ಲಿರುತ್ತದೆ. ಇದೊಂದು ಹಳೆಯದನ್ನು ನೆನಪಿಸುವ ಭಾಗ ಅಷ್ಟೆ.

ಇಲ್ಲಿನ ರೈಲು ಪ್ರವಾಸಿ ಮಾರ್ಗ ಈಗ ಪರಿಗಣನೆಯಲ್ಲಿದೆ. ಪರಿಸರ ಪ್ರವಾಸದ ಮೇಲೆ ಒತ್ತುಕೊಡುವುದು, ಶಿಕ್ಷಣ ಸಂಬಂಧ ಪ್ರವಾಸ, ವಿಶೇಷ ಯಾತ್ರಿಕ ತಾಣಗಳ ಜಾಲಗಳು (ದೈವಿಕ ತಾಣಗಳು, ಜ್ಯೋತಿರ್ಲಿಂಗ ತಾಣಗಳು, ಜೈನರ ತಾಣಗಳು, ಕ್ರೈಸ್ತರ ತಾಣಗಳು, ಸುಫಿ ತಾಣಗಳು, ಸಿಖ್ಖರ ತಾಣಗಳು, ಬುದ್ಧರ ತಾಣಗಳು ಹಾಗೂ ದೇವಾಲಯಗಳು). ಒಟ್ಟಿನಲ್ಲಿ ವಿಶೇಷವಾದ ರೈಲು ಪ್ರವಾಸ ಸರ್ಕಿಟ್‌ಗಳನ್ನು ಯೋಜಿಸಲಾಗಿದೆ. ಇದರಲ್ಲಿ ಖಾಸಗಿ ಪಾಲುದಾರಿಕೆಗೂ ಅವಕಾಶವಿದೆ.

ಈಶಾನ್ಯ ರಾಜ್ಯಗಳಿಗೆಂದು ರೂಪಿಸಿರುವ ಪ್ರಧಾನ ಯೋಜನೆಯು ಅದರ ಮೂಲಸೌಲಭ್ಯಗಳ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ಇದರಲ್ಲಿನ ವಿವರಗಳು: ಎಲ್ಲ ರಾಜ್ಯಗಳ ರಾಜಧಾನಿಗಳಿಗೆ ಸಂಪರ್ಕ ಸೌಲಭ್ಯ; ಮಾನೊರೈಲ್ ವಲಯದಲ್ಲಿ ಮಾದರಿ ರೈಲು, ಬ್ರಾಡ್‌ಗೇಜ್ ರೈಲುಗಳ ಜಾಲ; ಭವಿಷ್ಯದಲ್ಲಿ ಸಂಭವಿಸುವ ವಾಹನ ಸಂಚಾರ ಹೆಚ್ಚಳವನ್ನು ನಿಭಾಯಿಸುವ ಕ್ಷಮತೆ; ಈಗ ಸಂಪರ್ಕವಿಲ್ಲದ ಪ್ರದೇಶಗಳಿಗೆ ಸಂಚಾರಿ ಜಾಲದ ವಿಸ್ತರಣೆ; ಅಂತಾರಾಷ್ಟ್ರೀಯ ಗಡಿಭಾಗಗಳ ದೃಢತೆ ಹಾಗೂ ನೆರೆದೇಶಗಳೊಡನೆ ವ್ಯಾಪಾರ ಮತ್ತು ಸಾರಿಗೆ ಸಂಪರ್ಕಗಳ ಉತ್ತಮೀಕರಣ.

ದುಬನೊಯ್ – ಮೆಂಡಿಪಥರ್ ರೈಲು ಮಾರ್ಗದಿಂದ 2014 ಆಗಸ್ಟ್ 11 ರಂದು ಮೇಘಾಲಯದ ರೈಲು ಸಂಪರ್ಕ ಆರಂಭವಾಗಿದೆ. ಈ ವರ್ಷ ಮೂರು ಬೇರೆ ಮಾರ್ಗಗಳ ಕೆಲಸವು ಮುಗಿಯುತ್ತದೆ. ಅಸ್ಸಾಂನ ದಕ್ಷಿಣ ಭಾಗವು ಇಷ್ಟರಲ್ಲಿ ಬ್ರಾಡ್‌ಗೇಜ್ ಸಾರಿಗೆ ಜಾಲದಡಿ ಬರಲಿದೆ. ಇದು ಲಮ್‌ಡಿಗ್ ಮತ್ತು ಸಿಲ್‌ಚಾರ್‌ಗಳ ನಡುವಿನ 210 ಕಿ.ಮೀ. ಮಾರ್ಗ ಹಾಗೂ ಬ್ರಾಡ್‌ಗೇಜ್ ಪರಿವರ್ತನೆಯ ಅತಿ ದೀರ್ಘ ಮಾರ್ಗ.

ಹೊಸಮಾರ್ಗಗಳಿಗಾಗಿ ಈಶಾನ್ಯ ವಲಯಕ್ಕೆ ಮುಖ್ಯ ಸೌಲಭ್ಯ ಹೆಚ್ಚಿಸುವ ಮಾರ್ಗಗಳು ಮಂಜೂರಾಗಿವೆ. ನ್ಯೂ ಲೈನ್ಸ್, ಜೋಡಿಮಾರ್ಗ ಮತ್ತು ಗೇಜ್ ಪರಿವರ್ತನೆಗಳು ಇದರಲ್ಲಿ ಸೇರಿವೆ. ಒಟ್ಟು




ಇಂತಹ 10 ರಾಷ್ಟ್ರೀಯ ಪ್ರಾಜೆಕ್ಟ್‌ಗಳಿವೆ. ಇವು ಒಟ್ಟಿನಲ್ಲಿ 2,919 ಕಿ.ಮೀ. ದೂರದ 38,310 ಕೋಟಿ ರೂಗಳ ಖರ್ಚಿನಲ್ಲಿ ನಡೆಯಲಿವೆ. ಮಾರ್ಚ್ 2020 ವೇಳೆಗೆ ಈಶಾನ್ಯದ ಎಲ್ಲ ರಾಜ್ಯಗಳ ರಾಜಧಾನಿಗಳ ಸಂಪರ್ಕ ಸಾಧಿಸುವ ಗುರಿಯನ್ನು ರೈಲು ಖಾತೆಯು ಹಮ್ಮಿಕೊಂಡಿದೆ.

### ವಿಮಾನ ಸಾರಿಗೆ

ಸದ್ಯದಲ್ಲಿ ಈಶಾನ್ಯವಲಯದಲ್ಲಿ 12 ವಿಮಾನ ನಿಲ್ದಾಣಗಳು ವಿಮಾನ ಸಾರಿಗೆಯ ಅನುಕೂಲ ಹೊಂದಿವೆ. ಇಷ್ಟೇ ಸಂಖ್ಯೆಯ ವಿಮಾನ ನಿಲ್ದಾಣಗಳು ಕೆಲಸಮಾಡುತ್ತಿಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ವಿಮಾನ ಸಾರಿಗೆಯ ಅನುಕೂಲವನ್ನು ಹೆಚ್ಚಿಸಲು ಪ್ರಯತ್ನಗಳಾಗುತ್ತಿವೆ. ಈಶಾನ್ಯ ಕೌನ್ಸಿಲ್ (ನಾರ್ಥ್ ಈಸ್ಟರ್ನ್ ಕೌನ್ಸಿಲ್), ಶಿಲ್ಲಾಂಗ್, ಏರ್ ಇಂಡಿಯಾ ಉಪಾಂಗ ಸಂಸ್ಥೆ ಆಲಿಯಾನ್ಸ್ ಏರ್‌ಗೆ ಸಹಾಯ ನಿಧಿ ಒದಗಿಸಿ, ATR–42 ವಿಮಾನಗಳನ್ನು ಈಶಾನ್ಯ ವಲಯದಲ್ಲಿ ಸಾರಿಗೆ ಸಂಪರ್ಕ ಹೆಚ್ಚಿಸಲು ವಿಶೇಷವಾಗಿ ಬೇರೆ ಸೇವೆಗಳು ಕಡಿಮೆಯಿರುವೆಡೆ 2002–2011ರ ವರೆಗೆ ನೆರವು ನೀಡಿತು. ಈಗ ತೇಜ್‌ಪುರ್, ದಿಮಾಪುರ್ ಮತ್ತು ಲೀಲಾಬಾರಿಗಳಿಗೆ ಮಾತ್ರ ಏರ್ ಇಂಡಿಯಾ / ಆಲಿಯನ್ಸ್ ಏರ್‌ಗಳ ಸೇವೆ ದೊರೆಯುತ್ತಿದೆ. ಆ ಕೌನ್ಸಿಲ್‌ನ ಸಹಾಯ ನಿಧಿಯು ಸ್ಥಗಿತವಾಗಿತ್ತು. ಆಗಸ್ಟ್ 2013ರಲ್ಲಿ ಮತ್ತೆ ಈ ಸಹಾಯ ನಿಧಿಯನ್ನು ಮೇಲ್ಕಂಡ ವಿಮಾನ ನಿಲ್ದಾಣಗಳು ಹಾಗೂ ಬಾರಾಪಾನಿ ಸೇರಿಸಿ ನೀಡಲು ಕೌನ್ಸಿಲ್ ಮುಂದೆ ಬಂದಿದೆ.

ಸರ್ಕಾರವು ದೇಶದಲ್ಲಿ ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯನೀತಿಗೆ ಅನುಮತಿ ನೀಡಿದೆ. ಜೊತೆಗೆ, ಕಾರ್ಯದರ್ಶಿ ಸಿವಿಲ್ ಏವಿಯೇಷನ್ ಅಧ್ಯಕ್ಷತೆಯಲ್ಲಿ ಅಂತರ ಸಚಿವಾಲಯ ಸಮಿತಿಯನ್ನು ಸ್ಥಾಪಿಸಿ, ಇದರ ಮೂಲಕ ಭಾರತದಲ್ಲಿನ ವಿಮಾನ ಸಾರಿಗೆ ಕೇಂದ್ರಗಳ ಅಭಿವೃದ್ಧಿಯಲ್ಲಿರುವ ಅಡಚಣೆಗಳನ್ನು ನಿವಾರಿಸಲು ಅನುಸರಿಸಬೇಕಾದ ಕ್ರಮಗಳನ್ನು ರೂಪಿಸಲಾಗುವುದು.

ಭಾರತದ ಹೊಸಕಾರ್ಯನೀತಿಯು ಜಾಗತಿಕ ವಿಮಾನ ಸಾರಿಗೆ ಕೇಂದ್ರಗಳನ್ನು ಸ್ಥಾಪಿಸುವುದಷ್ಟೇ ಅಲ್ಲ, ನಿರಂತರವಾಗಿ ಹೆಚ್ಚುತ್ತಲೇ ಇರುವ ಅಂತರ್ದೇಶೀಯ ಕೇಂದ್ರಗಳಲ್ಲಿ, ದೊಡ್ಡ ನಗರಗಳಿಂದ ಸಣ್ಣ ಊರುಗಳ ವರೆಗಿನ ವಿಮಾನ ಸಾರಿಗೆಯನ್ನು ಗಮನದಲ್ಲಿಟ್ಟುಕೊಂಡಿದೆ. ವಾಸ್ತವವಾಗಿ ಇದರಲ್ಲಿ ಈಶಾನ್ಯ ಭಾರತವೂ ಸೇರಿದೆ.

### ಒಳನಾಡಿನ ಜಲಮಾರ್ಗಗಳು

ಇನ್‌ಲೆಂಡ್ ವಾಟರ್‌ವೇಸ್ ಆಫ್ ಇಂಡಿಯಾ (ಐಡಬ್ಲ್ಯುಎಐ) ಎಂದರೆ ಭಾರತದ ಒಳನಾಡು ಜಲಮಾರ್ಗ ಪ್ರಾಧಿಕಾರ, ರಾಷ್ಟ್ರೀಯ ಜಲಮಾರ್ಗಗಳನ್ನು ಅಭಿವೃದ್ಧಿಗೊಳಿಸುತ್ತದೆ. ಇದರಲ್ಲಿ ರಾಷ್ಟ್ರೀಯ ಜಲಮಾರ್ಗಗಳು–2 (ಬ್ರಹ್ಮಪುತ್ರಾ ನದಿ) ಬಾಂಗ್ಲಾದೇಶದ ಗಡಿ (ದುಬ್ರಿ ಸಮೀಪ)ಯಿಂದ ಸದಿಯಾವರೆಗೆ ಒಳನಾಡು ಜಲಮಾರ್ಗ ಹಾಗೂ ಬಾರಾಕ್ ನದಿಯ ಲಖಿಪುರದಿಂದ ಭಾಂಗಾ (121 ಕಿ.ಮೀ.)ವರೆಗಿನ ರಾಷ್ಟ್ರೀಯ ಜಲಮಾರ್ಗದ ಕೆಲಸಗಳೂ ಸೇರಿವೆ. ಎನ್‌ಡಬ್ಲ್ಯೂ–2ಗೆ (ರಾಷ್ಟ್ರೀಯ ಜಲಮಾರ್ಗ) ಸೇರಿದಂತೆ ಒಳನಾಡು ಜಲಮಾರ್ಗ ಜಾಲದ ಹಲವು ಬಗೆಯ ಮೂಲ ಸೌಕರ್ಯಗಳನ್ನು ಬೆಳೆಸುವ ಬಗೆಗೆ ಪ್ರಸ್ತಾವನೆಗಳಾಗಿವೆ, ಬಂದರು ಸೌಲಭ್ಯಗಳನ್ನು ಅಭಿವೃದ್ಧಿಕೊಳಿಸುವ ವಿಷಯವನ್ನು ಇದು ಒಳಗೊಂಡಿದೆ. ಇದರಿಂದ ಎನ್‌ಡಬ್ಲ್ಯು–2 ಮಾರ್ಗದಲ್ಲಿ ಸರಕು ಸಾಗಣೆ ಮಾರ್ಗಗಳು ಹಾಗೂ ಜನರನ್ನು ನದಿ ದಾಟಿಸುವ ಸೇವೆಗಳು ಸಾಕಷ್ಟು ಬೆಳೆಯುತ್ತವೆ. ಎನ್‌ಡಬ್ಲ್ಯು–2 ಅಲ್ಲದೆ ಇನ್ನೂ ಹಲವಾರು ಜಲಮಾರ್ಗಗಳು ಅಭಿವೃದ್ಧಿಯಾಗಲಿವೆ. ಇದರಿಂದ ಈಶಾನ್ಯ ವಲಯದ ಆರ್ಥಿಕ ಬೆಳವಣಿಗೆ ಆಗುತ್ತದೆ. ಭಾರತ ಮಯೆನ್ಮಾರ್ ನಡುವಿನ ವಾಣಿಜ್ಯವೂ ಉತ್ತಮಗೊಳ್ಳುತ್ತದೆ.

### ಭಾರತ–ಬಾಂಗ್ಲಾದೇಶ ಆದ್ಯತೆಗಳು

ಭಾರತ ಹಾಗೂ ಬಾಂಗ್ಲಾದೇಶಗಳ ಆದ್ಯತೆಗಳಲ್ಲಿ ಒಳನಾಡು ಜಲಮಾರ್ಗ ಹಾಗೂ ವಾಣಿಜ್ಯ ಮಾರ್ಗಗಳು (1,700 ಕಿ.ಮೀ.) ಎನ್‌ಡಬ್ಲ್ಯು–1 (ಗಂಗಾ), ಎನ್‌ಡಬ್ಲ್ಯು–2 (ಬ್ರಹ್ಮಪುತ್ರಾ) ಹಾಗೂ ಉದ್ದೇಶಿಸಿರುವ ಎನ್‌ಡಬ್ಲ್ಯು–6 (ಬಾರಾಕ್) ಗಳನ್ನು ಕೂಡಿಸುತ್ತವೆ. ಈ ಮಾರ್ಗದ ಬೆಳವಣಿಗೆಯಿಂದ ಭಾರತದ ಈಶಾನ್ಯ ಹಾಗೂ ಪರ್ಯಾಯ ದ್ವೀಪ ಪ್ರದೇಶಗಳಿಂದ ಸುಂದರ ಬನ್ ಹಾಗೂ ಬಾಂಗ್ಲಾದೇಶಗಳ ಮೂಲಕ ಯಾವ ಸರಕುಗಳನ್ನು ಸಾಗಿಸಬೇಕು ಎಂಬುದರ ಆಯ್ಕೆ ಮಾಡಿಕೊಳ್ಳಬಹುದು.

### ಕಾಲದಾನ್ ಬಹುವಿಧ ಸಾರಿಗೆ ಯೋಜನೆ

ವಿದೇಶಾಂಗ ವ್ಯವಹಾರ ಸಚಿವಾಲಯವು ಈ ಯೋಜನೆಯನ್ನು ತಾತ್ವಿಕವಾಗಿ ರೂಪಿಸಿದೆ. ಮಿಜೊರಾಮ್‌ಗೆ ಕೊಲ್ಕತ್ತ / ಹಾಲ್ದಿಯಾ ಬಂದರು ಮ್ಯಾನ್ಮಾರಿನ ಕಾಲದಾನ್ ಮೂಲಕ ಒಂದು ಪರ್ಯಾಯ ಸಂಪರ್ಕವನ್ನು ಒದಗಿಸುತ್ತದೆ. ಕರಾವಳಿ ಹಡಗು ರವಾನೆ/ನೌಕೆಗಳಿಂದ ರವಾನೆಗಳನ್ನು ಹಾಲ್ದಿಯದಿಂದ ಸಿತ್ತವೆ, ಪಿಡಬ್ಲ್ಯುಟಿಗಳಿಗೆ, ಸಿತ್ತವೆಯಿಂದ ಐಡಬ್ಲ್ಯುಟಿ ಮಾರ್ಗವಾಗಿ ಮಯೆನ್ಮಾರಿನ ಪಲೆಟ್ವಗೆ, ಅಲ್ಲಿಂದ ಮುಂದೆ ಪಲೆಟ್ವದಿಂದ ಮಿಜೊರಾಮ್‌ಗಳಿಗೆ ಸಂಪರ್ಕ ಸಾಧಿಸಬಹುದು. ವಿದೇಶಾಂಗ ವ್ಯವಹಾರ ಸಚಿವಾಲಯವು ಈ ಯೋಜನೆಯ ಆರಂಭ ಕಾರ್ಯ ನಡೆಸಿ, ಹಣ ಒದಗಿಸಿದೆ. ಸಿತ್ತವೆ ಬಂದರು ಕೆಲಸ ನಡೆಯುತ್ತಿದೆ.

ಅಭಿವೃದ್ಧಿಯೆಡೆಗೆ ಗಮನ, ಸಮಯಕ್ಕೆ ಸರಿಯಾಗಿ ಯೋಜನೆಗಳನ್ನು ಮುಗಿಸುವುದು, ಇದಕ್ಕೆ ಸ್ಥಳಿಕರ ಕೌಶಲ್ಯದ ಸಹಕಾರ ಮತ್ತು ಬೆಂಬಲಗಳಿದ್ದರೆ ಬೆಳವಣಿಗೆಯ ಕೊರತೆಗಳನ್ನು ಇದು ತುಂಬಿಕೊಡುತ್ತದೆ. ಅಲ್ಲದೆ ಮನೆಮಾಡಿರುವ ಪರಕೀಯತಾ ಮನೋಭಾವವನ್ನು ಇದು ಹೋಗಲಾಡಿಸಿ ಸಾಂತ್ವನಗೊಳಿಸುತ್ತದೆ. ❑

# ಈಶಾನ್ಯ ಭಾರತದ ವಿದ್ಯುದೀಕರಣ

* ಕೆ. ರಾಮನಾಥನ್



**ಬೇಡಿಕೆ-ಪೂರೈಕೆ ಸರಪಳಿಯ ಸಾಮರ್ಥ್ಯ ಸುಧಾರಣೆಯು ಯಾವುದೇ ಇಂಧನ ಶಕ್ತಿ ಪದ್ಧತಿಯ ಅನುಕೂಲಕರ ಅಭಿವೃದ್ಧಿ ಹಾಗೂ ನಿರ್ವಹಣೆಯ ಕೀಲಿಕೈ ಆಗಿದೆ. ವಿದ್ಯುತ್ ಕಾಯ್ದೆ, ಶಕ್ತಿ ಸಂರಕ್ಷಣಾ ಕಾಯ್ದೆ ಮತ್ತು ಹೆಚ್ಚುವರಿ ಇಂಧನ ಶಕ್ತಿ ಸಾಮರ್ಥ್ಯದ ರಾಷ್ಟ್ರೀಯ ಮಿಷನ್‌ಗಳು ಇದಕ್ಕಾಗಿ ನಿರ್ದಿಷ್ಟ ಕಾಯ್ದೆ ಮಾಡುವುದಲ್ಲದೆ ಅದನ್ನು ಬೆಂಬಲಿಸಬೇಕು.**

ಪ್ರಪಂಚದ ಯಾವುದೇ ಪ್ರದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಸಶಕ್ತವಾದ ಇಂಧನ ವಲಯದ ಬೆಂಬಲ ಪ್ರಧಾನ ಪಾತ್ರ ವಹಿಸುತ್ತದೆ. ಇಂದನ ನಮ್ಮ ದೇಶದ ಈಶಾನ್ಯ ರಾಜ್ಯಗಳಿಗೆ ಹೆಚ್ಚು ಅನ್ವಯಿಸುತ್ತದೆ. ಏಕೆಂದರೆ ಅವು ಸಾಮಾಜಿಕ ಆರ್ಥಿಕ ಸೂಚಕಗಳಾದ ತಲಾದಾಯ, ವಿದ್ಯುತ್ ಬಳಕೆ, ಕೈಗಾರಿಕೀಕರಣ ಮುಂತಾದ ಕ್ಷೇತ್ರಗಳಲ್ಲಿ ದೇಶದ ಇತರ ಭಾಗಗಳಿಗಿಂತ ಹಿಂದುಳಿದಿವೆ. ಸಿಕ್ಕಿಂ ಹೊರತು ಪಡಿಸಿ ಉಳಿದೆಲ್ಲಾ ಈಶಾನ್ಯ ರಾಜ್ಯಗಳು ಇಂಧನ ಕೊರತೆಯಲ್ಲಿ ಉತ್ತುಂಗವನ್ನು ತಲುಪಿ ರಾಷ್ಟ್ರೀಯ ಸರಾಸರಿಗಿಂತ ಕೆಳಮಟ್ಟದಲ್ಲಿವೆ. ಈ ಪ್ರದೇಶಗಳು ಉತ್ತಮ ಜಲವಿದ್ಯುತ್ ಉತ್ಪಾದನಾ ಅವಕಾಶ, ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳ ಅವಕಾಶ ಮತ್ತು ಉತ್ತಮ ಸಾಕ್ಷರತಾ ಪ್ರಮಾಣ ಹೊಂದಿರುವುದಲ್ಲದೆ ವಿಶೇಷ ಅನುದಾನ ನೀಡಿಕೆಯಲ್ಲಿ ಸಾಕಷ್ಟು ಬಂಡವಾಳದ ಹರಿವಿನ ಬೆಂಬಲವೂ ಇದ್ದು ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದು ಒಂದು ರೀತಿಯಲ್ಲಿ ವಿರೋಧಾಭಾಸವಾಗಿ ಕಾಣುತ್ತದೆ. ಈ ಸಂದರ್ಭದಲ್ಲಿ ಈ ಪ್ರದೇಶಗಳಿಗೆ ಇಂಧನ ಕ್ಷೇತ್ರವನ್ನೂ ಸುಸ್ಥಿರ ಅಭಿವೃದ್ಧಿಗೊಳಿಸಬೇಕಾಗಿರುವುದು ಹೆಚ್ಚು ಗಮನಾರ್ಹವಾಗಿದೆ. ಇದರಿಂದ ದೇಶವು ಹೆಚ್ಚು ಪ್ರಯೋಜನ ಪಡೆಯಬಹುದಾಗಿದೆ.

ಸುಸ್ಥಿರ ಶಕ್ತಿ ಮೂಲಗಳ ನಿರ್ಮಾಣದ ಭರವಸೆ ಅಷ್ಟೇನು ಸುಲಭದ ಕೆಲಸವಲ್ಲ. ಈ ಸಂದರ್ಭದಲ್ಲಿ ಬಹುಮುಖ ಕೌಶಲ್ಯವುಳ್ಳ ವಸ್ತುನಿಷ್ಠ ಗುಣಮಟ್ಟ ಆಧರಿತ ಅವಕಾಶಗಳು ಹೆಚ್ಚು ಅವಶ್ಯಕವೆನಿಸಿದೆ. ಈಗ ವಿಶೇಷ ಗಮನ ಹರಿಸಬೇಕಾದ ಕೆಲವು ಮುಖ್ಯ ಕ್ಷೇತ್ರಗಳೆಂದರೆ ಇದುವರೆಗೂ ಯಾರೂ ಬಳಸದ ಶಕ್ತಿ ಸಂಪನ್ಮೂಲಗಳ ತ್ವರಿತ ಅಭಿವೃದ್ಧಿ, ಸ್ಥಳೀಯ ಹಾಗೂ ಹೊರಗಿನ ಇಂಧನ ಶಕ್ತಿ ಬೇಡಿಕೆ ಬೆಳವಣಿಗೆ ಪ್ರಮಾಣದ ಲೆಕ್ಕಾಚಾರ, ಸಾಗಾಣಿಕೆ ಮತ್ತು ಹಂಚಿಕೆ ಪದ್ಧತಿಯ ವ್ಯಾಪಕ ವಿಸ್ತರಣೆ, ಒಳ್ಳೆಯ ನಿಯಂತ್ರಣ ಸೌಲಭ್ಯ ಸಾಮರ್ಥ್ಯ ಸುಧಾರಿಸುವಿಕೆ, ನೀತಿ ನಿಯಮಗಳ ಚೌಕಟ್ಟು, ಒಳ್ಳೆಯ ಆಡಳಿತ ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿಗಳಾಗಿವೆ.

### ಜಲವಿದ್ಯುತ್ ಶಕ್ತಿ ಅಭಿವೃದ್ಧಿ ಕ್ರಿಯೆಯನ್ನು ತೀವ್ರಗೊಳಿಸುವುದು

ಈ ಪ್ರದೇಶಗಳ ವಿದ್ಯುತ್ ಗುರಿ ಪ್ರಮಾಣದ ಶೇಕಡ 90 ರಷ್ಟಾದ 56000 ಎಮ್. ವಿ. ನಷ್ಟು ಉತ್ಪಾದನೆಯ ಗುರಿಯನ್ನು ಇನ್ನೂ ತಲುಪಬೇಕಾಗಿದೆ. ಇಷ್ಟು ಪ್ರಮಾಣದ ಇಂಧನ ಶಕ್ತಿ ಈ ಪ್ರದೇಶದ ವಿಶಾಲವ್ಯಾಪ್ತಿಯ ಅವಶ್ಯಕತೆಯನ್ನು ಪೂರೈಸುವುದಲ್ಲದೆ ದೇಶದ ಇತರ ಭಾಗಗಳ ಅವಶ್ಯಕತೆಗಳನ್ನು ಪೂರೈಸಬಲ್ಲದು. ಈ ಯೋಜನೆಗಳನ್ನು ಸರಿಯಾಗಿ ವಿನ್ಯಾಸಗೊಳಿಸಿದರೆ ಅವು ಪ್ರವಾಹ ಪರಿಸ್ಥಿತಿ ನಿಯಂತ್ರಣಕ್ಕೂ ಮತ್ತು ನೀರಾವರಿ ಅಗತ್ಯಗಳಿಗೂ ಸಹಕಾರಿಯಾಗಬಲ್ಲವು. ಜಲವಿದ್ಯುತ್ ಶಕ್ತಿ ಅಭಿವೃದ್ಧಿ ಕ್ರಿಯೆಯಲ್ಲಿ ಬರುವ ಸವಾಲುಗಳೆಂದರೆ ಇದಕ್ಕೆ ಹೆಚ್ಚಿನ ಬಂಡವಾಳ ಹೂಡಿಕೆ, ದೀರ್ಘ ಫಲಪ್ರದ ಅವಧಿ ಜಲಾನಯನ ಪ್ರದೇಶಗಳು, ಮಾರ್ಪಾಡಿನ ಅಗತ್ಯತೆ, ಜಲಚರಗಳ ಮೇಲಿನ ಪರಿಣಾಮದ ಕಡೆ ಗಮನ, ಸಾರ್ವಜನಿಕ ಆರೋಗ್ಯ, ಭೂಕಂಪ ಅವಘಡಗಳು ಮತ್ತು ತೊಂದರೆಗೆ ಒಳಗಾಗುವ ಜನರ ಪುನರ್ವಸತಿ ಇತ್ಯಾದಿಗಳು. ಇಷ್ಟೇ ಅಲ್ಲ. ಶಾಂತಿ ಮತ್ತು ಕಾನೂನು ಪಾಲನೆ ತೊಡಕುಗಳು. ಈ ಯೋಜನೆಯಿಂದ ಭೂಮಿ ಕಳೆದುಕೊಳ್ಳುವ

* ದಿ ಎನರ್ಜಿ ಆ್ಯಂಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್, ನವದೆಹಲಿ. Email : krnathan@teri.res.in

ಜನರನ್ನು ಸರಿಯಾಗಿ ಗುರುತಿಸಲು ದೊರಕದ ಭೂ ದಾಖಲೆಗಳು, ನಾನಾ ಇಲಾಖೆಗಳ ಅನುಮತಿ ಪತ್ರಗಳು, ಕೆಟ್ಟ ರಸ್ತೆ ಸಂಪರ್ಕಗಳು ಇತ್ಯಾದಿಗಳು ಈ ಯೋಜನೆಗಳಿಗೆ ಸುದೀರ್ಘ ಕಾಲಾವಧಿಯನ್ನಷ್ಟೇ ಅಲ್ಲದೆ ಹೆಚ್ಚು ಹಣವನ್ನು ಬೇಡುತ್ತವೆ. ಈ ಎಲ್ಲಾ ಅಂಶಗಳು ಹೂಡಿಕೆದಾರನ ಆಸಕ್ತಿಯ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುತ್ತವೆ. ಯೋಜನಾ ಅಭಿವೃದ್ಧಿ ಮೇಲೆ ಕೈಗೊಂಡ ಇತ್ತೀಚಿನ ಅಧ್ಯಯನ ಪ್ರಕಾರ ಯೋಜನಾಯುಕ್ತ ಪ್ರದೇಶದ ಸ್ಥಳೀಯ ಜನರಿಗೆ ಸಂಸ್ಕೃತಿ ಮತ್ತು ಸಂಪ್ರದಾಯಗಳು ನಾಶವಾಗುವ ಭಯವಿದ್ದು, ಜನರ ಆರ್ಥಿಕತೆ ಅರೆಹಣಕಾಸಿನಿಂದ ಪೂರ್ಣಹಣಕಾಸಿಗೆ ಬದಲಾಗಬಹುದೆಂದೂ ಹೆದರಿಸಿದ್ದಾರೆ. ಈ ಯೋಜನೆಗಳನ್ನು ಜಲಸಂಪನ್ಮೂಲ ಲಭ್ಯತೆಯ ಆಧಾರದ ಮೇಲೆ ವಿನ್ಯಾಸ ಮಾಡಬೇಕಾದುದಲ್ಲದೆ ಹವಾಮಾನ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಬೇಕಾಗುತ್ತದೆ. ಈ ಸವಾಲುಗಳು ಸಂಕೀರ್ಣವಾಗಿದ್ದು, ಸಾಮಾಜಿಕ – ರಾಜಕೀಯ ಸೂಕ್ಷ್ಮತೆಯಿಂದ ಕೂಡಿರುತ್ತವೆ. ಈ ಸಂದರ್ಭಗಳಲ್ಲಿ ಬಳಸಬಹುದಾದ ಕೌಶಲ್ಯಗಳೆಂದರೆ ಎ) ಸಣ್ಣ ಸಣ್ಣ ಗಾತ್ರದ ಕಿರುಯೋಜನೆಗಳ ರಚನೆ ಮತ್ತು ಅನುಷ್ಠಾನದಲ್ಲಿ ಸಹಕಾರ ಬಿ) ವಿಶಾಲ ಸಂಪನ್ಮೂಲಗಳ ಭೇದನ ಗುರುತಿಸುವಿಕೆ ಸಿ) ಅಂತಾರಾಷ್ಟ್ರೀಯ ಜಲವಿದ್ಯುತ್ ಶಕ್ತಿ ಸಂಸ್ಥೆಯ ಮಾನದಂಡ ಪ್ರಕಾರ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಎಲ್ಲಾ ಹಂತಗಳಲ್ಲಿ ನಿರಂತರ ಲೆಕ್ಕಾಚಾರ ಡಿ) ವಾತಾವರಣ ಮೇಲಿನ ಪರಿಣಾಮದ ಪಾರದರ್ಶಕ ಲೆಕ್ಕಾಚಾರ ಅಧ್ಯಯನ ಇ) ಪರವಾನಗಿ ಪತ್ರಗಳ ತ್ವರಿತ ಪಡೆದುಕೊಳ್ಳುವಿಕೆ ಮತ್ತು ಎಫ್) ಸಾರ್ವಜನಿಕ ಮತ್ತು ನಾಗರೀಕ ಸಂಸ್ಥೆಗಳ ಜೊತೆ ಕ್ರಿಯಾಶೀಲ ಮಾತುಕತೆ, ಅನುಸರಿಸುವಿಕೆ ಇತ್ಯಾದಿಗಳು. ಜೊತೆಗೆ ರಾಜಕೀಯ ಸಮ್ಮತಿ ಪರಿಹಾರಗಳನ್ನು ಪಡೆದುಕೊಳ್ಳುವುದು ಸಹ ಅಷ್ಟೇ ಪ್ರಮುಖ ಆಕರ್ಷಣೆ ವಿಷಯವಾಗಿರುತ್ತದೆ.

### ನವೀಕರಿಸಬಹುದಾದ ಇತರ ಶಕ್ತಿ ಸಂಪನ್ಮೂಲಗಳ ಅಭಿವೃದ್ಧಿ

ನವೀಕರಿಸಬಹುದಾದ ಇತರ ಶಕ್ತಿ ಸಂಪನ್ಮೂಲಗಳಾದ ಕಿರು ಜಲವಿದ್ಯುತ್, ಸಸ್ಯ ಪ್ರಾಣಿ ವರ್ಜಿತ ಇಂಧನ ಮೂಲ, ಸೌರಶಕ್ತಿ ಇತ್ಯಾದಿಗಳು ಸಹ ಇಂಧನ ಶಕ್ತಿ ಸುಧಾರಿಸುವಲ್ಲಿ ಹೆಚ್ಚಿನ ಪಾತ್ರವಹಿಸಬಲ್ಲದಾಗಿದ್ದು ಇದು ದೂರ ದೂರದ ವಸತಿ ಪ್ರದೇಶಗಳಿಗೆ ಇಂಧನ ಶಕ್ತಿ ಮಾರ್ಗವಾಗಿದೆ. ಈ ಪ್ರದೇಶಗಳಲ್ಲಿ ಸುಮಾರು 2200 ಎಮ್. ಡಬ್ಲ್ಯೂ ನಮ್ಮ ವಿದ್ಯುತ್ ಉತ್ಪಾದನೆ ಮಾಡಬಲ್ಲ 1000ಕ್ಕೂ ಅಧಿಕ ಕಿರು ಜಲವಿದ್ಯುತ್ ಶಕ್ತಿ ಯೋಜನೆಗಳಿವೆ ಎಂದು ಅಂದಾಜು ಮಾಡಲಾಗಿದೆ. ಇದಲ್ಲದೆ ಈ ಪ್ರದೇಶದಲ್ಲಿ ಬಯೊಮಾಸ್ (ಪ್ರಾಣಿ, ಸಸ್ಯವರ್ಜಿತ ಇಂಧನ ಮೂಲ) ಅಪಾರವಾಗಿದ್ದು ಅದನ್ನು ಸರಿಯಾಗಿ ಬಳಸಿಕೊಂಡೆ ಅದು ಗ್ರಾಮೀಣ ವಿದ್ಯುತ್ ಶಕ್ತಿಗೆ ಹೆಚ್ಚು ಉಪಯೋಗವಾಗಬಲ್ಲದಾಗಿದೆ. ಸೌರಶಕ್ತಿ ಬಳಕೆಯೂ ಅಷ್ಟೆ ಉಪಯೋಗವಾಗಬಲ್ಲದಾಗಿದೆ. ಹೊಸ ಮತ್ತು ನವೀಕರಣ ಇಂಧನ ಶಕ್ತಿ ಸಚಿವಾಲಯದ ಸೌರಶಕ್ತಿ ನಗರಾಭಿವೃದ್ಧಿ ಕಾರ್ಯಕ್ರಮದ ಭಾಗವಾಗಿ 8 ನಗರಗಳಿಗೆ ಮಹಾಯೋಜನೆಗಳನ್ನು ತಯಾರಿಸಲಾಗಿದೆ. ಅಗರ್ತಲಾ ಮತ್ತು ಐಜ್ವಾಲ್‌ಗಳನ್ನು ಪ್ರಮುಖ ಸೋಲಾರ್ ನಗರಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಯೋಜನೆಗಳ ಶೀಘ್ರ ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳೆಂದರೆ ಈ ಯೋಜನೆಗಳು ದೂರದೂರದ ಮೂಲೆಯಲ್ಲಿರುವುದು ಮತ್ತು ಯೋಜಿತ ಪ್ರದೇಶದ ಜನರನ್ನು ತೆರವುಗೊಳಿಸುವ ಸಮಸ್ಯೆ, ಯೋಜನಾ ಹೂಡಿಕೆದಾರರು ಅನುಷ್ಠಾನದಲ್ಲಿ ನಿರಾಸಕ್ತಿ ತಳೆಯುತ್ತಿರುವುದು. ಈ ಸಂದರ್ಭದಲ್ಲಿ ಸ್ಥಳೀಯ ಜನರ ಇಂಧನ ಶಕ್ತಿ ಅವಶ್ಯಕತೆಯ ಸರಿಯಾದ ಲೆಕ್ಕಾಚಾರ ಮತ್ತು ಶಕ್ತಿಮೂಲಗಳ ವ್ಯಾಪಕ ಲೆಕ್ಕಾಚಾರಗಳನ್ನು ಗಮನಿಸುವುದು ಅತ್ಯಂತ ಅವಶ್ಯಕವಾಗಿದೆ. ಈ ಯೋಜನೆಗಳನ್ನು ಇಂಧನ ಶಕ್ತಿ ಸಂಪರ್ಕಜಾಲದಿಂದ ಹೊರಗಿಡುವ ಅಥವಾ ಭೌಗೋಳಿಕತೆಗನುಗುಣವಾಗಿ ಸಂಪರ್ಕ ಜಾಲಕ್ಕೆ ಸೇರಿಸುವಂತೆ ಜನಸಾಂದ್ರತೆಗೆ ತಕ್ಕಂತೆ ಮತ್ತು ಬದಲಾಗುವ ಇಂಧನ ಶಕ್ತಿ ಅವಶ್ಯಕತೆಗಳಿಗೆ ತಕ್ಕಂತೆ ವಿನ್ಯಾಸ ಮಾಡಬಹುದಾಗಿದೆ. ಜೊತೆಗೆ ಸರಿಯಾದ ವ್ಯವಹಾರ ಮಾದರಿಗಳ ಅಭಿವೃದ್ಧಿಗೂ ಗಮನ ನೀಡಬೇಕು.

### ಸೂಕ್ತ ಇಂಧನ ಹಂಚಿಕೆ

ದೂರ ದೂರದ ಸ್ಥಳಗಳಲ್ಲಿ ನೆಲೆಗೊಂಡಿರುವ ಇಂಧನ ಶಕ್ತಿ ಉತ್ಪಾದನಾ ಕೇಂದ್ರಗಳಿಂದ ರಾಜ್ಯಾದ್ಯಂತ ಇರುವ




ಬೇಡಿಕೆಯ ಕೇಂದ್ರಗಳಿಗೆ ಇಂಧನ ಶಕ್ತಿಯ ಪ್ರಸರಣ ಮತ್ತು ವಿತರಣೆಗೆ ವಿತರಣಾ ಕೇಂದ್ರಗಳು ಬೇಕಾಗುತ್ತವೆ ಮತ್ತು ಇದಕ್ಕೆ ಹೆಚ್ಚಿನ ಹೂಡಿಕೆ ಬೇಕಾಗುತ್ತದೆ. ಯೋಜನೆಯ ಪ್ರಾರಂಭಿಕ ವರ್ಷಗಳಲ್ಲಿ ಇಂಧನ ಶಕ್ತಿಯ ಬಳಕೆ ಕಡಿಮೆ ಇರುತ್ತದರ ಕಾರಣ ವೆಚ್ಚದ ಪ್ರಮಾಣ ಹೆಚ್ಚಾಗಿರುತ್ತದೆ. ಉತ್ಪಾದನಾ ಸಾಮರ್ಥ್ಯದ ಅನಿರ್ದಿಷ್ಟತೆ, ಭೌಗೋಳಿಕ ಅಡಚಣೆ, ಕೆಲಸದ ಅವಧಿ ಇತ್ಯಾದಿಗಳು ಇದಕ್ಕೆ ಕಾರಣವಾಗಿರುತ್ತವೆ. ಆದ್ದರಿಂದ ಪ್ರಸರಣ ಮತ್ತು ಹಂಚಿಕೆ ಪದ್ಧತಿಯು ಈ ಕೆಳಗಿನ ಮುಂದಿನ ಹೆಚ್ಚು ಪ್ರಾಮುಖ್ಯತೆ ನೀಡಬೇಕಾಗುತ್ತದೆ.

1. ದೀರ್ಘ ಅವಧಿಯ ಉತ್ಪಾದನಾ ವಿಸ್ತರಣೆ ಯೋಜನೆಗಳು. 2. ಬೇಡಿಕೆ ಬೆಳವಣಿಗೆ ಮಾದರಿ ಮತ್ತು ಮಾರುಕಟ್ಟೆ ಆಧರಿತ ಒಲವಿಗೆ ತಕ್ಕಂತೆ ಉತ್ಪಾದನೆ. 3. ಸಣ್ಣ ಸಣ್ಣ ಭಾಗ ಆಧರಿತ ಅಭಿವೃದ್ಧಿ ಯೋಜನೆಗಳು. 4. ಅಡಚಣೆಗಳ ನಿರ್ಮೂಲನೆ. 5. ನಷ್ಟ ತಗ್ಗಿಸುವಿಕೆ. 6. ತಾಂತ್ರಿಕತೆಯನ್ನು ಉನ್ನತಿಗೊಳಿಸುವಿಕೆ. 7. ಆಗಾಗ್ಗೆ ವಿಶ್ಲೇಷಣೆ ಮಾಡುವುದು

ದೊಡ್ಡ ಪ್ರಮಾಣದ ನವೀಕರಣ ಶಕ್ತಿ ಮೂಲಗಳ ಸಂಪರ್ಕ ಜಾಲ ಒಗ್ಗೂಡಿಸುವಿಕೆ ಸಂದರ್ಭದಲ್ಲಿ ಸಂಪರ್ಕ ಜಾಲ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಂದರ್ಭದಲ್ಲಿ ಸುಸಜ್ಜಿತ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸುವುದೂ ಅಷ್ಟೇ ಪ್ರಾಮುಖ್ಯತೆ ಹೊಂದಿದೆ.

### ಸಾಮರ್ಥ್ಯ ಸುಧಾರಿಸುವಿಕೆ

ಬೇಡಿಕೆ–ಪೂರೈಕೆ ಸರಪಳಿಯ ಸಾಮರ್ಥ್ಯ ಸುಧಾರಣೆಯು ಯಾವುದೇ ಇಂಧನ ಶಕ್ತಿ ಪದ್ಧತಿಯ ಅನುಕೂಲಕರ ಅಭಿವೃದ್ಧಿ ಹಾಗೂ ನಿರ್ವಹಣೆಯ ಕೀಲಿಕೈ ಆಗಿದೆ. ವಿದ್ಯುತ್ ಕಾಯ್ದೆ, ಶಕ್ತಿ ಸಂರಕ್ಷಣಾ ಕಾಯ್ದೆ ಮತ್ತು ಹೆಚ್ಚುವರಿ ಇಂಧನ ಶಕ್ತಿ

ಸಾಮರ್ಥ್ಯದ ರಾಷ್ಟ್ರೀಯ ಮಿಷನ್‌ಗಳು ಇದಕ್ಕಾಗಿ ನಿರ್ದಿಷ್ಟ ಕಾರ್ಯ್ದ ಮಾಡುವುದಲ್ಲದೆ ಅದನ್ನು ಬೆಂಬಲಿಸಬೇಕು. ಈ ವಲಯದಲ್ಲಿ ಇಂಧನ ಶಕ್ತಿ ಸಾಮರ್ಥ್ಯ ಸುಧಾರಿಸಲು ಗಮನಾರ್ಹ ಅವಕಾಶಗಳಿರುವ ಕಾರಣಕ್ಕೋಸ್ಕರ ಇದಕ್ಕೆ ಅತ್ಯಂತ ಆದ್ಯತೆಯ ಮೇಲೆ ಗಮನ ನೀಡಬೇಕಾಗಿದೆ. ಈ ಸಂದರ್ಭದಲ್ಲಿ ಸೂಕ್ತ ವ್ಯವಹಾರ ಮಾದರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸುವುದು ಅಷ್ಟೆ ಮುಖ್ಯಾಗಿದೆ.

### ನೀತಿ ನಿಯಮಗಳ ಬೆಂಬಲ

ಸುಸ್ಥಿರ ಅಭಿವೃದ್ಧಿಗೆ ನಿಯಮ ಮತ್ತು ನಿಯಂತ್ರಣಗಳ ಬೆಂಬಲ ಜೊತೆಗೆ ಒಳ್ಳೆಯ ಆಡಳಿತ ನಿಯಂಣತ್ರವಿರಬೇಕು ಇದಕ್ಕಾಗಿ ಬಹುಮುಖ ಕೌಶಲ್ಯಗಳ ಕಡೆ ಹೆಚ್ಚು ಗಮನ ನೀಡುವ ಅವಶ್ಯಕತೆ ಇದೆ. ಅಗತ್ಯಗನುಸಾರವಾಗಿ ಖಾಸಗಿ ಮತ್ತು ಸಾರ್ವಜನಿಕ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಬೇಕು. ಇದು ಆರ್ಥಿಕ ಕ್ರೋಢೀಕರಣ ಮತ್ತು ನಿರ್ವಹಣಾ ಸಾಮರ್ಥ್ಯ



ಸುಧಾರಿಸುವಲ್ಲಿ ಸಹಾಯ ಮಾಡುತ್ತವೆ. ಈ ನಿಯಮ ನಿಯಂತ್ರಣಗಳ ಪರಿಣಾಮವನ್ನು ಆಗಾಗ್ಗೆ ಪರಿಶೀಲಿಸಿ ಇವು ನಿರೀಕ್ಷಿತ ಫಲತಾಂಶವನ್ನು ನೀಡಿರುವ ಬಗ್ಗೆ ಲೆಕ್ಕಾಚಾರ ಹಾಕಿ ಅಗತ್ಯವಿರುವ ಕಡೆ ಬದಲಾವಣೆ ಮಾಡಿಕೊಳ್ಳಬೇಕು.

### ಮಾನವ ಸಂಪನ್ಮೂಲ ಅಭಿವೃದ್ಧಿ

ಇನ್ನೊಂದು ಗಮನ ಹರಿಸಬೇಕಾದ ಕ್ಷೇತ್ರವೆಂದರೆ ಸಾಕಷ್ಟು ಕೌಶಲ್ಯಯುತ ಮಾನವ ಶಕ್ತಿಯ ಲಭ್ಯತೆ. ವಿವಿಧ ಎಂಜನಿಯರಿಂಗ್ ವಲಯಗಳ ಮೇಲೆ ಸಾಕಷ್ಟು ಪ್ರಭಾವ ಬೀರುವ ಯೋಜನಾ ಘಟಕಗಳನ್ನು ಚೆನ್ನಾಗಿ ನಿರ್ವಹಿಸುವ ಮಾನವ ಸಂಪನ್ಮೂಲದ ಕಡೆ ಹೆಚ್ಚು ಗಮನ ಹರಿಸಬೇಕು.

**ಉಪಸಂಹಾರ :** ಈಶಾನ್ಯ ರಾಜ್ಯಗಳ ಸುಸ್ಥಿರ ಇಂಧನ ಶಕ್ತಿ ವಲಯಗಳ ಅಭಿವೃದ್ಧಿಗೆ ಅನೇಕ ಅವಕಾಶಗಳನ್ನು ಕಲ್ಪಿಸಿರುವುದಲ್ಲದೆ ಸಾಕಷ್ಟು ಸವಾಲುಗಳನ್ನು ನೀಡಿದೆ. ಇವುಗಳನ್ನು ಸಂಬಾಳಿಸಲು ಬಹುಮುಖ ಕೌಶಲ್ಯಗಳ ಅಗತ್ಯವಿದೆ. ಗಮನ ಹರಿಸಬೇಕಾದ ಕೆಲವು ಮುಖ್ಯ ಕ್ಷೇತ್ರಗಳೆಂದರೆ ಜಲವಿದ್ಯುತ್ ಶಕ್ತಿ ಮತ್ತು ಇತರ ನವೀಕರಸಬಹುದಾದ ಶಕ್ತಿ ಮೂಲಗಳ ತ್ವರಿತ ಅಭಿವೃದ್ಧಿ, ಮಾರುಕಟ್ಟೆ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸರಣ ಮತ್ತು ವಿತರಣೆ ಪದ್ಧತಿಯ ವ್ಯಾಪಕ ವಿಸ್ತರಣಾ ಸಾಮರ್ಥ್ಯ ಸುಧಾರಿಸುವಿಕೆ ಪರಿಣಾಮಕಾರಿ ನೀತಿ ನಿಯಮಗಳ ಸೃಷ್ಟಿಸುವಿಕೆ, ದಕ್ಷ ಆಡಳಿತ ಯಂತ್ರ ಮತ್ತು ಉತ್ತಮ ಮಾನವ ಸಂಪನ್ಮೂಲ ಅಭಿವೃದ್ಧಿ ಆಗಿದೆ. ದೇಶದ ಇಂಧನ ಶಕ್ತಿ ಭದ್ರತೆಯ ಸುಧಾರಣೆ ದೃಷ್ಟಿಯಿಂದ ಈಶಾನ್ಯ ರಾಜ್ಯಗಳ ಶಕ್ತಿ ಮೂಲಗಳ ಸುಸ್ಥಿರ ಅಭಿವೃದ್ಧಿಯು ಸಹ ಬಹುಮುಖ್ಯವಾಗಿದ್ದು, ಹಸಿರು ಮನೆ ಪರಿಣಾಮದ ಗುರಿಯನ್ನು ಸಾಧಿಸುವುದಲ್ಲದೆ ವಿಶಾಲ ಸೌರಶಕ್ತಿ ಮತ್ತು ಪವನ ಶಕ್ತಿ ಜಾಲಗಳಿಗೆ ಹೆಚ್ಚು ಬೆಂಬಲ ನೀಡಬೇಕಾಗಿದೆ. ❑

(18ನೇ ಪುಟದಿಂದ)

## ಈಶಾನ್ಯ ಭಾರತದಲ್ಲಿ ಬುಡಕಟ್ಟು ಅಭಿವೃದ್ಧಿ

ಹೆಚ್ಚು ಪ್ರಮಾಣದಲ್ಲಿ ಸಿ ಮತ್ತು ಡಿ ಗುಂಪಿನ ನೌಕರರನ್ನೂ ನೇಮಿಸಿಕೊಂಡಿರುವುದರಿಂದ ಆ ರಾಜ್ಯಗಳ ಯೋಜನೇತರ ವೆಚ್ಚ ಹೆಚ್ಚಾಗಿದ್ದು ಮತ್ತು ರಾಜ್ಯಾದಾಯ ಕಡಿಮೆಯಾಗಿದ್ದು ಇದರಿಂದ ಯೋಜನಾ ವೆಚ್ಚ ಮೇಲೆ ಬಂಡವಾಳ ಕೊರತೆಯಾಗಿ ಕೇಂದ್ರದಿಂದ ಸಾಕಷ್ಟು ಸಹಾಯಧನ ಬಂದರೂ ಬಂಡವಾಳವನ್ನೂ ಸರಿತೂಗಿಸಲಾಗುತ್ತಿಲ್ಲ. ಉದಾಹರಣೆಗೆ ಅಸ್ಸಾಂನ ತಲಾದಾಯ 2014–15ರಲ್ಲಿ ಕೇವಲ ರೂ. 5775/– ಆದರೆ ಅಸ್ಸಾಂನಷ್ಟೆ ಬಡಜನರನ್ನು ಹೊಂದಿರುವ ಛತ್ತೀಸ್‌ಗಢದ ತಲಾದಾಯ ರೂ. 12,807/–.

ಈ ರಾಜ್ಯಗಳು ತಮ್ಮ ಆಡಳಿತ ಯಂತ್ರವನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ಕಳಪೆ ನಿರ್ವಹಣೆಗೆ ಸರ್ಕಾರಿ ಅಧಿಕಾರಿಗಳನ್ನು ಹೊಣೆ ಮಾಡಬೇಕು. ಈ ಅಧಿಕಾರಿಗಳು ತಮ್ಮ ನ್ಯೂನತೆಗೆ ಆಗಾಗ್ಗೆ ಅಸಂಬದ್ಧ ಊಹಾಪೋಹ ವರದಿಗಳನ್ನು ನೀಡಿರುತ್ತಾರೆ. ಈ ರಾಜ್ಯ ಸರ್ಕಾರಗಳ ವರದಿ ಪ್ರಕಾರ ಈಶಾನ್ಯ ರಾಜ್ಯಗಳ ಮಕ್ಕಳ ಅಪೌಷ್ಟಿಕತೆ ಪ್ರಮಾಣ ಶೇಕಡ 1 ಕ್ಕಿಂತ ಕಡಿಮೆ ಇದೆ. ಆದರೆ ಯೂನಿಸೆಫ್‌ನ ಸರ್ವೆ ವರದಿ ಪ್ರಕಾರ ಈ ಅಂಕಿ ಅಂಶ ಮಣಿಪುರದಲ್ಲಿ ಶೇ. 3.5ಕ್ಕಿಂತ ಅಧಿಕ ಹಾಗೂ ಮೇಘಾಲಯ ಮತ್ತು ತ್ರಿಪುರಾಗಳಲ್ಲಿ ಇದು ಶೇ. 16 ಇದೆ. ತಿಳಿಸುತ್ತದೆ. ಈ ಎರಡು ರೀತಿಯ ಅಂಕಿ ಅಂಶಗಳ ಸತ್ಯಾಸತ್ಯತೆಯನ್ನು ಕೂಡಲೆ ತಿಳಿಯುವುದು ಅತ್ಯಂತ ತುರ್ತಾಗಿದೆ. ಈ ಸಂಬಂಧದಲ್ಲಿ ಕ್ಷೇತ್ರದರ್ಶನ ಮಾಡಿ ಅಂಕಿ ಅಂಶಗಳನ್ನು ಸಂಗ್ರಹ ಮಾಡಿ ಅವು ನಂಬಲರ್ಹ ಹಾಗೂ ಸರಿಯಾಗಿವೆಯೆ ಮತ್ತು ಮೌಲ್ಯ ಮಾಪನ ಅಂಕಿ ಅಂಶಗಳೊಂದಿಗೆ ತಾಳೆ ಹೊಂದುತ್ತದೆಯೋ ಎಂಬುದನ್ನು ತಿಳಿಯಲು ವಿಧಾನಗಳ ಸುಧಾರಣೆಯ ಅಗತ್ಯವಿದೆ. ಮುಂದಿನ ದಿನಗಳಲ್ಲಿ ದೇಶದ ಇತರೆ ರಾಜ್ಯಗಳು ಮತ್ತು ಬುಡಕಟ್ಟು ಜನಾಂಗಗಳ ಈಶಾನ್ಯ ಭಾರತದ ನಡುವೆ ಇರುವ ಅಂತರವನ್ನು ಗಮನಾರ್ಹವಾಗಿ ಕಡಿಮೆ ಮಾಡುವ ಅವಶ್ಯಕತೆ ಇದ್ದು ಅದಕ್ಕೆ ಕೇವಲ ಬಂಡವಾಳ ಸಂಪನ್ಮೂಲಗಳ ಹರಿವನ್ನು ಹೆಚ್ಚು ಮಾಡುವುದಲ್ಲ, ಜೊತೆಗೆ ಆಡಳಿತ ಯಂತ್ರವನ್ನು ಬಹುವಾಗಿ ಸುಧಾರಿಸಬೇಕಾಗಿದೆ. ಈ ರಾಜ್ಯಗಳು ಆರ್ಥಿಕ ಸಂಪನ್ಮೂಲಗಳನ್ನು ದೊರಕಿಸಿಕೊಳ್ಳುವುದಷ್ಟೆ ಅಲ್ಲ, ಆ ಸಂಪನ್ಮೂಲಗಳನ್ನು ಆ ರಾಜ್ಯಗಳ ಸಂಘ ಸಂಸ್ಥೆಗಳು, ವ್ಯಕ್ತಿಗಳು ತಮ್ಮ ರಾಜ್ಯಗಳ ಬೆಳವಣಿಗೆಗೆ ಪರಿಣಾಮಕಾರಿಯಾಗಿ, ಕಡ್ಡಾಯವಾಗಿ ಬಳಸಿಕೊಳ್ಳುವ ಸಾಮರ್ಥ್ಯ ಹೊಂದಲೇ ಬೇಕಾಗಿದೆ. ಸರ್ಕಾರಿ ಇಲಾಖೆಗಳನ್ನು ಮತ್ತು ಸಂಸ್ಥೆಗಳನ್ನು ಹೆಚ್ಚು ಬಲಪಡಿಸಬೇಕಾಗಿದ್ದು ಜೊತೆಗೆ ನಾಗರಿಕ ಸಮಾಜ ಮತ್ತು ರಾಜ್ಯ ಸರ್ಕಾರಗಳ ಫಲಭರಿತ ಸಹಭಾಗಿತ್ವಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿದೆ. ಜೊತೆಗೆ ಸ್ಥಳೀಯ ಸರ್ಕಾರಿ ಸಂಸ್ಥೆಗಳನ್ನು ಬಲಪಡಿಸುವುದು ಅಷ್ಟೆ ಮುಖ್ಯವಾಗಿದೆ. ❑

# ವಿಶ್ವ ಪ್ರವಾಸೋದ್ಯಮದ ಅಜ್ಞಾತ ಸ್ವರ್ಗ

* ಸೌರಭ್ ಕುಮಾರ್ ದೀಕ್ಷಿತ್



ತನ್ನ ಭೌಗೋಳಿಕ ವಿಶೇಷತೆ ಹಾಗೂ ಶ್ರೀಮಂತವಾದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಪೂರ್ವದೊಂದಿಗಿನ ಸಂಬಂಧವೃದ್ಧಿಗೆ ಹೆಚ್ಚು ಗಮನ ನೀಡುತ್ತಿರುವ ಕಾರಣದಿಂದಾಗಿ ಕೂಡಾ ಈಶಾನ್ಯ ಭಾರತವು ದೇಶದ ಬೆಳವಣಿಗೆಯ ಎಂಜಿನ್ ಆಗಲು ಸಾಧ್ಯವಿದೆ.

ಪ್ರಪಂಚದ ಅತಿ ಶ್ರೀಮಂತ ಜೀವಭೌಗೋಳಿಕ ಪ್ರದೇಶಗಳಲ್ಲಿ ಈಶಾನ್ಯ ಭಾರತ ಕೇಂದ್ರಸ್ಥಾನ ಹೊಂದಿದೆ. ಈಶಾನ್ಯ ಭಾರತದ ರಾಜ್ಯಗಳಲ್ಲಿ ವರಮಾನ ಗಳಿಸುವ ಮತ್ತು ಉದ್ಯೋಗ ಸೃಷ್ಟಿಸುವ ವಿಪುಲ ಅವಕಾಶಗಳನ್ನು ಇಲ್ಲಿನ ಪ್ರವಾಸೋದ್ಯಮ ಹೊಂದಿದೆ. ಏಕೆಂದರೆ ಈ ಪ್ರದೇಶದಲ್ಲಿ ಸಸ್ಯ ಮತ್ತು ಪ್ರಾಣಿ ಸಂಪತ್ತು, ಜೀವವೈವಿಧ್ಯ ಸಂಪತ್ತು ಸಹ ಇಲ್ಲಿ ಹೇರಳವಾಗಿದೆ. ಇದು ಅನೇಕ ಆರ್ಥಿಕ ಸಂಪನ್ಮೂಲಗಳ ಖಜಾನೆಯೂ ಹೌದು. ಇಲ್ಲಿನ ಸಾಂಸ್ಕೃತಿಕ ಹಾಗೂ ಜನಾಂಗೀಯ ಪರಂಪರೆ ಅತ್ಯಂತ ಶ್ರೀಮಂತವಾಗಿದ್ದು ಇವೂ ಸಹ ಈ ಪ್ರದೇಶವನ್ನು ಪ್ರವಾಸೋದ್ಯಮದ ಕೇಂದ್ರಸ್ಥಾನವಾಗಿಸಿವೆ. ಈಶಾನ್ಯ ಭಾರತದ ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಸಂರಕ್ಷಣಾ ಧಾಮಗಳು ವಿಶ್ವದ ಮೂಲೆಮೂಲೆಗಳಿಂದಲೂ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಹಾಗೆಯೇ ಇಲ್ಲಿನ ಚಹ ಪ್ರವಾಸೋದ್ಯಮ, (ಟೀ ಟೂರಿಸಂ) ಗ್ರಾಮೀಣ ಪ್ರವಾಸೋದ್ಯಮ ಮತ್ತು ಗಾಲ್ಫ್ ಪ್ರವಾಸೋದ್ಯಮಗಳಂತಹ ಬಹುರೂಪಿ ಪ್ರವಾಸೋದ್ಯಮಗಳೂ ಸಹ ಪ್ರವಾಸಿಗರ ಆಕರ್ಷಣೆಗಳಾಗಿವೆ.

ಜನಾಂಗೀಯ ಹಾಗೂ ಭಾಷಿಕ ವ್ಯತ್ಯಾಸಗಳೂ ಸೇರಿದಂತೆ ಹತ್ತು ಹಲವು ಅಂಶಗಳು ಎಂಟು ಪ್ರತ್ಯೇಕ ರಾಜ್ಯಗಳ ರಚನೆಗೆ ದಾರಿ ಮಾಡಿಕೊಟ್ಟವು. ಆ ರಾಜ್ಯಗಳೆಂದರೆ ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೊರಾಂ, ತ್ರಿಪುರಾ ಮತ್ತು ಸಿಕ್ಕಿಂ. ಅನೇಕ ವಿಧಗಳಲ್ಲಿ ಈಶಾನ್ಯ ಭಾರತವು ಭಾರತದ ಇತರೆಡೆಗಳಿಗಿಂತ ವಿಭಿನ್ನತೆ ಹೊಂದಿದೆ. ಇಲ್ಲಿ ಭಿನ್ನಭಿನ್ನ ಭಾಷೆ, ಉಪಭಾಷೆಗಳನ್ನಾಡುವ, ನೂರಾರು ಬುಡಕಟ್ಟುಗಳಿಗೆ ಸೇರಿದ ಜನರಿದ್ದಾರೆ. ಬರೀ ಅರುಣಾಚಲ ಪ್ರದೇಶವೊಂದರಲ್ಲೇ 50ಕ್ಕೂ ಹೆಚ್ಚು ಭಾಷೆಯಾಡುವ ಸಮುದಾಯಗಳಿವೆ. ಇಲ್ಲಿನ ಬುಡಕಟ್ಟು ಜನರಿಗೂ ಬರ್ಮಾ, ಥೈಲ್ಯಾಂಡ್ ಮತ್ತು ಲಾವೋಸ್‌ಗಳ ಬುಡಕಟ್ಟು ಜನರಿಗೂ ಹೋಲಿಕೆ ಕಂಡುಬರುತ್ತದೆ. ಇಲ್ಲಿನ ಭೂಗೋಳಿಕ ಪರಿಸರ, ಭೂಮೇಲ್ಮೈ ಲಕ್ಷಣಗಳು, ವೈವಿಧ್ಯಮಯ ಸಸ್ಯ, ಪ್ರಾಣಿ ಪ್ರಭೇದಗಳು, ಅಪರೂಪದ ಆರ್ಕಿಡ್‌ಗಳು ಮತ್ತು ಚಿಟ್ಟೆಗಳು, ಬೌದ್ಧವಿಹಾರಗಳು, ಚೇತೋಹಾರಿ ನದಿಗಳು, ಪ್ರಾಚೀನ ಸಂಪ್ರದಾಯ–ಪರಂಪರೆ ಮತ್ತು ಜೀವನಶೈಲಿಗಳ ಇತಿಹಾಸ, ಇಲ್ಲಿನ ಹಬ್ಬ–ಹರಿದಿನಗಳು ಮತ್ತು ಕರಕುಶಲ ಕಲಾಕೃತಿಗಳು, ಇವೆಲ್ಲವೂ ಸೇರಿಕೊಂಡು ಈಶಾನ್ಯ ಭಾರತ ಎಂಬುದು ಪ್ರವಾಸಿಗರ ಅತ್ಯಂತ ಆಕರ್ಷಣೀಯ, ನೆಚ್ಚಿನ ತಾಣವಾಗಿದೆ.

ಪ್ರವಾಸೋದ್ಯಮ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಈಶಾನ್ಯ ಭಾರತ ಪ್ರದೇಶಗಳಿಗೆ ಬರುವ ಪ್ರವಾಸಿಗರ ಹರಿವು 2011ರಿಂದ ತೀವ್ರಗತಿಯಲ್ಲಿ ಏರಿದೆ. 2013ರಲ್ಲಿ ಈ ಪ್ರಮಾಣ 2012ರಲ್ಲಿದ್ದುದಕ್ಕಿಂತ ದುಪ್ಪಟ್ಟಿಗಿಂತ ಹೆಚ್ಚಿತ್ತು. 2011ರಿಂದ 2012ರವರೆಗೆ ವಿದೇಶಿ ಪ್ರವಾಸಿಗರ ಸಂಖ್ಯೆ ಶೇಕಡಾ 12.5ರಷ್ಟು ಹೆಚ್ಚಿತ್ತು. 2012ರಿಂದ 2013ರ ವರಗೆ ಶೇ.27.9ರಷ್ಟು ಬೆಳವಣಿಗೆ ಕಂಡಿತ್ತು. 2011ರಲ್ಲಿ ಈಶಾನ್ಯ ಭಾರತಕ್ಕೆ ಭೇಟಿ ನೀಡಿದ ಪ್ರವಾಸಿಗರ ಒಟ್ಟು ಸಂಖ್ಯೆ 58,920 ಆಗಿದ್ದರೆ 2012ರಲ್ಲಿ 66,302. ಇದು 2013ರಲ್ಲಿ 84,820ಕ್ಕೆ ಹೆಚ್ಚಿ 2014ರ ಅವಧಿಯಲ್ಲಿ 1,18,552ಕ್ಕೆ ಏರಿತ್ತು.

* ಮುಖ್ಯಸ್ಥರು, ಪ್ರವಾಸೋದ್ಯಮ ಮತ್ತು ಹೊಟೆಲ್ ಮ್ಯಾನೇಜ್‌ಮೆಂಟ್ ವಿಭಾಗ, ನಾರ್ತ್ ಈಸ್ಟರ್ನ್ ಹಿಲ್ ಯೂನಿವರ್ಸಿಟಿ, ಶಿಲ್ಲಾಂಗ್.
E-mail : saurabh5sk@yahoo.com

ಅಸ್ಸಾಂನಲ್ಲಿ 2011ರಲ್ಲಿ 16,400 ವಿದೇಶಿ ಪ್ರವಾಸಿಗರು ದಾಖಲಾಗಿದ್ದರೆ 2012ರಲ್ಲಿ ಭೇಟಿ ನೀಡಿದ್ದವರು 17,543 ಮಂದಿ. ಮತ್ತದು 2013ರಲ್ಲಿ 17,638ಕ್ಕೆ ಏರಿತ್ತು. ಸಿಕ್ಕಿಂ ರಾಜ್ಯವು 2012ರಲ್ಲಿ 26,489 ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿದ್ದರೆ 2013ರಲ್ಲಿ 31,698 ಜನರನ್ನು ಆಕರ್ಷಿಸಿತ್ತು. 2011ರಲ್ಲಿ 23,602 ವಿದೇಶಿಪ್ರವಾಸಿಗರು ಸಿಕ್ಕಿಂ ದರ್ಶನ ಮಾಡಿದ್ದರು.

ತನ್ನ ಭೌಗೋಳಿಕ ವಿಶೇಷತೆ ಹಾಗೂ ಶ್ರೀಮಂತವಾದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಪೂರ್ವದೊಂದಿಗಿನ ಸಂಬಂಧವೃದ್ಧಿಗೆ ಹೆಚ್ಚು ಗಮನ ನೀಡುತ್ತಿರುವ ಕಾರಣದಿಂದಾಗಿ ಕೂಡಾ ಈಶಾನ್ಯ ಭಾರತವು ದೇಶದ ಬೆಳವಣಿಗೆಯ ಎಂಜಿನ್ ಆಗಲು ಸಾಧ್ಯವಿದೆ. ಭಾರತದ ಈಶಾನ್ಯ ಪ್ರದೇಶದಲ್ಲಿ ಅಪಾರವಾದ ನೈಸಗಿಕ ಸಂಪನ್ಮೂಲವಿದೆ. "ಪೂರ್ವದೆಡೆ ಕ್ರಿಯಾಶೀಲರಾಗಿ" ನೀತಿಯ ಹಿನ್ನೆಲೆಯಲ್ಲಿ ಪೂರ್ವದ ಹೆಬ್ಬಾಗಿಲೆಂದೇ ಈಶಾನ್ಯ ಭಾರತವನ್ನು ಪರಿಗಣಿಸಲಾಗಿದೆ.

ಗಡಿಯಾಚೆಗಿನ ವ್ಯಾಪಾರ ಉಪಕ್ರಮಗಳಿಂದ ಲಾಭಗಳಿಸಲಿಕ್ಕಾಗಿ ಈ ಭಾಗದಲ್ಲಿ ಪ್ರವಾಸೋದ್ಯಮವನ್ನು ನೆರೆಹೊರೆಯ ದೇಶಗಳ ಸಹಕಾರದಲ್ಲಿ ನಡೆಸಬೇಕಾಗಿದೆ. ಈ ಪ್ರದೇಶವು ಉತ್ತರದಲ್ಲಿ ಚೀನಾ, ಪೂರ್ವದಲ್ಲಿ ಮ್ಯಾನ್ಮಾರ್, ದಕ್ಷಿಣದಲ್ಲಿ ನೈರುತ್ಯದಲ್ಲಿ ಬಾಂಗ್ಲಾದೇಶ ಮತ್ತು ಆಗ್ನೇಯದಲ್ಲಿ ಭೂತಾನ್ ದೇಶಗಳೊಂದಿಗೆ ತನ್ನ ಗಡಿಗಳನ್ನು ಹಂಚಿಕೊಂಡಿದೆ. ಭಾರತದ ಮಿಕ್ಕ ಭಾಗಗಳೊಂದಿಗೆ ಭೂಸಂಪರ್ಕ ಸಮರ್ಪಕವಾಗಿರದಿರುವುದು ಒಂದು ಅಡೆತಡೆಯಾಗಿದ್ದರೂ ಈ ಪ್ರದೇಶಕ್ಕಿರುವ 4,500 ಕಿ.ಮೀ ದೂರದ ಅಂತಾರಾಷ್ಟ್ರೀಯ ಗಡಿಯು ಒಂದು ವರವಾಗಿ ಪರಿಣಮಿಸಿದೆಯಲ್ಲದೇ ಇದಕ್ಕೆ ಇಡೀ ಪ್ರದೇಶವನ್ನೇ ಮಾರ್ಪಡಿಸುವ ಸಾಮರ್ಥ್ಯವಿದೆ. ಈ ಹಿನ್ನೆಲೆಯಲ್ಲಿ ಈ ಲೇಖನದಲ್ಲಿ ದೇಶದ ಒಟ್ಟಾರೆ ಆರ್ಥಿಕ ಅಭಿವೃದ್ಧಿಗೆ ದೊಡ್ಡ ಮಟ್ಟದಲ್ಲಿ ಕೊಡುಗೆ ನೀಡಬಲ್ಲ ಈಶಾನ್ಯ ಭಾರತದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರದೇಶದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಅರಿಯಲು ಈ ಪ್ರದೇಶದ ಪ್ರವಾಸೋದ್ಯಮವನ್ನು ಮುಂದಿನಂತೆ ವಿಭಾಗಿಸಲಾಗಿದೆ.

**ಸುಂದರವಾದ ಗಿರಿಧಾಮಗಳು :** ದೇಶದ ಕೆಲವು ಪ್ರಮುಖ ಗಿರಿಧಾಮಗಳು ಇರುವುದು ಈಶಾನ್ಯ ಭಾರತದಲ್ಲಿ. ಗಿರಿಧಾಮಗಳು ತಮ್ಮ ವಿಶಿಷ್ಟವಾದ ಸ್ಥಳೀಯ ಸಂಸ್ಕೃತಿ ಮತ್ತು ಆಹಾರ ವಿಶೇಷತೆಗಳ ಕಾರಣದಿಂದಾಗಿ ಒಂದರಿಂದ ಮತ್ತೊಂದು ಸಂಪೂರ್ಣ ಭಿನ್ನವಾಗಿರುತ್ತವೆ. ಸಿಕ್ಕಿಂನ ರಾಜಧಾನಿಯಾದ ಗ್ಯಾಂಗ್ಟಕ್ ಬೃಹತ್ ನಗರವಾಗಿದ್ದು ಹಲವು ಬೌದ್ಧವಿಹಾರಗಳು ಇಲ್ಲಿವೆ. ಇದು ಪೂರ್ವ ಸಿಕ್ಕಿಂ ಜಿಲ್ಲೆಯ ಕೇಂದ್ರಸ್ಥಾನವೂ ಹೌದು. ಇಡೀ ಈಶಾನ್ಯ ಭಾರತದಲ್ಲಿ ಗ್ಯಾಂಗ್ಟಕ್ ಒಂದು ಪ್ರಸಿದ್ಧ ಪ್ರವಾಸಿ ತಾಣವಾಗಿದೆ. 1974ರ ಏಪ್ರಿಲ್ 20 ರಿಂದ ಪ್ರದೇಶದ ಇಟಾನಗರವು ಅರುಣಾಚಲ ಪ್ರದೇಶದ ರಾಜಧಾನಿಯಾಗಿದೆ. ಇದು ಹಿಮಾಲಯ ಪರ್ವತಶ್ರೇಣಿಯ ಬುಡದಲ್ಲಿದ್ದು ಪ್ರಾಕೃತಿಕ ಜೀವಾವಾಸವನ್ನು ವೀಕ್ಷಿಸಬಯಸುವ ಪ್ರವಾಸಿಗರಿಗೆ ಹೇಳಿ ಮಾಡಿಸಿದ ಗಿರಿಧಾಮವಾಗಿದೆ.

ಮೇಘಾಲಯದ ರಾಜಧಾನಿ ಶಿಲ್ಲಾಂಗ್ ನಗರವು ವಿಶ್ವದ ಅತ್ಯಂತ ತೇವ ಪ್ರದೇಶ ಎಂದು ಹೆಸರಾಗಿರುವ ಮೌಸಿನ್ರಾಮ್ ನಿಂದ ಕೇವಲ 55 ಕಿ.ಮೀ. ದೂರದಲ್ಲಿದೆ. ಶಿಲ್ಲಾಂಗನ್ನು ಸ್ಕಾಟ್ಲೆಂಡಿನ ಬೆಟ್ಟಪ್ರದೇಶಗಳಿಗೆ ಹೋಲಿಸಿ ಎರಡೂ ಪ್ರದೇಶಗಳ ಸಾಮ್ಯತೆಯ ಕಾರಣದಿಂದಾಗಿ ಪೂರ್ವದ ಸ್ಕಾಟ್ಲೆಂಡ್ ಎಂದೇ ಕರೆಯುವ ವಾಡಿಕೆಯಿದೆ. ಇಲ್ಲಿನ ಪ್ರಸಿದ್ಧ ಡನ್ ಬಾಸ್ಕೋ ಮ್ಯೂಸಿಯಂ, ಬಟರ್‌ಫ್ಲೈ ಮ್ಯೂಸಿಯಂ, ಬಾಟನಿಕಲ್ ಗಾರ್ಡನ್, ಸಿಲ್ಲಾಂಗ್ ಪೀಕ್, ಉಮಿಯಮ್ ಸರೋವರ ಮತ್ತು ವಾರ್ಡ್ಸ್ ಸರೋವರಗಳಿವೆ.

**ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿಪ್ರಭೇಧಗಳು :** ಈಶಾನ್ಯ ಭಾರತದ 30 ಪ್ರಮುಖ ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಸಂರಕ್ಷಣಾ ಧಾಮಗಳು ಈಶಾನ್ಯ ಭಾರತದ ಶ್ರೀಮಂತ ಪರಂಪರೆಯ ಖಜಾನೆಯಾಗಿವೆ. ಸಿಕ್ಕಿಂನಲ್ಲಿರುವ ಕಾಂಚನಜುಂಗಾ ಜೀವಗೋಳ ಸಂರಕ್ಷಾಧಾಮ, ಅರುಣಾಚಲ ಪ್ರದೇಶದ ನಾಂದಫಾ ರಾಷ್ಟ್ರೀಯ ಉದ್ಯಾನವನ, ಅಸ್ಸಾಂನ ಕಾಜಿರಂಗಾ ಮತ್ತು ಮನಾಸ್ ರಾಷ್ಟ್ರೀಯ ಉದ್ಯಾನವನಗಳು, ಮಣಿಪುರದ ಕೀಬುಲ್ ಲ್ಯಾಮ್ಜಾವೋ ರಾಷ್ಟ್ರೀಯ ಉದ್ಯಾನವನ, ಮಿಜೊರಾಂನ ಮುರ್ಲೆನ್ ರಾಷ್ಟ್ರೀಯ ಉದ್ಯಾನವನ, ನಾಗಾಲ್ಯಾಂಡಿನ ಟಾಂಗ್‌ಕಿ ರಾಷ್ಟ್ರೀಯ



ಉದ್ಯಾನವನ ಹಾಗೂ ಮೇಘಾಲಯದ ನೋಕ್ರೆಕ್ ರಾಷ್ಟ್ರೀಯ ಉದ್ಯಾನವನಗಳು ಪ್ರವಾಸಿಗರ ಮನಸೂರೆಗೊಳ್ಳುವ ವನ್ಯಜೀವಿ ಆಕರ್ಷಣೆಗಳಾಗಿವೆ.

ಇತ್ತೀಚಿನ ದಿನಗಳಲ್ಲಿ ರಾಜ್ಯ ಸರ್ಕಾರಗಳು ಸ್ಥಳೀಯ ಜನರಿಗೆ ಸಾವಯವ ಕೃಷಿ ಮತ್ತು ಸಾವಯವ ಉತ್ಪನ್ನಗಳ ಲಾಭಗಳ ಬಗ್ಗೆ ಅರಿವು ನೀಡುವ ಕೆಲಸ ಮಾಡುತ್ತಿವೆ. ಇದು ಸಾವಯವ ಕೃಷಿಯ ಬೆಳವಣಿಗೆಗೆ ಹಾಗೂ ಈ ಪ್ರದೇಶದ ಗ್ರಾಮೀಣ/ ಜನಾಂಗ ವಿಶೇಷತೆಯ ಪ್ರವಾಸೋದ್ಯಮಕ್ಕೆ ಹೆಚ್ಚಿನ ಕೊಡುಗೆ ನೀಡುತ್ತಿದೆ.

**ಸಾಂಸ್ಕೃತಿಕ ಚಟುವಟಿಕೆ :** ಭಾರತದ ಅಜ್ಞಾತ ಸ್ವರ್ಗವಾದ ಈಶಾನ್ಯ ಭಾರತವು ತನ್ನ ವಿಶಿಷ್ಟವಾದ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಪರಂಪರೆಯ ಜೀವನಶೈಲಿಗಳಿಗೆ ಹೆಸರಾಗಿದೆ. ಈ ಪ್ರದೇಶವು ಹಿಂದೂ, ಕ್ರೈಸ್ತ, ಮುಸಲ್ಮಾನ ಮತ್ತು ಬೌದ್ಧಮತಗಳ ಒಂದು ಮಿಶ್ರ ಸಂಸ್ಕೃತಿಯನ್ನು ಹೊಂದಿ ಪ್ರವಾಸಿಗರಿಗೆ ವಿಶಿಷ್ಟ ಅನುಭವ ನೀಡುತ್ತದೆ. ಇಲ್ಲಿ ಇನ್ನಿತರೆ ಧಾರ್ಮಿಕ ಪಂಗಡಗಳಿಗೆ ಹೋಲಿಸಿದರೆ ಬೌದ್ಧ ಸಂಸ್ಕೃತಿಯು ಪ್ರಮುಖ ಪಾತ್ರ ವಹಿಸುತ್ತದೆ. ಇಲ್ಲಿ ದೊಡ್ಡ ಮಟ್ಟದಲ್ಲಿರುವ ಜನಾಂಗೀಯ ಗುಂಪುಗಳೂ ತಂತಮ್ಮ ವೈವಿಧ್ಯಮಯ ಸಂಸ್ಕೃತಿಗಳನ್ನು ಬಿಂಬಿಸುತ್ತವೆ. ಈಶಾನ್ಯ ರಾಜ್ಯಗಳ ಪ್ರತಿಯೊಂದು ರಾಜ್ಯವು ತನ್ನದೇ ವಿಶಿಷ್ಟವಾದಂತಹ ಬುಡಕಟ್ಟು ಸಂಸ್ಕೃತಿಯನ್ನು ಹೊಂದಿರುತ್ತದೆ. ಇಲ್ಲಿನ ಮೂಲವಾಸಿಗಳ ನೃತ್ಯ, ಹಬ್ಬ, ಜಾತ್ರೆಗಳು, ಆಹಾರಕ್ರಮಗಳು, ಕುಶಲಕಲೆಗಳು ಎಲ್ಲವೂ ವಿಶಿಷ್ಟ ಅನುಭವ ನೀಡುತ್ತವೆ. ಜಾತ್ರೆ ಮತ್ತು ಹಬ್ಬಗಳು ಬುಡಕಟ್ಟುಗಳ ಅವಿಭಾಜ್ಯ ಅಂಗವಾಗಿದ್ದು ಸಾಂಪ್ರದಾಯಿಕ ಕುಣಿತ ಮತ್ತು ಜಾನಪದ ಸಂಗೀತಗಳು ಮನಸ್ಸಿಗೆ ಮುದ ನೀಡುತ್ತವೆ. ವರ್ಷವಿಡೀ ವಿವಿಧ ಬುಡುಕಟ್ಟು ಸಮದಾಯಗಳ ಅಸಂಖ್ಯ ಹಬ್ಬಹರಿದಿನಗಳು ಇಲ್ಲಿ ಆಚರಿಸಲ್ಪಡುತ್ತವೆ.

ಅಜ್ಞಾತ ಈಶಾನ್ಯ ಭಾರತದ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಶ್ರೀಮಂತಿಕೆಯನ್ನು ಪ್ರತ್ಯಕ್ಷವಾಗಿ ಅನುಭವಿಸಲು ಈ ಹಬ್ಬಗಳ ಕಾಲವೇ ಅತ್ಯುತ್ತಮ ಕಾಲ. ಈಶಾನ್ಯ ಭಾರತದ ಪ್ರಮುಖ ಹಬ್ಬಗಳೆಂದರೆ ಬಿಹು, ಅಸ್ಸಾಂನ ಬ್ರಹ್ಮಪುತ್ರ ಉತ್ಸವ, ನಾಗಾಲ್ಯಾಂಡಿನ ಹಾರ್ನ್‌ಬಿಲ್ ಮತ್ತು ಸೆಕ್ರೇನ್ಯೀ ಹಬ್ಬ, ಅರುಣಾಚಲ ಪ್ರದೇಶದ ಟೋರ್ಗ್ಯಾ ವಿಹಾರ ಉತ್ಸವ, ಮೇಘಾಲಯದ ಮೋನೋಲಿತ್ ಮತ್ತು ಬೇಹ್ದೀಯೆಂಕ್ಲಾಮ್ ಹಬ್ಬ, ಮಣಿಪುರದ ಚಪ್ಚಾರ್ ಕೂಟ್ ಮತ್ತು ಚಾಕೌಬಾ ಹಬ್ಬ ಹಾಗೂ ತ್ರಿಪುರಾದ ಖಾರ್ಚೀ ಪೂಜೆ.

ಹಾರ್ನ್‌ಬಿಲ್ ನ್ಯಾಷನಲ್ ಪಾರ್ಕ್ ರಾಕ್ ಕಂಟೆಸ್ಟ್‌ನಂತಹ ಸಂಗೀತ ಮತ್ತು ನೃತ್ಯದ ಉತ್ಸವಗಳು ಮತ್ತು ಮೂಲವಾಸಿಗಳ ಕುಣಿತ ಮತ್ತು ಉತ್ಸವಗಳನ್ನು ರಾಜ್ಯಗಳೆಲ್ಲೆಡೆ ಆಚರಿಸಲಾಗುತ್ತದೆ. ಈಶಾನ್ಯ ಭಾರತದ ಬುಡಕಟ್ಟು ಜನರು ತಮ್ಮದೇ ಆದಂತಹ ವಿಶೇಷವಾದ ಸಂಗೀತ ವಾದ್ಯಗಳನ್ನು ಬಳಸುತ್ತಾರೆ. ತಮಕ್, ಖಾಂಬ್, ಲಂಬಾಂಗ್ ನಂತಹ ಬಿದಿರಿನ ವಾದ್ಯಗಳನ್ನು ಬಳಸುತ್ತಾರೆ.

ಶಿಲ್ಲಾಂಗ್‌ನಲ್ಲಿರುವ ಡಾನ್‌ಬಾಸ್ಕೋ ಸ್ಥಳೀಯ ಸಂಸ್ಕೃತಿಗಳ ಕೇಂದ್ರ, ಗುವಾಹತಿಯ ಕಾಮಾಖ್ಯ ದೇವಸ್ಥಾನ, ದಕ್ಷಿಣ ತ್ರಿಪುರ ಜಿಲ್ಲೆಯ ತ್ರಿಪುರ ಸುಂದರಿ ದೇವಾಲಯ, ಸಿಕ್ಕಿಂನ ಬೌದ್ಧವಿಹಾರಗಳು, ಇಂಫಾಲ್‌ನ ಶ್ರೀ ಕೃಷ್ಣ ದೇವಾಲಯ, ಕೊಹಿಮಾದಲ್ಲಿರುವ ಕ್ಯಾಥೋಲಿಕ್ ಕ್ಯಾಥೆಡ್ರಲ್ ಮುಂತಾದವು ಪ್ರಮುಖ ಸಾಂಸ್ಕೃತಿಕ ಆಕರ್ಷಣೆಗಳಾಗಿವೆ.

**ವೈವಿಧ್ಯಮಯ ತಿನಿಸುಗಳು :** ಈಶಾನ್ಯ ಭಾರತದ ಬಗೆಬಗೆಯ ತಿನಿಸುಗಳು ಇಲ್ಲಿನ ವಿಶಿಷ್ಟ ಸಂಸ್ಕೃತಿ ಮತ್ತು ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತದಲ್ಲದೇ ಅವು ಇಡೀ ದೇಶದ



ಇತರ ಭಾಗಗಳಿಗಿಂತಲೂ ಭಿನ್ನತೆ ಹೊಂದಿವೆ. ಈ ಪ್ರದೇಶದ ತಿಂಡಿತಿನಿಸುಗಳ ಎಣ್ಣೆ ಅಥವಾ ಮಸಾಲೆಮಯ–ವಾಗಿರುವುದಿಲ್ಲವಾದರೂ ಅವು ರುಚಿಕಟ್ಟಾಗಿರುತ್ತವೆ. ಸ್ಥಳೀಯವಾಗಿ ಬೆಳೆಯುವ ಸುವಾಸನಾಯುಕ್ತ ಸೊಪ್ಪುಗಳು ಅವನ್ನು ಮತ್ತಷ್ಟು ಆಸ್ವಾದನಾ–ಯೋಗ್ಯವಾಗಿಸುತ್ತವೆ. ಹಗುರುವಾಗಿವುರುದು, ಸರಳವಾಗಿ ಸಿದ್ಧಗೊಳಿಸುವುದು ಈಶಾನ್ಯ ಭಾರತದ ಆಹಾರದ ಮುದ್ರೆಯಾಗಿರುತ್ತದೆ. ಇಲ್ಲಿ ಮಣಿಪುರಿಮ ನಾಗಾ, ತ್ರಿಪುರಿ, ಅರುಣಾಚಲಿ, ಸಿಕ್ಕಿಂ, ಮಿಜೀ, ಮೇಘಾಲಯನ್ ವಿಶಿಷ್ಟ ತಿನಿಸುಗಳಿವೆ. ಈ ಪ್ರದೇಶಗಳ ಪ್ರಧಾನ ಆಹಾರ ಎಂದರೆ ಒಣ ಮೀನು, ಮಸಾಲೆಯುಕ್ತ ಮಾಂಸ, ಸ್ಥಳೀಯ ಸೊಪ್ಪುಗಳೊಂದಿಗೆ ಅನ್ನ ಹಾಗೂ ಹಸಿರು ತರಕಾರಿಗಳು. ಕೋಳಿ ಮಾಂಸ, ಕುರಿ ಮಾಂಸ, ಬಾತುಕೋಳಿ ಮಾಂಸ, ಪಾರಿವಾಳದ ಮಾಂಸ, ನಾಯಿ ಮಾಂಸಗಳು ಈಶಾನ್ಯ ಭಾರತದ ಅತ್ಯಂತ ಜನಪ್ರಿಯ ಮಾಂಸಾಹಾರಗಳಾಗಿದ್ದು ಇವುಗಳೊಂದಿಗೆ ವೈವಿಧ್ಯಮಯ ಅಕ್ಕಿಯಿಂದ ತಯಾರಿಸಿದ ಬಿಯರ್ (ರೈಸ್ ಬಿಯರ್) ಸಿಗುತ್ತದೆ. ಇಲ್ಲಿನ ವಿಶೇಷ ತಿನಿಸುವಗಳೆಂದರೆ ಜಾಧೋ, ಮಾಮೋಸ್, ಕೀ ಪು, ಆಖೋಲ್ ಫ ಅಥವಾ ಬಾಇ, ಥುಕ್ಪಾ ತುಂಗ್ ರ್‍ಯಾಂಬಾಯಿ ಹಾಗೂ ಕಳಲೆ ಉಪ್ಪಿನಕಾಯಿ.

ಈಶಾನ್ಯ ಭಾರತದ ಪ್ರವಾಸೋದ್ಯಮ ಅಭಿವೃದ್ಧಿಗೆ ಭಾರತ ಸರ್ಕಾರದ ಉಪಕ್ರಮ: ಜಾಗತಿಕ ನಕ್ಷೆಯಲ್ಲಿ ಈಶಾನ್ಯ ಭಾರತದ ಪ್ರವಾಸೋದ್ಯಮ ಅಭಿವೃದ್ಧಿಗೆ ಭಾರತ ಸರ್ಕಾರವು ಸತತವಾಗಿ ಶ್ರಮಿಸುತ್ತಿದೆ.

2014–15ರಲ್ಲಿ ಪ್ರವಾಸೋದ್ಯಮ ಸಚಿವಾಲಯವು “ಸ್ವದೇಶ ದರ್ಶನ್” ಮತ್ತು “ಪ್ರಸಾದ್” ಯೋಜನೆಗಳನ್ನು ಹೆಸರಿಸಿದೆ. ಇದರಲ್ಲಿ ಸ್ವದೇಶ್ ದರ್ಶನ್ ಯೋಜನೆಯನ್ನು ಕೋಸ್ಟಲ್ ಸರ್ಕಿಟ್, ಬುದ್ಧಿಸ್ಟ್ ಸರ್ಕಿಟ್, ನಾರ್ತ್ ಈಸ್ಟ್ ಇಂಡಿಯಾ ಸರ್ಕಿಟ್, ಹಿಮಾಲಯನ್ ಸರ್ಕಿಟ್, ಕೃಷ್ಣಾ ಸರ್ಕಿಟ್‌ಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಇನ್ನೂ ಏಳು ಸರ್ಕಿಟ್‌ಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಡೆಸರ್ಟ್ ಸರ್ಕಿಟ್, ಸ್ಪಿರಿಚುಯಲ್ ಸರ್ಕಿಟ್, ರಾಮಾಯಾನ ಸರ್ಕಿಟ್, ಟ್ರೈಬಲ್ ಸರ್ಕಿಟ್, ಇಕೋ ಸರ್ಕಿಟ್, ವೈಲ್ಡ್‌ಲೈಫ್ ಸರ್ಕಿಟ್ ಹಾಗೂ ರೂರಲ್ ಸರ್ಕಿಟ್.

ಪ್ರಸಾದ್ ಯೋಜನೆಯಡಿ 12 ನಗರಗಳನ್ನು ಗುರುತಿಸಲಾಗಿದೆ. ಅಸ್ಸಾಂನ ಕಾಮಾಖ್ಯ ಇದರಲ್ಲಿ ಸೇರಿದೆ. ಪ್ರವಾಸೋದ್ಯಮ ಇಲಾಖೆಯ ಅನುದಾನದಲ್ಲಿ ಶೇಕಡಾ 10ರಷ್ಟನ್ನು ಈಶಾನ್ಯ ಭಾರತ ಪ್ರದೇಶಕ್ಕೆ ವಿನಿಯೋಗಿಸಲಾಗುತ್ತಿದೆ.

ಆದ್ದರಿಂದ, ಈಶಾನ್ಯ ಭಾರತದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇರುವ ಸಾಮರ್ಥ್ಯವು ಭಾರತದ ಸ್ವಯಂಸ್ಥಿರ ಆರ್ಥಿಕ ಘಟಕವಾಗಿ ಮಾತ್ರವಲ್ಲದೇ ದೇಶದ ಯಶೋಗಾಥೆಗೇ ಕೊಡುಗೆ ನೀಡುವ ಸಾಮರ್ಥ್ಯವನ್ನೂ ಈ ಪ್ರದೇಶ ಹೊಂದಿದೆ. ಪ್ರಧಾನಮಂತ್ರಿಯವರು ಈ ಪ್ರದೇಶಕ್ಕೆ ನೀಡಿರುವ ಒತ್ತಿನಲ್ಲೂ ಈ ವಿಷಯ ವೇದ್ಯವಾಗುತ್ತದೆ. ಆದರೆ ಈ ಪ್ರದೇಶದಲ್ಲಿ ಮೂಲಸೌಕರ್ಯಗಳ ಕೊರತೆಯ ಕಾರಣದಿಂದಾಗಿ ಈಶಾನ್ಯ ಭಾರತದ ಸಂಪೂರ್ಣ ಸಾಮರ್ಥ್ಯವನ್ನು ತೊಡಗಿಸಲು ಸಾಧ್ಯವಾಗದಾಗಿದೆ.

ಸರಿಯಾದ ಮಾರ್ಕೆಟಿಂಗ್ ಮತ್ತು ಬ್ರಾಂಡಿಂಗ್‌ನಲ್ಲೂ ವೈಫಲ್ಯವಿದೆ. ಹಾಗೆಯೇ ಇಲ್ಲಿ ಪ್ರಯಾಣ ಅನುಮತಿ ಪ್ರಕ್ರಿಯೆಗಳಲ್ಲಿನ ತೊಂದರೆಗಳು, ಮಾನವ ಸಂಪನ್ಮೂಲದ ಕೊರತೆ ಹಾಗೂ ಈ ಪ್ರದೇಶಕ್ಕೆ ವಿಶಾಲನೆಲೆಯ ಪ್ರವಾಸೋದ್ಯಮ ನೀತಿಯೊಂದು ಇಲ್ಲದಿರುವುದು ಇಲ್ಲಿನ ಪ್ರವಾಸೋದ್ಯಮದ ಬೆಳವಣಿಗೆಗೆ ಇರುವ ತೊಡಕಾಗಿದೆ. ❑

**ಪ್ರವಾಸೋದ್ಯಮ ಸಚಿವಾಲಯಕ್ಕೆ ಮೀಸಲಿರಿಸಿದ ಧನಸಹಾಯದಲ್ಲಿ ಈಶಾನ್ಯ ಭಾರತದ ಪ್ರದೇಶಕ್ಕೆ ಮೀಸಲಿರಿಸಿ ವೆಚ್ಚವಾದ ಧನಸಹಾಯ ಹೀಗಿದೆ :**

| ವರ್ಷ | 2012–13 | 2013–14 | 2014–15 |
|---|---|---|---|
| ಯೋಜನಾ ಅನುದಾನ | 1050 | 950 | 980 |
| ಈಶಾನ್ಯ ಭಾರತಕ್ಕೆ ಮೀಸಲಿರಿಸಿದ 10% ಹಣ | 105 | 95 | 98 |
| ಬಿಡುಗಡೆಯಾದ ಹಣ | 145.93 | 113.72 | 149.16* |
| ಶೇಕಡಾವಾರು | 13.89 | 11.97 | 15.22* |

ಆಧಾರ : ಪಿಐಬಿ, ಭಾರತ ಸರ್ಕಾರ, ಪ್ರವಾಸೋದ್ಯಮ ಸಚಿವಾಲಯ

# ಈಶಾನ್ಯ: ಜೀವ ವೈವಿಧ್ಯ ಸಂಪನ್ನ

* ಡಾ. ಅರೂಪ್ ಕುಮಾರ್ ಮಿಶ್ರಾ



ಭಾರತ, ಭೌಗೋಳಿಕ ಹಾಗೂ ಹವಾಮಾನದಲ್ಲಿನ ವಿಭಿನ್ನತೆಯಿಂದಾಗಿ ವಿಶ್ವದಲ್ಲೇ ಅತ್ಯುತ್ತಮ ಜೀವವೈವಿಧ್ಯ ತಾಣವಾಗಿದ್ದು, ಅದು ಅಧ್ಯಯನಕ್ಕೆ ಅರ್ಹವಾಗಿದೆ. ಹಿಮಚ್ಛಾದಿತ ಬೆಟ್ಟಗುಡ್ಡಗಳಿಂದ ಹಿಡಿದು ಸಮುದ್ರ ಮಟ್ಟದವರೆಗೆ, ದ್ವೀಪಗಳಿಂದ ದಟ್ಟ ಕಾಡುಗಳವರೆಗೆ, ಸುಡುವ ಮರುಭೂಮಿಯಿಂದ ಹಿಡಿದು ಮೆಕ್ಕಲು ಮಣ್ಣಿನವರೆಗೆ ಎಲ್ಲ ಬಗೆಯ ವೈವಿಧ್ಯತೆಗಳು ಈ ಉಪಖಂಡದಲ್ಲಿ ಅಡಗಿವೆ.

ನಾನಾ ರಾಷ್ಟ್ರಗಳ ಜೀವ ವೈವಿಧ್ಯತೆಯ ಉತ್ಕೃಷ್ಟತೆಯನ್ನು ಆಧರಿಸಿ ತಜ್ಞರು ವಿಶ್ವವನ್ನು ಹಲವು ಭಾಗಗಳನ್ನಾಗಿ ಗುರುತಿಸುತ್ತಾರೆ ಅಥವಾ ಜೀವವೈವಿಧ್ಯ, ಭೌಗೋಳಿಕ ಮತ್ತು ಭೌತಿಕ ಪ್ರದೇಶಗಳನ್ನಾಗಿ ವಿಂಗಡಿಸಲಾಗುತ್ತದೆ. ಈ ಪಟ್ಟಿಯ ಪ್ರಕಾರ 12 ಬೃಹತ್ ಜೀವವೈವಿಧ್ಯ ರಾಷ್ಟ್ರಗಳಿವೆ, ಅವುಗಳಲ್ಲಿ ಗರಿಷ್ಠ ತಳಿಗಳ ವನಸ್ಪತಿ ಹಾಗೂ ಪ್ರಾಣಿಗಳು ಇರುತ್ತವೆ. ಈ ಗುಂಪಿನಲ್ಲಿ ಭಾರತ ಒಂದು ಪ್ರಮುಖ ಸದಸ್ಯ ರಾಷ್ಟ್ರವಾಗಿದ್ದು, ಅದರ ಜತೆಗೆ ಬ್ರೆಜಿಲ್, ಕೊಲಂಬಿಯಾ, ಚೀನಾ, ಮೆಕ್ಸಿಕೊ, ದಕ್ಷಿಣ ಆಫ್ರಿಕಾ, ರಷ್ಯಾ ಒಕ್ಕೂಟ, ಇಂಡೋನೇಷಿಯಾ, ವೆನಿಜುವೆಲಾ, ಅಮೆರಿಕ, ಇಕ್ವೆಡಾರ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳಿವೆ.

ಭಾರತ ಭೌಗೋಳಿಕ ಹಾಗೂ ಹವಾಮಾನದಲ್ಲಿನ ವಿಭಿನ್ನತೆಯಿಂದಾಗಿ ವಿಶ್ವದಲ್ಲೇ ಅತ್ಯುತ್ತಮ ಜೀವವೈವಿಧ್ಯ ತಾಣವಾಗಿದ್ದು, ಅದು ಅಧ್ಯಯನಕ್ಕೆ ಅರ್ಹವಾಗಿದೆ. ಹಿಮಚ್ಛಾದಿತ ಬೆಟ್ಟಗುಡ್ಡಗಳಿಂದ ಹಿಡಿದು ಸಮುದ್ರ ಮಟ್ಟದ ವರೆಗೆ, ದ್ವೀಪಗಳಿಂದ ದಟ್ಟ ಕಾಡುಗಳವರೆಗೆ, ಸುಡುವ ಮರುಭೂಮಿಯಿಂದ ಹಿಡಿದು ಮೆಕ್ಕಲು ಮಣ್ಣಿನವರೆಗೆ ಎಲ್ಲ ಬಗೆಯ ವೈವಿಧ್ಯತೆಗಳು ಈ ಉಪಖಂಡದಲ್ಲಿ ಅಡಗಿವೆ.

ಈ ರೀತಿ ನಾನಾ ಚಿತ್ರಗಳನ್ನು ಕಟ್ಟಿಕೊಡುವ ವಾತಾವರಣ ಭಾರತದಲ್ಲಿದ್ದು, ಅದರಲ್ಲಿ ಈಶಾನ್ಯ ಭಾಗ ಜೀವವೈವಿಧ್ಯ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಸ್ಥಾನಮಾನ ಹೊಂದಿದೆ. ಈ ಪ್ರದೇಶ ಅಸ್ಸಾಂ, ಅರುಣಾಚಲಪ್ರದೇಶ, ಮೇಘಾಲಯ, ಮಣಿಪುರ್, ಮಿಜೊರಾಂ, ನಾಗಾಲ್ಯಾಂಡ್, ತ್ರಿಪುರಾ ಮತ್ತು ಸಿಕ್ಕಿಂ ರಾಜ್ಯಗಳನ್ನು ಒಳಗೊಂಡಿದೆ. ಇದು ಮೂರು ಪ್ರಮುಖ ಜೀವವೈವಿಧ್ಯ ಹಾಗೂ ಭೌಗೋಳಿಕ ಹಿನ್ನೆಲೆಯನ್ನು ಒಳಗೊಂಡಿದೆ. ಭಾರತ – ಮಲೆಯನ್, ಭಾರತ – ಚೀನಾ ಮತ್ತು ನೈಜ ಭಾರತವನ್ನು ಹೊಂದಿದೆ. ಈ ಪ್ರದೇಶದಲ್ಲಿನ ವನಸ್ಪತಿ ಮತ್ತು ಅಪರೂಪದ ಪ್ರಾಣಿವರ್ಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದು, ಎಲ್ಲ ಅಗತ್ಯ ಹವಾಮಾನ ಮತ್ತ ಉಷ್ಣಾಂಶ ಏರಿಳಿತ ಒಳಗೊಂಡಿದೆ. ಶೇಕಡ 70ರಷ್ಟು ಈಶಾನ್ಯ ಭಾಗ ಬೆಟ್ಟಗುಡ್ಡ ಹಾಗೂ ಪರ್ವತಗಳನ್ನೊಳಗೊಂಡಿದೆ. ಉಳಿದ ಶೇಕಡ 30ರಷ್ಟು ಬ್ರಹ್ಮಪುತ್ರಾ ಮತ್ತು ಬಾರಕ್ ಕಣಿವೆಯಡಿ ಬರಲಿದ್ದು, ಈ ಭಾಗದಲ್ಲಿ ಅತ್ಯದ್ಭುತ ಜೀವವೈವಿಧ್ಯವಿದೆ.

### ಬ್ರಹ್ಮಪುತ್ರಾ ಕಣಿವೆಯಲ್ಲಿ ಜೀವವೈವಿಧ್ಯತೆ

ಏಶಿಯಾದ ಭೌಗೋಳಿಕ ಹಿನ್ನೆಲೆಯಲ್ಲಿರುವ ಬ್ರಹ್ಮಪುತ್ರ ಕಣಿವೆ ದಟ್ಟ ಕಾಡು, ನದಿ ತೀರದ ಹುಲ್ಲುಗಾವಲು, ಬಿದಿರಿನ ಮಳೆಗಳು ಹಾಗೂ ಹಲವು ಬಗೆಯ ತೇವ ಭೂಮಿ ಒಳಗೊಂಡಿದೆ. ಬ್ರಹ್ಮಪುತ್ರಾ ನದಿ ವಿಶ್ವದ ಪ್ರಮುಖ ನದಿಗಳ ಪೈಕಿ ಅತ್ಯಂತ ಯುವ ನದಿ ಎಂಬ ಖ್ಯಾತಿಗಳಿಸಿದೆ. ಒಟ್ಟಾರೆ ಹಿಮಾಲಯದ ತಪ್ಪಲಿನಲ್ಲಿ ಹುಟ್ಟುವ ಈ ನದಿ ಟಿಬೆಟ್ ಮತ್ತು ಭಾರತದಲ್ಲಿ 2880 ಕಿಲೋಮೀಟರ್ ಹರಿದು, ಅಂತಿಮವಾಗಿ ಬಾಂಗ್ಲಾದೇಶದ ಸಮುದ್ರ ಸೇರಿಕೊಳ್ಳುತ್ತದೆ. ಈ ನದಿ ಕೆಲವೆಡೆ ಅತ್ಯಂತ ಅಗಲವಾಗಿ ಹರಿಯುತ್ತದೆ. ಅಸ್ಸಾಂ ಮೇಲ್ಭಾಗದ ದಿಬ್ರುಗಡ್ ಸಮೀಪ 16 ಕಿಲೋಮೀಟರ್ ಅಗಲ ಹರಿಯುವ ಈ ನದಿ, ಅಸ್ಸಾಂ ಸಮೀಪದ ಗುವಾಹತಿಯಲ್ಲಿ ಕೇವಲ 1.2 ಕಿಲೋಮೀಟರ್ ಅಗಲವಿರುತ್ತದೆ. ಬ್ರಹ್ಮಪುತ್ರಾ

* ನಿರ್ದೇಶಕರು, ಅಸ್ಸಾಂ ವಿಜ್ಞಾನ ತಂತ್ರಜ್ಞಾನ ಮತ್ತು ಪರಿಸರ ಮಂಡಳಿ, ಗುವಾಹತಿ. E-mail - arupkmisra@gmail.com

ನದಿ ಪ್ರಮುಖವಾಗಿ ಹಿಮದಿಂದ ಹರಿಯುವ ನದಿಯಾಗಿದ್ದು, ಇದರಲ್ಲಿ ಅತಿ ಹೆಚ್ಚು ಮಡ್ಡಿ ಮಣ್ಣನ್ನು ವಾರ್ಷಿಕ ಪ್ರತಿ ಕಿಲೋಮೀಟರ್‌ಗೆ 852.4 ಟನ್ ಹೊಂದಿದ್ದು, ಅದು ಅಮೆಜಾನ್ ನದಿಗಿಂತಲೂ ಹೆಚ್ಚು.

ಬ್ರಹ್ಮಪುತ್ರ ಕಣಿವೆಯಲ್ಲಿ ಮೆಕ್ಕಲು ಮಣ್ಣು ಹೆಚ್ಚಾಗಿದ್ದು, ಆ ಪ್ರದೇಶ ಸುಮಾರು 56,33,900 ಚದರ ಕಿಲೋಮೀಟರ್ ಇದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅರಣ್ಯನಾಶ ಮತ್ತು ನದಿ ಪಾತ್ರದ ಮೇಲ್ಭಾಗದಲ್ಲಿ ಮಣ್ಣಿನ ಸವಕಳಿಯಿಂದಾಗಿ ಬಹುತೇಕ ಪ್ರದೇಶ ಕಳೆದುಕೊಳ್ಳುತ್ತಿದ್ದೇವೆ. ಆದರೂ ಸಹ ನಾಲ್ಕು ವಿಭಿನ್ನ ಭೌಗೋಳಿಕ ವಿಭಾಗಗಳನ್ನು ಇದು ಒಳಗೊಂಡಿದೆ. ಉದಾಹರಣೆಗೆ ಉತ್ತರ ಬೆಟ್ಟದಂಚು, ಉತ್ತರ ಮತ್ತು ದಕ್ಷಿಣ ಗುಡ್ಡಗಾಡುಗಳು, ಪ್ರವಾಹಕ್ಕೆ ಒಳಗಾಗುವ ಪ್ರದೇಶ ಮತ್ತು ಸಮುದ್ರತೀರ ಹಾಗೂ ದಕ್ಷಿಣದ ಬೆಟ್ಟದಂಚಿನಲ್ಲಿ ಅಪರೂಪದ ಜೀವವೈವಿಧ್ಯದ ತಾಣಗಳಿವೆ. ಅಸ್ಸಾಂನ ವನಸ್ಪತಿ ಹಾಗೂ ಪ್ರಾಣಿ ವೈವಿಧ್ಯತೆಯನ್ನು ನಾವು 5 ರಾಷ್ಟ್ರೀಯ ಪಾರ್ಕ್‌ಗಳಲ್ಲಿ ಕಾಜಿರಂಗ, ಮಾನಸ್, ದಿಬ್ರುಸೈಕೋವಾ, ವರಾಂಗ್ ಮತ್ತು ನಮೇರಿಗಳಲ್ಲಿ ಕಾಣಬಹುದು. ಕಾಜಿರಂಗ ಹಾಗೂ ಮಾನಸ್ ಯುನೆಸ್ಕೊ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನಪಡೆದಿವೆ. ಇದಲ್ಲದೆ ಪೊಬಿತೋರಾ, ಗರಂಪಾನಿ, ಗಿಬ್ಬಾನ್, ಬುರಸೋಪರ್ರಿ, ಚಕ್ರಸಿಲಾ, ಸೋನೈ–ರೂಪೈ, ಬೊರ್ನೋಡಿ ಲಾಕೋವಾ, ಜಾಯ್‌ದಿನ್, ಪಾನಿದಿಂಗ್ ಮತ್ತಿತರ ವನ್ಯಜೀವಿ ತಾಣಗಳಿವೆ.

ಹಲವು ವಲಸೆ ಹಕ್ಕಿಗಳು ಹಾಗೂ ನಾನಾ ತಳಿಯ ಪಕ್ಷಿ ಸಂಕುಲವನ್ನು ಕಾಣಬಹುದು. ಕಾಜಿರಂಗದಲ್ಲಿ ಅಪರೂಪದ ಒಂದು ಕೊಂಬಿನ ಘೇಂಡಾಮೃಗ, ಬಂಗಾಳದ ಹುಲಿ, ವಿಭಿನ್ನ ಜಿಂಕೆಗಳು, ಕಾಡುಕೋಣ, ಕಿಂಗ್‌ಫಿಶರ್ ಹಕ್ಕಿ ಮತ್ತಿತರ ಪ್ರಾಣಿಗಳನ್ನು ಕಾಣಬಹುದು. ಮಾನಸ್ ಜೀವ ವೈವಿಧ್ಯತಾಣ ಭಾರತದ ವಿಭಿನ್ನ



| ರಾಜ್ಯಗಳು | ಸಸ್ತನಿ | ಅವೀಸ್ | ಸರಿಸೃಪ | ಉಭಯಚರ | ಮೀನುಗಳು |
|---|---|---|---|---|---|
| ಅರುಣಾಚಲಪ್ರದೇಶ | 241 | 738 | 78 | 39 | 143 |
| ಅಸ್ಸಾಂ | 841 | 192 | 128 | 67 | 232 |
| ಮಣಿಪುರ | 69 | 586 | 19 | 14 | 141 |
| ಮೇಘಾಲಯ | 139 | 540 | 94 | 33 | 152 |
| ಮಿಜೋರಾಂ | 84 | 500 | 71 | 13 | 89 |
| ನಾಗಾಲ್ಯಾಂಡ್ | 92 | 492 | 62 | 10 | 108 |
| ಸಿಕ್ಕಿಂ | 92 | 612 | 31 | 21 | 64 |
| ತ್ರಿಪುರಾ | 54 | 341 | 32 | 20 | 129 |

(ಮೂಲ – ಅಸ್ಸಾಂ ವಿಜ್ಞಾನ ತಂತ್ರಜ್ಞಾನ ಮತ್ತು ಪರಿಸರ ಮಂಡಳಿ ಹಾಗೂ ಇಎನ್‌ವಿಐಎಸ್ ಪ್ರಕಟಿಸಿದ ದಿ ವರ್ಟಿಬ್ರೆಟ್ಸ್ ಆಫ್ ಅಸ್ಸಾಂ – 2015 ಪುಸ್ತಕದಿಂದ)

ಜೀವವೈವಿಧ್ಯ ತಾಣವಾಗಿದ್ದು, ಅಲ್ಲಿ ಅಳಿವಿನಂಚಿನಲ್ಲಿರುವ ಹಲವು ಪ್ರಾಣಿಗಳಿವೆ. ಮಾನಸ್ ನದಿ ಭಾರತ ಮತ್ತು ಭೂತಾನ್ ರಾಷ್ಟ್ರಗಳನ್ನು ವಿಭಜಿಸಲಿದೆ. ಅಲ್ಲಿ ಡಾಲ್ಫಿನ್‌ಗಳನ್ನು ಕಾಣಬಹುದು.

ನಮೇರಿ ಜೀವ ವೈವಿಧ್ಯತಾಣ ವಿಶ್ವದಲ್ಲೇ ಅಪರೂಪದ ವಿಶಿಷ್ಟ ತಾಣವಾಗಿದ್ದು, ಅಲ್ಲಿ ಬಿಳಿ ರೆಕ್ಕೆಗಳ ಬಾತುಕೋಳಿಗಳನ್ನು ಕಾಣಬಹುದಾಗಿದೆ. ಅದೇ ರೀತಿ ಎಲ್ಲ ಪ್ರಮುಖ ಮೀಸಲು ಪ್ರದೇಶ ಹಾಗೂ ಕಣಿವೆಗಳಲ್ಲಿ ನೈಸರ್ಗಿಕ ಅದ್ಭುತಗಳು ಒಳಗೊಂಡಿವೆ. ಗುವಾಹತಿ ಪಟ್ಟಣದ ರಾಮ್‌ಸರ್ ಪ್ರದೇಶದಲ್ಲಿರುವ ದೀಪೋರ್‌ಬೀಲ್ ವಲಸೆ ಹಕ್ಕಿಗಳಿಗೆ ಸ್ವರ್ಗವಾಗಿದ್ದು, ಅಲ್ಲಿ ಹಲವು ಜಾತಿಯ ಪಕ್ಷಿ ಸಂಕುಲವನ್ನು ಕಾಣಬಹುದು.

ಅಸ್ಸಾಂ ಅತ್ಯದ್ಭುತ ಅರಣ್ಯ ಸಂಪತ್ತು ಹೊಂದಿದ್ದು, ಅದರಲ್ಲಿ ಮರಹುಟ್ಟು ಹಾಗೂ ಬಿದಿರು ಸಂಪನ್ಮೂಲ ಹೇರಳವಾಗಿದೆ. ಆದರೆ ಯೋಜನೆಯಿಲ್ಲದೆ ಹೇರಳ ಮರಬಳಕೆ ಹಾಗೂ ಬಂಡುಕೋರರ ಸಮಸ್ಯೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಅರಣ್ಯನಾಶ ಹೆಚ್ಚಾಗಿದೆ, ಈ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ 90ರ ದಶಕದಲ್ಲಿ ಮರಗಳನ್ನು ಕಡಿಯಲು ಸಂಪೂರ್ಣ ನಿಷೇಧ ಹೇರಿತು. ಈಶಾನ್ಯ ಭಾಗದಲ್ಲಿ ಕಳೆದೆರಡು ವರ್ಷದಲ್ಲಿ ತಲೆ ಎತ್ತಿರುವ ನೂರಾರು ಮರಹುಟ್ಟು ಕೈಗಾರಿಕೆಗಳಿಂದ ರಾಜ್ಯದ ಆರ್ಥಿಕ ಸ್ಥಿತಿಗೆ ಧಕ್ಕೆಯಾಗಿದೆ. ಆದರೂ ಸಹ ಈ ಕಣಿವೆ ಸಾಲು ಮರಗಳು, ಆರ್ಕಿಡ್ ನಾನಾ ಬಗೆಯ ಬಿದಿರಿನ ಮೆಳೆಗಳು ಹಾಗೂ ಹಣ್ಣು ಬಿಡುವ ಮತ್ತು ಹಣ್ಣು ಬಿಡದಿರುವ ಮರಗಳಿಂದಾಗಿ ಹೆಸರುವಾಸಿಯಾಗಿದೆ. ಸದಾ ಹಸಿರಿನಿಂದ ಕೂಡಿರುವ ಬಿದಿರು, ಮಾವು, ನಾಹರ್, ಬಕುಲ್ ಮತ್ತು ಚಾಮ್ ಗಿಡಗಳು ಎಲ್ಲೆಡೆ ಇದ್ದು, ಸ್ವಲ್ಪ ಹಸಿರಿನಿಂದ ಕಂಗೊಳಿಸುವ ಟರ್ಮಿಲಿಯಾ ತಳಿಗಳು ಇರುವುದರಿಂದ ಅರಣ್ಯದಲ್ಲಿ ಇವು ಸದಾ ಅಚ್ಚ ಹಸಿರಿನಿಂದ ಕಂಗೊಳಿಸುತ್ತವೆ. ಇದಲ್ಲದೆ ಬ್ರಹ್ಮಪುತ್ರ ನದಿ ತೀರದಲ್ಲಿ ಉದ್ದನೆಯ ಮರಗಳನ್ನು ಕಾಣಬಹುದು.

### ಬಾರಾಕ್ ಕಣಿವೆಯಲ್ಲಿ ಜೀವವೈವಿಧ್ಯತೆ

ಬಾರಕ್ ಕಣಿವೆ ಮೂರು ಆಡಳಿತ ಜಿಲ್ಲೆಗಳು – ಚಾಚರ್, ಕರೀಂಗಂಜ್ ಮತ್ತು ಹೈಲಾಕಂದಿ ಜಿಲ್ಲೆಗಳನ್ನು ಒಳಗೊಂಡಿದೆ. ಇದು ಅಸ್ಸಾಂನ ದಕ್ಷಿಣ ಭಾಗದಲ್ಲಿದ್ದು, ಭಾರತ ಮತ್ತು ಬರ್ಮಾ ನಡುವಿನ ಅತ್ಯುತ್ತಮ ಜೀವವೈವಿಧ್ಯ ತಾಣವಾಗಿದೆ. ಬ್ರಹ್ಮಪುತ್ರ ಕಣಿವೆಯಂತೆ ಬಾರಕ್ ಕಣಿವೆಯಲ್ಲೂ ಮೆಕ್ಕಲು ಮಣ್ಣು ಹೆಚ್ಚಾಗಿದ್ದು, ಇದು ಹಲವು ಬಗೆಯ ಸಸ್ಯ ಪ್ರಭೇದಕ್ಕೆ ನೆರವು ನೀಡುತ್ತದೆ. ಜತೆಗೆ ಪ್ರಾಣಿಗಳಿಗೂ ಸಹಕಾರಿಯಾಗಲಿದೆ. ಬ್ರಹ್ಮಪುತ್ರ ಕಣಿವೆಯಂತೆ ಇಲ್ಲೂ ಹೆಚ್ಚಿನ ಚಹಾ ತೋಟಗಳಿದ್ದು, ನಾನಾ ಬಗೆಯ ಸಸ್ಯ





ಸಂಪತ್ತು ಇದೆ. ಒಟ್ಟಾರೆ ಕಣಿವೆ ಪ್ರದೇಶ 6962 ಚದರ ಕಿಲೋಮೀಟರ್ ಇದ್ದು, ಅಲ್ಲಲ್ಲಿ ಕಡಿದಾದ ಬೆಟ್ಟಗುಡ್ಡಗಳು(ಗರಿಷ್ಠ 100 ಮೀಟರ್ ಎತ್ತರ) ಇರುವುದರಿಂದ ಇದು ಒಂದು ರೀತಿ ಕಮಲದ ಆಕಾರದಲ್ಲಿ ಇದ್ದು, ಇದನ್ನು 'ತಿಲಾಸ್' ಎಂದು ಕರೆಯಲಾಗುತ್ತದೆ.

ಮತ್ತೊಂದೆಡೆ ಕಣಿವೆಯ ಮಧ್ಯಭಾಗದಲ್ಲಿ ನೀರಿನಿಂದ ಆವೃತ್ತ ಜಾಗಗಳಿದ್ದು, ಹಲವು ಝರಿಗಳು, ಜಲಪಾತಗಳು ಇವೆ. ಪ್ರಮುಖ ಬಾರಕ್ ನದಿಗೆ ಜಿರಿ, ಮಧುರಾ, ಜಟಿಂಗಾ, ಲಾರಂಗ್, ಸೋನೈ, ರುಕ್ನಿ, ಗಗ್ರಾ, ದಾಲೇಶ್ವರಿ ಮತ್ತು ಕತಕಾಲ್ ಮತ್ತಿತರ ಉಪನದಿಗಳು ಇವೆ. ದಕ್ಷಿಣ ಅಸ್ಸಾಂನಲ್ಲಿ ಜೀವವೈವಿಧ್ಯತೆ ಅಡಗಿದ್ದು, ಬಾರಕ್ ನದಿಯ ಎರಡು ದಂಡೆಗಳಲ್ಲೂ ಕೊಡಲಿ ಆಕಾರದ ಕೆರೆಗಳನ್ನು ಕಾಣಬಹುದಾಗಿದೆ.

ಬಾರಕ್ ಕಣಿವೆಯಲ್ಲಿ ಭೂಬಳಕೆ ಮತ್ತು ಭೂಪ್ರದೇಶ ದಟ್ಟಹರಿದ್ವರ್ಣ ಕಾಡು, ಅರೆ ಹಸಿರು ಕಾಡು, ಅರಣ್ಯ ಮಿಶ್ರಿತ ಕಾಡು, ಕೃಷಿಭೂಮಿ, ಚಹಾತೋಟ, ವಿನಾಶದ ಅಂಚಿನಲ್ಲಿರುವ ಅರಣ್ಯ ಮತ್ತಿತರ ಪ್ರದೇಶಗಳು ಒಳಗೊಂಡಿವೆ. ಈ ಕಣಿವೆಯಲ್ಲಿ 12 ಮೀಸಲು ಅರಣ್ಯಗಳಿದ್ದು, ಒಂದು ವನ್ಯಜೀವಿ ತಾಣವಿದ್ದು, ಅದನ್ನು ಬರೈಲ್ ವನ್ಯಜೀವಿ ತಾಣವೆಂದು ಕರೆಯಲಾಗುತ್ತದೆ. ಮತ್ತೊಂದು ವನ್ಯಜೀವಿ ತಾಣ ದಾಲೇಶ್ವರಿ ಇದ್ದು, ಅದು ಇನ್ನೂ ಅನುಮೋದನೆಯ ನಿರೀಕ್ಷೆಯಲ್ಲಿದೆ. ಈ ಅರಣ್ಯ ಹಾಗೂ ಬೆಟ್ಟಗುಡ್ಡಗಳಲ್ಲಿ ಹುಲಿ, ಆನೆ, ಕೋತಿ ಮತ್ತಿತರ ಅಪರೂಪದ ಜಾತಿಯ ಪ್ರಾಣಿ ಸಂಕುಲವಿದೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಬಾರಕ್ ಕಣಿವೆಯಲ್ಲಿ ವನಸ್ಪತಿ ಹಾಗೂ ಪ್ರಾಣಿಸಂಕುಲಕ್ಕೆ ಧಕ್ಕೆಯಾಗಿದೆ. ಅತ್ಯಂತ ಜನಪ್ರಿಯ ಏಶಿಯಾದ ಆನೆಗಳು ಕಣ್ಮರೆಯಾಗಿವೆ. ಅಲ್ಲದೆ ಹೊಲಾಕ್, ಗಿಬ್ಬನ್, ಪೈರೇಸ್ ಲೀಫ್ ಮಂಕಿ ಮತ್ತಿತರ ಪ್ರಾಣಿಗಳೂ ಸಹ ಅಲ್ಲಲ್ಲಿ ಕಾಣಬಹುದು. ಬ್ರಹ್ಮಪುತ್ರ ಕಣಿವೆಯಂತೆ ಬಾರಕ್ ಕಣಿವೆಯೂ ಸಹ ಪರಿಸರ ಸಮಸ್ಯೆಗಳು ಹಾಗೂ ಜೀವವೈವಿಧ್ಯ ನಾಶದಿಂದ ಹೊರತಾಗಿಲ್ಲ.

**ಮಂಜುಲಿ ದ್ವೀಪದಲ್ಲಿ ಜೀವವೈವಿಧ್ಯತೆ**

ಮಂಜುಲಿ ಹಿಂದೆ ವಿಶ್ವದ ಅತಿದೊಡ್ಡ ನದಿ ದ್ವೀಪವಾಗಿತ್ತು. 1250 ಚದರ ಕಿಲೋಮೀಟರ್ ಪ್ರದೇಶವಿರುವ ಅಲ್ಲಿ 1.5 ಲಕ್ಷ ಜನವಸತಿ ಇತ್ತು. ಆದರೆ ಉತ್ತರ ಭಾಗದ ನದಿ ತೀರದಲ್ಲಿ ಮಣ್ಣಿನ ಸವಕಳಿ ಹೆಚ್ಚಾಗಿದೆ ಮತ್ತು ಉತ್ತರ ನದಿ ದಂಡೆಯಲ್ಲೂ ಸಾಕಷ್ಟು ವಿಸ್ತರಣೆಯಾಗಿ ಭಯಾನಕ ವಾತಾವರಣ ಸೃಷ್ಟಿಸಿದೆ. ಅಸ್ಸಾಂನಲ್ಲಿ ಉತ್ಕೃಷ್ಟ ಸಾಂಸ್ಕೃತಿಕ ಪರಂಪರೆ ಹೊಂದಿರುವ ಈ ಜಾಗ 16ನೇ



ಶತಮಾನದಲ್ಲಿ ಈ ಜಾಗ 'ವೈಷ್ಣವ ಧರ್ಮ'ದ ನೆಲೆಯಾಗಿತ್ತು. ಇಂದು ಕೇವಲ 425 ಚದರ ಕಿಲೋಮೀಟರ್ ಜಾಗ ಉಳಿದಿದ್ದು, ದ್ವೀಪ ಸಮುದ್ರ ಮಟ್ಟದಿಂದ 60ರಿಂದ 85 ಮೀಟರ್ ಎತ್ತರದಲ್ಲಿದೆ.

ಮೂರು ಪ್ರಮುಖ ನದಿಗಳು, ದಕ್ಷಿಣದಲ್ಲಿ ಖೇರ್‌ಕುತಿಯಾ ಸುತಿ ಮತ್ತು ಸುಬನ್‌ಸಿರಿ ನದಿಗಳು ಹಾಗೂ ದಕ್ಷಿಣದಲ್ಲಿ ಬ್ರಹ್ಮಪುತ್ರಾ ನದಿಗಳಿಂದ ಈ ಮಂಜುಲಿ ದ್ವೀಪ ಸೃಷ್ಟಿಯಾಗಿದೆ. ಇದಕ್ಕೆ ಜಲಾವೃತ್ತ ಪ್ರದೇಶಗಳೂ ಸಹ ಹೊಂದಿಕೊಂಡಿವೆ. ಮಂಜುಲಿ ಪಕ್ಷಿಪ್ರಿಯರಿಗೆ ಸ್ವರ್ಗ, ಪೆಲಿಕಾನ್ ಹಕ್ಕಿ ಸೇರಿದಂತೆ ನಾನಾ ಬಗೆಯ ಅಪರೂಪದ ಪಕ್ಷಿ ಪ್ರಬೇಧ ಇಲ್ಲಿದೆ. ಈ ದ್ವೀಪದಲ್ಲಿ ಬಡೀಸ್ ಬಡೀಸ್, ಚಾಕ ಚಾಕ, ಓಮ್‌ಪೋಕ್ ಪಬೋ, ಚನ್ನಾ ಬಾರ್‌ಕಾ, ತೋರ್, ಚಿತಾಲ ಚಿತಾಲ ಮತ್ತಿತರ ಜಾತಿಯ ಮೀನುಗಳಿವೆ. ಇದಲ್ಲದೆ, ಅಲ್ಲಿನ 15 ಬಗೆಯ ಮೀನುಗಳು ಹಲವು ಕಾಯಿಲೆಗಳನ್ನು ವಾಸಿ ಮಾಡುವಂತಹ ವೈದ್ಯಕೀಯ ಗುಣಗಳನ್ನು ಹೊಂದಿದ್ದು ಅವುಗಳಲ್ಲಿ ಮಿಸಿಂಗ್, ನೇಪಾಳಿಗಳು, ದೋರಿ, ಕಚಾರಿ ಮತ್ತು ಕೋಚ್ ಸಮುದಾಯಗಳವರು ಬಳಕೆ ಮಾಡುತ್ತಾರೆ.

ಬ್ರಹ್ಮಪುತ್ರ ಕಣಿವೆಯಂತೆ ಭತ್ತದ ಗದ್ದೆಗಳು ಮತ್ತು ಭೌಗೋಳಿಕ ಪರಿಸರ, ಮಂಜುಲಿ ದ್ವೀಪದಲ್ಲಿದ್ದು, ಅದು ವಿಭಿನ್ನ ಚಿತ್ರಣ ನೀಡಲಿದೆ. 100ಕ್ಕೂ ಹೆಚ್ಚು ಬಗೆಯ ಭತ್ತದ ತಳಿಗಳನ್ನು ಇಲ್ಲಿ ಬೆಳೆಯಲಾಗುತ್ತದೆ.

ಬಹುತೇಕ ರಾಸಾಯನಿಕ ರಸಗೊಬ್ಬರ ಮತ್ತು ಕ್ರಿಮಿನಾಶಕ ಬಳಸದೆ ಭತ್ತ ಬೆಳೆಯಲಾಗುತ್ತದೆ. ಹಾಗಾಗಿಯೇ ಮಂಜುಲಿ, ಅಸ್ಸಾಂನಲ್ಲೇ ಸ್ವತಂತ್ರ ಹಾಗೂ ಭಿನ್ನತೆಯಿಂದ ಹೆಸರಾಗಿದೆ, ಇಲ್ಲಿನ ಜೀವ ವೈವಿಧ್ಯ ತಾಣಗಳಾದ ಅಲೆಂಗಿ ಚಪೋರಿ, ಕಮಲಬರಿ ಮಿಸಿಂಗ್, ಕಮಲಬರಿ ಸಾತ್ರಾ, ಸುನಿಯಾ ಚಪೋರಿ ತುನಿಮುಖ್ ಗ್ರಾಮಗಳು ಹೆಚ್ಚಿನ ವಿದೇಶಿ ಹಾಗೂ ದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಪ್ರಾಣಿಪಕ್ಷಿ ತಜ್ಞರ ಪ್ರಕಾರ 250ಕ್ಕೂ ಹೆಚ್ಚು ಪಕ್ಷಿ ಪ್ರಭೇದ ಮಂಜುಲಿಯಲ್ಲಿದೆ. ಸ್ಪಾಟ್ ಬಿಲ್ಡ್ ಪೆಲಿಕಾನ್, ಲೆಸರ್ ಅಡ್ಜುಟಂಟ್, ಬೆಂಗಾಲ್ ಪ್ಲೋರಿಕಾನ್, ವೈಟ್ ಬ್ಯಾಕ್ಡ್ ಅಂಡ್ ಸ್ಲೆಂಡರ್ ಬಿಲ್ಡ್ ವೊಲ್ಚರ್ (ಗಿಡುಗಗಳು), ಮೀನುಗಳು, ರಣ ಹದ್ದುಗಳನ್ನು ಕಾಣಬಹುದಾಗಿದೆ. ❑

# ಬುಡಕಟ್ಟು ಜನರ ಬವಣೆಗೆ ಸ್ಪಂದನೆ

* ಡಾ. ಎಂ.ಎ. ಬಾಲಸುಬ್ರಹ್ಮಣ್ಯ



**ಬುಡಕಟ್ಟು ಯುವಕ ಯುವತಿಯರಿಗೆ ಕೌಶಲ್ಯ ತರಬೇತಿ ನೀಡಿ, ನಾಯಕತ್ವ ಗುಣಗಳನ್ನು ಬೆಳೆಸುವ ಮೂಲಕ ಬುಡಕಟ್ಟು ಜನರ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲಾಗಿದೆ. ಇದು ಸಮಾಜದ ಇತರೆ ಸ್ತರಗಳಲ್ಲಿ ಕೆಲಸ ನಿರ್ವಹಿಸಲು ಪೂರಕವಾಗಿದೆ. ಜೊತೆಗೆ ತಮ್ಮ ಹಾಡಿಗಳ ಸರ್ವಾಂಗೀಣ ಸಕಾರಾತ್ಮಕ ಬದಲಾವಣೆಗೆ ಬುಡಕಟ್ಟು ಜನ ಯುವಕ ಯುವತಿಯರು ಕಾರ್ಯಪ್ರವೃತ್ತರಾಗಿರುವುದು ಬದಲಾವಣೆಯ ದ್ಯೋತಕವಾಗಿದೆ.**

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ಜಿ.ಎಂ ಹಳ್ಳಿ ಹಾಡಿಯ ಜೇನುಕುರುಬ ಮಹಿಳೆ ಸುನೀತಾ ತನ್ನ ತಾಯಿಯನ್ನು ಕೂಗುತ್ತ "ಅವ್ವಾ ಮಗುವಿಗೆ ತುಂಬಾ ಜ್ವರ ಬಂದದೆ. ಹಾಲ್ ಕೂಡಾ ಕುಡೀತಿಲ್ಲ. ಅಳ್ತಾನು ಇಲ್ಲಾ. ಬಂದ್ ನೋಡವ್ವಾ' ಎಂದು ಕರೆದಳು, ಮಗಳ ಕೂಗಿಗೆ ಓಡಿ ಬಂದ ತಾಯಿ ಮಗುವನ್ನು ನೋಡಿ "ಅಲ್ಲಾ ಸುನೀತಾ ಕೂಸು ಸಪ್ಪಗಾಗದ, ಬದಕದ ಇಲ್ಲವಾ. ನಿನ್ನ ಗಂಡನ ಕರಿತಿನಿ ಇರು' ಎಂದು ಮಗನನ್ನು ಕೂಗಿದಳು. ಮಗ ಕುಮಾರ ತಾಯಿಯ ಬಳಿ ಓಡಿ ಬಂದ. 'ಮಗು ಸಪ್ಪಗಾಯ್ತೆ, ಏನ್ ಸೊಂಕ್ ಬಂದದೋ ಏನೋ. ಆಸ್ಪತೆಗೆ ಕರ್‌ಕಂಡು ಹೊಗಬೇಕಲ್ಲ. ಈಗ ತಾನೆ ಜನಧ್ವನಿ ರೇಡಿಯೋ ಕೇಳ್ದೆ, ಇವತ್ತು ಸರಗೂರ್ ವಿವೇಕಾನಂದ ಆಸ್ಪತೆಲಿ ಕುಮಾರ್ ಡಾಕುಟರು ಸಿಕ್ತಾರಂತೆ. ಬೇಗಾ ಕರ್‌ಕೊಂಡ್ ನಡಿ. ಕೂಸ್ ಜೊತ್‌ಗಾ ಸುನೀತನ್ನು ಬರ್ಲಿ ಪದ್ಮಜಾ ಮೇಡಂಗೆ ತೋರ್‍ಸಕ ಬಂದ್‌ಬುಡವಾ. ನಾನು 108 ಆಂಬುಲೆನ್ಸ್‌ಗೆ ಪೋನ್ ಮಾಡ್ತಿನಿ. ಆಂಬುಲೆನ್ಸ್‌ನಲ್ಲಿ ಹೋಗವಾ...' ಇದು ಈಗ ಕೇಳಿ ಬರುತ್ತಿರುವ ಮೂಲವಾಸಿ ಕುಟುಂಬದ ಆರೋಗ್ಯದ ಕಳಕಳಿ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ದೈವದತ್ತವಾಗಿ ಬಂದದ್ದು ನೈಸರ್ಗಿಕ ಸಂಪತ್ತು. ಬಂಡೀಪುರ ಹಾಗೂ ರಾಜೀವಗಾಂಧಿ ರಾಷ್ಟ್ರೀಯ ಅರಣ್ಯ ಉದ್ಯಾನವನಗಳ ತವರು. ಏಷ್ಯಾಖಂಡದ ಅತೀ ದೊಡ್ಡ ಆನೆಗಳ ಆಗರ. ವರ್ಷವಿಡೀ ಹರಿವ ಕಬಿನಿ ನದಿ ಸಾವಿರಾರು ಆನೆಗಳಿಗೆ, ನೂರಾರು ಹುಲಿ, ಚಿರತೆಗಳಿಗೆ, ಲಕ್ಷಾಂತರ ಜಿಂಕೆಗಳಿಗೆ ಮಮತೆಯ ಮಡಿಲು. ವೈವಿಧ್ಯಮಯವಾದಂತಹ ಗಿಡಮರ ಪಕ್ಷಿಗಳು, ಈ ಕಾಡು ಮೇಡುಗಳಲ್ಲಿ ತಮ್ಮದೇ ಆದ ಸಂತಸದಲ್ಲಿ ಬದುಕಿದ್ದವರು ಮೂಲವಾಸಿಗಳು, – ಜೇನುಕುರುಬರು, ಬೆಟ್ಟಕುರುಬರು, ಯರವರು, ಪಣಿಯರು ಹಾಗೂ ಬುಂಡೆ ಸೋಲಿಗರು ತಮ್ಮ ಜನಾಂಗದ ಯಜಮಾನನ ಒಡೆತನದಲ್ಲಿ ಅವರವರ 'ಜಮ್ಮಾ' ದಲ್ಲಿ ಕಾಡಿನ ಅವಿಭಾಜ್ಯ ಅಂಗವಾಗಿ ಜೀವನ ಸಾಗಿಸಿದವರು. ಇಂದು ತಾಲೂಕಿನಲ್ಲಿ ಈ ಬುಡಕಟ್ಟು ಜನರ ಒಟ್ಟು ಜನಸಂಖ್ಯೆ ಸುಮಾರು 18 ಸಾವಿರ.

ಜೇನುಕುರುಬರು ಸಂಕೋಚ ಸ್ವಭಾವದವರು. ಕೃಷ್ಣ ವರ್ಣದ, ಗಿಡ್ಡನೆಯ ವ್ಯಕ್ತಿತ್ವ ಮತ್ತು ಗುಂಗುರು ಕೂದಲಿನ ಚಹರೆ ಹೊಂದಿರುವ ಇವರು ಜೇನು ಕಲೆಹಾಕುತ್ತ, ಆಹಾರ ಸಂಗ್ರಹಿಸುತ್ತ, ಪರಸ್ಪರ ಸಮನ್ವತೆಯಲ್ಲಿ, ಆಧ್ಯಾತ್ಮಿಕತೆಯ ನಿಲುವಿನಲ್ಲಿ ಬದುಕಿದವರು. ಅವರು ಇಲ್ಲಿನ ಮೂಲವಾಸಿ ಜನಾಂಗದ ಶೇ 56 ರಷ್ಟು ಇದ್ದಾರೆ.

ಬೆಟ್ಟ ಕುರುಬರೋ, ಬಿದಿರಿನಲ್ಲಿ, ಹುಲ್ಲಿನಲ್ಲಿ ಕುಕ್ಕೆ, ಕದಂಬೆ (ಮೀನು ಹಿಡಿಯಲು ಉಪಯೋಗಿಸುವ ವಸ್ತು) ಬೆಂಚೆಮರ (ಇವರಿಗೆ ಈ ಮರ ದೇವರ ಪ್ರತೀಕ) ಚಾಪೆ ಇತ್ಯಾದಿಗಳನ್ನು ಮಾಡುವ ಕಸುಬಿನೊಂದಿಗೆ ಜೇನು ಕುರುಬರೊಂದಿಗೆ ಸಹಕಾರಾತ್ಮಕವಾಗಿ ಬದುಕುವವರು. ಇವರ ಉಡುಪು ವಿಶೇಷ, ಭಾಷೆ ಕೂಡ ವಿಶೇಷ; ಈ ಭಾಷೆ ಕೊಡವ, ಕನ್ನಡ, ಮಲೆಯಾಳಿ ಮಿಶ್ರಿತ. ಇವರಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಮಾನತೆ. ಕುಮುರಿ ಬೇಸಾಯ ಪದ್ಧತಿ ಅನುಸರಿಸುವ ಈ ಜನಾಂಗದ ಜನಸಂಖ್ಯೆ ಸುಮಾರು ಶೇ 25 ರಷ್ಟು, ಜೇನುಕುರುಬರು ಮತ್ತು ಬೆಟ್ಟ ಕುರುಬರು ಕಾಡು ಆನೆಗಳನ್ನು ಹಿಡಿದು ಪಳಗಿಸುವುದರಲ್ಲಿ ನಿಸ್ಸೀಮರು.

* ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಸರಗೂರು.



ಯರವರು ತಮ್ಮದೆ ಆದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದು ಇವರು ಕೃಷಿಯ ಮೇಲೆ ಹೆಚ್ಚು ಅವಲಂಬಿತರು. ಇವರು ಮಾಟ ಮಂತ್ರಗಳನ್ನು ನಂಬುವ ಹಾಗೂ ಮಾಟ ಮಂತ್ರಗಳನ್ನು ಮಾಡುವುದರಲ್ಲಿ ಎತ್ತಿದ ಕೈ. ಜೊತೆಗೆ ಸಾಂಪ್ರದಾಯಿಕ ಔಷಧಿಗಳಲ್ಲಿ ನಂಬಿಕೆ ಇವರಿಗೆ. ಅನಾರೋಗ್ಯದ ಸಮಸ್ಯೆಗಳು ಬಂದಾಗ ಸಾಂಪ್ರಾದಾಯಿಕ ಔಷಧಿಗಳನ್ನು ಬಳಸುತ್ತಾರೆ. ಇಲ್ಲಿ ಈ ಜನಾಂಗದ ಜನಸಂಖ್ಯೆ ಪ್ರಮಾಣ ಸುಮಾರು ಶೇ 15 ರಷ್ಟು.

ಪಣಿಯರು ಕೂಲಿ ಕಾರ್ಮಿಕರಾಗಿದ್ದು ತಮ್ಮ ಜನಾಂಗದ ಕಲೆ ಸಂಪ್ರದಾಯಗಳನ್ನು ನಿರಂತರವಾಗಿ ಉಳಿಸಿ ಕೊಂಡು ಬಂದಿದ್ದಾರೆ. ಪಣಿಯರು ಮತ್ತು ಬುಂಡೆ ಸೋಲಿಗರ ಜನಾಂಗದ ಜನಸಂಖ್ಯೆ ಸುಮಾರು ಶೇ 4 ರಷ್ಟು. ಪ್ರಕೃತಿ ಮಡಿಲಿನಲ್ಲಿ, ಕಾಡಿನ ಒಳಗೆ ವೈವಿಧ್ಯಮಯವಾದ ಸಂಸ್ಕೃತಿ, ಆಚಾರ ವಿಚಾರ ಮತ್ತು ಸಂಪ್ರದಾಯಗಳನ್ನು ಹೊಂದಿರುವ ಈ ಬುಡಕಟ್ಟು ಸಮುದಾಯ 1960–70 ರ ದಶಕದಲ್ಲಿ ಕಬಿನಿ ಜಲಾಶಯದ ನಿರ್ಮಾಣ ಹಾಗೂ ರಾಷ್ಟ್ರೀಯ ಅರಣ್ಯ ಪ್ರದೇಶಗಳ ಘೋಷಣೆ ಕಾರಣದಿಂದ ತಮ್ಮ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿ ಹತ್ತು ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ವಸತಿ, ಆಹಾರ, ಆರೋಗ್ಯ ಮತ್ತು ಶಿಕ್ಷಣದಿಂದ ವಂಚಿತವಾದುದ್ದಲ್ಲದೆ, ಛಿದ್ರ ಛಿದ್ರವಾಗಿ ಹರಿದು ಹಂಚಿ ಹೋದರು. ಮೂಲ ಆಹಾರ ಪದ್ದತಿಗೆ ಹೊಂದಿಕೊಂಡಿದ್ದ ಇವರು ಕಾಡಿನಲ್ಲಿ ತಮಗೆ ಸಿಗುತ್ತಿದ್ದ ಅವಶ್ಯಕ ಆಹಾರಗಳು ಲಭ್ಯವಾಗದ ಕಾರಣ ತೀವ್ರತರದ ಹಸಿವಿನ ಸಮಸ್ಯೆಯನ್ನು ಕಂಡರು. ಇದರಿಂದ ಅಪೌಷ್ಟಿಕತೆ ಹೆಚ್ಚಾಯಿತು. ಮೂಲ ನೆಲೆಯಿಂದ ಬೇರೆ ಯಾದ ಕಾರಣ ಇವರು ಮಾನಸಿಕ ನೆಮ್ಮದಿ ಕಳೆದು ಕೊಳ್ಳುವಂತಾಯಿತು. ತಾವು ನಂಬಿದ್ದ ಕಾಡಿನ ದೇವತೆಗಳು, ಆ ಸ್ಥಳಗಳ ವ್ಯಾಮೋಹ ಇವರನ್ನು ಇನ್ನಿಲ್ಲದಂತೆ ಕಾಡಲಾರಂಭಿಸಿತು. ತಮ್ಮದೇ ಜಮ್ಮಾದಲ್ಲಿ ಒಟ್ಟಾಗಿ ಇದ್ದ ರಕ್ತ ಸಂಬಂಧಿಕರು ಹರಿದು ಹಂಚಿ ಹೋದರು. ತಾವು ನಂಬಿದ್ದ ಕಾಡು, ಅಲ್ಲಿನ ಪ್ರಾಣಿಗಳ ಒಡನಾಟ, ಪ್ರಕೃತಿದತ್ತ ನಂಬಿಕೆಗಳು ಭಕ್ತಿಪರತೆ ದೂರವಾದಂತಾಯಿತು. ಏಕಾಏಕಿ ಬದಲಾವಣೆಯಿಂದ ಭಾವನಾತ್ಮಕ ಜೀವಿಗಳಾದ ಬುಡಕಟ್ಟು ಜನರು ಆಧುನಿಕ ಜೀವನಕ್ಕೆ ಹೊಂದಿಕೊಳ್ಳಲಾಗದೇ ಪರಿತಪಿಸುತ್ತ ಯಾರನ್ನೂ ನಂಬಲಾರದ ಸ್ಥಿತಿಗೆ ಬರುವಂತಾಯಿತು. ಜೊತೆಗೆ ಆಧುನಿಕತೆ ಅವರಿಗೆ ಜೀವನದಲ್ಲಿ ಜಿಗುಪ್ಸೆ ತಂದು ಸಾಕಷ್ಟು ಸಮಸ್ಯೆಗಳನ್ನು ತಂದೊಡಿತ್ತು. ಕಾಡಿನ ಭಾವನಾತ್ಮಕ ಕೊಂಡಿ ಕಳಚಿಕೊಂಡದ್ದು ಇವರ ಉತ್ಸಾಹವನ್ನು ಚಿವುಟಿತು. ಇದರಿಂದ ದಿಗ್ಭ್ರಾಂತರಾದ ಜನರು ಮದ್ಯಪಾನ, ಧೂಮಪಾನ ಸೇವನೆಯಂತಹ ಚಟಗಳಿಗೆ ಬಲಿಯಾದರು. ಇದು ಬುಡಕಟ್ಟು ಜನರ ಆರೋಗ್ಯ ಮತ್ತು ಸಾಮಾಜಿಕ ಬದುಕಿನ ಮೇಲೆ ಗಾಢವಾದ ಪರಿಣಾಮ ಬೀರಿತು.

ಇದಲ್ಲದೆ ಆಸ್ಪತ್ರೆ, ಶಾಲೆ ಮತ್ತು ಆಧುನಿಕತೆಯಿಂದ ದೂರವಿದ್ದ ಪರಿಣಾಮ ಹಾಗೂ ಮೂಲಭೂತ ಅವಶ್ಯಕತೆಗಳ ಕೊರತೆ, ಸ್ವಚ್ಛತೆಯ ಬಗೆಗಿನ ಅರಿವಿನ ಕೊರತೆ, ಮನೆ ಹೆರಿಗೆಗೆ ಆದ್ಯತೆ, ಚುಚ್ಚು ಮದ್ದು ಕೊಡಿಸುವ ಅರಿವು ಇಲ್ಲದಿರುವುದು ಈ ಎಲ್ಲಾ ಕಾರಣದಿಂದ ವಂಶವಾಹಿನಿ ಖಾಯಿಲೆಯಾದ Sickle Cell Anemia (ಒಂದು ರೀತಿಯ ರಕ್ತಹೀನತೆ) ಜೊತೆಗೆ ಕಬ್ಬಿಣಾಂಶದ ಕೊರತೆಯ ಕಾರಣವಾಗಿ ರಕ್ತಹೀನತೆ, ಚರ್ಮರೋಗ, ಶ್ವಾಸಕೋಶದ ತೊಂದರೆಗಳು ಹೆಚ್ಚಾದವು. ಹೆಚ್.ಐ.ವಿ ಸೋಂಕು, ಕ್ಷಯರೋಗ, ವಾಂತಿ, ಅತಿಸಾರ ಭೇದಿ ತೀವ್ರವಾದವು. ವಾಸಿಸಲು ಮನೆ, ಕುಡಿಯಲು ನೀರು, ರಸ್ತೆ, ಶೌಚಾಲಯದಂತಹ ಅವಶ್ಯಕ ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಬುಡಕಟ್ಟು ಜನರು ಕೆಲಸ ಅರಸಿ ವಾಸಸ್ಥಳದಿಂದ ಕೊಡಗು ಕೇರಳಗಳಿಗೆ ವಲಸೆ ಸಾಮಾನ್ಯವಾಯಿತು. ಇದರಿಂದ ಬುಡಕಟ್ಟು ಜನರು ತುಂಬಾ ಕಠಿಣವಾದ





ಸಮಸ್ಯೆಗಳನ್ನು ಎದುರಿಸುವಂತಾಗಿ ಬುಡಕಟ್ಟು ಜನರ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮಗಳು ಬೀರಿದವು.

ಸ್ವಾಮಿ ವಿವೇಕಾನಂದರ ನುಡಿಗಳ ಸ್ಫೂರ್ತಿಯ ಸೆಲೆಯಿಂದ 1984 ರಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಯುವ ವೈದ್ಯರ ತಂಡವು ಪ್ರಾರಂಭಿಸಿದ "ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್" ಸ್ವಯಂ ಸೇವಾ ಸಂಸ್ಥೆಯು ಕಬಿನಿ ಜಲಾಶಯದಿಂದ ನಿರಾಶ್ರಿತರಾದ ಬುಡಕಟ್ಟು ಜನರ ಏಳ್ಗೆಗಾಗಿ 1987 ರಲ್ಲಿ ಹೆಚ್.ಡಿ. ಕೋಟೆ ತಾಲೂಕಿಗೆ ಪಾದಾರ್ಪಣೆ ಮಾಡಿತು. ಮೊದಲಿಗೆ ಸಂಸ್ಥೆ ಬುಡಕಟ್ಟು ಜನರ ಪಾರಂಪಾರಿಕ ಜೀವನವನ್ನು ಅರಿಯಲು ಪ್ರಾರಂಭಿಸಿತು. ಮುಖ್ಯವಾಹಿನಿಯಿಂದ ದೂರವಿದ್ದ, ಬುಡಕಟ್ಟು ಜನರ ಭಾವನಾತ್ಮಕ ಕೊಂಡಿಯನ್ನು ಶ್ರದ್ದೆ, ನಂಬಿಕೆ, ಸೇವೆ ಮತ್ತು ವಿಶ್ವಾಸದಿಂದ ಸಂಸ್ಥೆಯ ಆಧಾರ ಸ್ತಂಭಗಳಾದ ಸತ್ಯ ಸೇವೆ ತ್ಯಾಗ ಮತ್ತು ಅಹಿಂಸಾ ತತ್ವಗಳ ಮೂಲಕ ಬೆಸೆಯಲು ಪ್ರಾರಂಭಿಸಿತು. ವ್ಯಕ್ತಿ ಕೇಂದ್ರಿತ ಆರೋಗ್ಯ ಸೇವೆಯ ಬದಲು ಕುಟುಂಬ ಕೇಂದ್ರಿತ ಆರೋಗ್ಯ ಸೇವೆಗೆ ಒತ್ತು ನೀಡಿತು. ಈ ಸೇವೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು ವ್ಯಾಖ್ಯಾನಿಸುವಂತೆ "ಆರೋಗ್ಯ ಎಂದರೆ ದೈಹಿಕ, ಮಾನಸಿಕ, ಸಾಮಾಜಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಉತ್ಕೃಷ್ಟ ಸ್ಥಿತಿಯೇ ಹೊರತು ಕೇವಲ ಕಾಯಿಲೆ ಇಲ್ಲದಿರುವುದಷ್ಟೇ ಅಲ್ಲ." ಎಂಬ ತತ್ವವನ್ನು ಆಧಾರವಾಗಿಟ್ಟು ಕೊಂಡು ಬುಡಕಟ್ಟು ಜನರ ಸರ್ವತೋಮುಖ ಆರೋಗ್ಯಕ್ಕಾಗಿ ಶ್ರಮಿಸುತ್ತಿದೆ. ಬುಡಕಟ್ಟು ಜನರಿಗೆ ನೈತಿಕ ಮತ್ತು ಕಾನೂನಾತ್ಮಕ ಬೆಂಬಲವನ್ನು ನೀಡಿ ಬುಡಕಟ್ಟು ಜನರಿಗೆ ಆತ್ಮಸ್ಥೈರ್ಯವನ್ನು ತುಂಬಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ಕರ್ನಾಟಕ ಸರ್ಕಾರದ ನೆರವಿನಿಂದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ಗೆ 154 ಕುಟುಂಬಗಳಿಗೆ ಪೂರ್ಣ ಪ್ರಮಾಣದ ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಿ ಹೊಸ ಬಸವನಗಿರಿಹಾಡಿ ಪುನರ್ವಸತಿ ಕೇಂದ್ರವನ್ನು

ನಿರ್ಮಾಣ ಮಾಡುವ ಮೂಲಕ ಬುಡಕಟ್ಟು ಜನರನ್ನು ಸ್ಥಳಾಂತರಿಸಿ ಅವರ ಬದುಕಿಗೆ ಭದ್ರತೆಯ ಅಡಿಪಾಯವನ್ನು ಒದಗಿಸಲು ಸಾಧ್ಯವಾಗಿದೆ. ವಿವೇಕಾನಂದ ಸ್ಮಾರಕ ಆಸ್ಪತ್ರೆ, ಸರಗೂರು ಬುಡಕಟ್ಟು ಜನರ ಬಾಂಧವ್ಯ ಮತ್ತು ಭಾವನಾತ್ಮಕ ಸಂಬಂಧಗಳನ್ನು ಹೆಚ್ಚಿಸಲು ನಿರಂತರ ಮನೆಭೇಟಿ, ಆರೋಗ್ಯದ ಬಗ್ಗೆ ಅರಿವು, ಆರೋಗ್ಯ ತಪಾಸಣಾ ಶಿಬಿರ, ಕುಡಿತದಿಂದ ಮುಕ್ತಗೊಳಿಸುವ ಮದ್ಯ ವ್ಯಸನಿ ಶಿಬಿರಗಳ ಆಯೋಜನೆ, ಆಪ್ತ ಸಮಾಲೋಚನೆ, ಸಂಚಾರಿ ಆರೋಗ್ಯ ಘಟಕ, ಗರ್ಭಿಣಿಯರ ಭೇಟಿ, ಮನೆ ಬಾಗಿಲಿಗೆ ಚುಚ್ಚು ಮದ್ದು, ಮನೆ ಬಾಗಿಲಿಗೆ ಕ್ಷಯರೋಗ ಚಿಕಿತ್ಸೆ, ಬುಡಕಟ್ಟು ಜನರ ಅಂಗನವಾಡಿ ಕೇಂದ್ರಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುವ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹವಾದ ಬದಲಾವಣೆಗಳನ್ನು ತಂದಿದೆ. ವೈಜ್ಞಾನಿಕ ತಳಹದಿಯಲ್ಲಿ ಆಯುರ್ವೇದ ಮತ್ತು ಆಧುನಿಕ ಔಷಧಿ ಪದ್ಧತಿಗಳನ್ನು ಅಳವಡಿಸಿಕೊಂಡು ಚಿಕಿತ್ಸೆ ನೀಡುತ್ತಿರುವ ಕಾರಣ ಬುಡಕಟ್ಟು ಜನರೂ ಹೆಚ್ಚಿನ ಪ್ರಮಾಣದಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ಮುಂದೆ ಬರಲು ಸಾಧ್ಯವಾಗಿದೆ. ತಾಯಂದಿರ ಸಭೆ, ಯುವಕರ ಸಭೆ, ಪೋಷಕರ ಸಭೆ, ಗ್ರಾಮಕೂಟ, ಗಿರಿಜನ ಸ್ವಸಹಾಯ ಸಂಘಗಳ ರಚನೆ, ಒಕ್ಕೂಟಗಳ ರಚನೆ, ಸ್ವ –ಉದ್ಯೋಗಗಳ ತರಬೇತಿ, ಆರ್ಥಿಕ ಸಬಲೀಕರಣ ಜಾಗೃತ ಜಾಥಾ, ಬೀದಿ ನಾಟಕ ಕಾರ್ಯಕ್ರಮಗಳ ಮೂಲಕ ಬುಡಕಟ್ಟು ಜನರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಮುಖ್ಯವಾಹಿನಿಗೆ ತರಲು ಶ್ರಮಿಸಲಾಗುತ್ತಿದೆ.

### ತರಂಗ ಸ್ಪಂದನೆ

ವಿವೇಕಾನಂದ ಸ್ಮಾರಕ ಆಸ್ಪತ್ರೆ, ಸರಗೂರು ಆವರಣದಲ್ಲಿರುವ ಜನಧ್ವನಿ ಸಮುದಾಯ ಬಾನುಲಿ ಕೇಂದ್ರ (ಎಫ್. ಎಂ 90.8 ತರಂಗಾಂತರ) 2012 ರಲ್ಲಿ ಪ್ರಾರಂಭವಾಯಿತು. ಜನರ; ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕೂಗಿಗೂ ಸ್ಪಂದಿಸುವ



ಧ್ವನಿಯಾಗಿ, ಜನರಿಗೆ ಆಸರೆಯಾಗಿ ತಾಲ್ಲೂಕಿನಾದ್ಯಂತ ಪಸರಿಸಿದೆ. ಪ್ರತಿ ಹಾಡಿಗೂ ಜನಧ್ವನಿ ರೇಡಿಯೊ ಕಾರ್ಯಕ್ರಮದ ಪ್ರಸಾರಕ್ಕೆ ವ್ಯವಸ್ಥೆ, ಅವಶ್ಯಕ ಹಾಡಿಗಳಿಗೆ ರೇಡಿಯೊಗಳ ಅಳವಡಿಕೆ, ರೇಡಿಯೊ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹೆಚ್ಚಿನ ಅವಕಾಶ. ರೇಡಿಯೊ ಕೇಂದ್ರದಿಂದ ಪ್ರಸಾರವಾಗುವ ಪ್ರಚಲಿತ ಆರೋಗ್ಯ ಕಾರ್ಯಕ್ರಮಗಳೆಂದರೆ 'ಮನೆ ಮದ್ದು' ಕಾರ್ಯಕ್ರಮ ಸ್ಥಳೀಯವಾಗಿ ದೊರೆಯುವ ಗಿಡಮೂಲಿಕೆಗಳನ್ನು ಉಪಯೋಗಿಸಲು ಸಹಾಯಕವಾಗಿದೆ. 'ಮನೋಚಿಂತನೆ' ಕಾರ್ಯಕ್ರಮದ ಮೂಲಕ ಮಾನಸಿಕ ಆರೋಗ್ಯವನ್ನು ಉತ್ತಮ ಪಡಿಸಲಾಗುತ್ತಿದೆ. 'ರೇಡಿಯೊ ಡಾಕ್ಟರ್' ಕಾರ್ಯಕ್ರಮದ ಮೂಲಕ ಜನರಿಗೆ ಆರೋಗ್ಯದ ಬಗ್ಗೆ ಅರಿವು ಮತ್ತು ಮಾಹಿತಿ ನೀಡಲಾಗುತ್ತಿದೆ. 'ಸುರಕ್ಷತೆಯ ಶ್ರೀರಕ್ಷೆ' ಕಾರ್ಯಕ್ರಮ ಹೆಚ್‌ಐವಿ ತಡೆಗಟ್ಟಲು ಹಾಗೂ ಅವರಲ್ಲಿ ಸಕಾರಾತ್ಮಕ ಚಿಂತನೆ ಉಂಟುಮಾಡಲು ಪೂರಕವಾಗಿದೆ. ಕ್ಷಯಾ ರೋಗ ನಿರ್ಮೂಲನೆಗಾಗಿ "ಮಾಹಿತಿ ಹರಡಿಸಿ ಕ್ಷಯ ತೊಲಗಿಸಿ" ಕಾರ್ಯಕ್ರಮ ಹೆಚ್ಚು ಜನಪ್ರಿಯ ಮತ್ತು ಕ್ಷಯ ರೋಗದ ಬಗ್ಗೆ ಜನರು ಜಾಗೃತರಾಗಲು ಉತ್ತಮ ಕಾರ್ಯಕ್ರಮವಾಗಿದೆ. 'ನೇರ ಫೋನ್ ಇನ್ ಕಾರ್ಯಕ್ರಮದ' ಮೂಲಕ ತಾಲ್ಲೂಕು ಮತ್ತು ಜಿಲ್ಲೆಯ ಅಧಿಕಾರಿಗಳ ಜೊತೆ ಮುಕ್ತವಾಗಿ ಮಾತನಾಡಲು, ಸಮಸ್ಯೆಗಳ ಬಗ್ಗೆ ಪ್ರಶ್ನಿಸಲು ಹಾಗೂ ಪರಿಹಾರ ಕಂಡು ಕೊಳ್ಳಲು ವೇದಿಕೆ ಕಲ್ಪಿಸಲಾಗಿದೆ. ಈ ಮೂಲಕ ಶಿಕ್ಷಣ, ಆರೋಗ್ಯ, ಅಭಿವೃದ್ಧಿ ಕುರಿತ ಜಾಗೃತಿ ಮೂಡಿಸುವ ಅವಶ್ಯಕ ಮಾಹಿತಿಗಳ ಪ್ರಸಾರ ಬುಡಕಟ್ಟು ಜನರು ಹೆಚ್ಚು ಸಕ್ರಿಯವಾಗಲು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿ ಬೆಳೆಯಲು, ಸಂಘಟಿತರಾಗಲು ಸಹಾಯವಾಗಿದೆ. ಸರ್ಕಾರದಿಂದ ಬುಡಕಟ್ಟು ಜನರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಹೆರಿಗೆ ಭತ್ಯೆ, ಮಡಿಲು ಕಿಟ್ಟು, ಜನನಿ ಸುರಕ್ಷೆ, ಬಿ.ಪಿ.ಎಲ್ ಕಾಡ್, ಆಧಾರ್ ಕಾರ್ಡ್, ಆಶ್ರಯ ಮನೆ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಶಾಲೆ, ಅಂಗನವಾಡಿ, ಆಸ್ಪತ್ರೆ ವ್ಯವಸ್ಥೆಗಳ ಸೇವಾ ಸೌಲಭ್ಯಗಳನ್ನು ಪಡೆಯಲು ಸಜ್ಜುಗೊಳಿಸಲಾಗಿದೆ.

### ಸಶಕ್ತೀಕರಣ

ಪ್ರತಿ ಹಾಡಿಯಲ್ಲಿಯೂ ಮಹಿಳಾ ಸ್ವ ಸಹಾಯ ಸಂಘಗಳ ರಚನೆ ಮಾಡುವ



ಮೂಲಕ ಉಳ್ಳವರೊಂದಿಗೆ ಹಣಕಾಸಿನ ವ್ಯವಹಾರವನ್ನು ಮಾಡುತ್ತಿದ್ದ ಬುಡಕಟ್ಟು ಜನರು ಇಂದು ಬ್ಯಾಂಕುಗಳ ಮೂಲಕ ಹಣಕಾಸಿನ ನಿರ್ವಹಣೆ ಮಾಡುವಂತಾಗಿದೆ. ಪ್ರಸ್ತುತ 113 ಸ್ವ ಸಹಾಯ ಸಂಘಗಳು ತಾಲ್ಲೂಕಿನಲ್ಲಿ ತಲೆ ಎತ್ತಿ ನಿಂತಿವೆ. ಉಳಿತಾಯದ ಜೊತೆಗೆ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ಮತ್ತು ಜಾಗೃತಿ ವಹಿಸುತ್ತಿವೆ. ಸ್ವಾವಲಂಬಿ ಜೀವನಕ್ಕಾಗಿ ಕೃಷಿ ಚಟುವಟಿಕೆ ಮತ್ತು ಗುಡಿ ಕೈಗಾರಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಪಡೆದು ನಿಗದಿತ ಅವಧಿಯಲ್ಲಿ ಮರು ಪಾವತಿಸುವ ಮೂಲಕ ಬ್ಯಾಂಕುಗಳಿಂದಲೂ ಮಾದರಿ ಸ್ವ ಸಹಾಯ ಸಂಘಗಳು ಎಂಬ ಹೆಸರು ಪಡೆಯಲು ಸಾಧ್ಯವಾಗಿವೆ. ನಿರಂತರ ಸಭೆ, ಒಕ್ಕೂಟ ಸಭೆ, ಜೀವನ ಕೌಶಲ್ಯ ತರಬೇತಿ, ವೃತ್ತಿಪರತೆ, ಬೇಕರಿ ಉತ್ಪನ್ನಗಳ ತಯಾರಿಕಾ ತರಬೇತಿ, ಹೊಲಿಗೆ ತರಬೇತಿ, ಸ್ವ ಉದ್ಯೋಗ ತರಬೇತಿಯನ್ನು ನಿರಂತರವಾಗಿ ನೀಡುತ್ತ ಆರ್ಥಿಕವಾಗಿ ಮುಂದೆ ಕರೆದ್ಯೊಯಲಾಗುತ್ತಿದೆ. ಇವರ ಈ ಆರ್ಥಿಕ ಅಭಿವೃದ್ಧಿಯು ಬುಡಕಟ್ಟು ಜನರೂ ಅಗತ್ಯ ಆರೋಗ್ಯ ಸೌಲಭ್ಯಗಳನ್ನು ಪಡೆಯಲೂ, ಆರೋಗ್ಯದ ಸಮಸ್ಯೆಗಳು ಉಂಟಾದಾಗ ಆರ್ಥಿಕ ನಿರ್ವಹಣೆ ಮಾಡಲು ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

ಬುಡಕಟ್ಟು ಜನರ ಆರೋಗ್ಯಕ್ಕಾಗಿ ಆಸ್ಪತ್ರೆಗಳ ನಿರ್ಮಾಣ ಉಚಿತ ಚಿಕಿತ್ಸೆ, ಗಿರಿಜನ ಶಾಲೆಗಳನ್ನು ನಿರ್ಮಾಣ ಮಾಡುವ ಮೂಲಕ ಅವರನ್ನು ಶಿಕ್ಷಿತರನ್ನಾಗಿ ಮಾಡುವಲ್ಲಿ ಸಂಸ್ಥೆ ಸಫಲವಾಗಿದೆ. ಬುಡಕಟ್ಟು ಯುವಕ ಯುವತಿಯರಿಗೆ ಕೌಶಲ್ಯ ತರಬೇತಿ, ಉದ್ಯೋಗಾವಕಾಶಗಳ ತರಬೇತಿ, ನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ ಬುಡಕಟ್ಟು ಜನ ಯುವಕ ಯುವತಿಯರಿಗೆ ಸಂಸ್ಥೆಯಲ್ಲಿ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲಾಗಿದೆ

**(50ನೇ ಪುಟಕ್ಕೆ)**

# ಹಿಂದುಳಿಯುವಿಕೆ ಎಂಬ ಶಾಪ

* ಮತ್ತೀಹಳ್ಳಿ ಮದನ ಮೋಹನ



**ಸಂವಿಧಾನ ತಿದ್ದುಪಡಿಯ ಮೂಲಕ ರಚಿತವಾದ ಹೊಸ ಹೈ ಕ. ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಬಂದ ನಂತರ ಪ್ರಾರಂಭದ ದಿವಸಗಳ ಅನಿಶ್ಚಿತತೆ ದೂರವಾಗಿ ಅದು ನೆಲ ಊರತೊಡಗಿದೆ. ಕಾರ್ಯಕ್ರಮಗಳೆಲ್ಲ ಮಂಡಳಿಯಲ್ಲಿಯೇ ನಿರ್ಣಯವಾಗಿ ಅನುಷ್ಠಾನದ ಹೊಣೆ ಹೊತ್ತಿರುವ ಸರ್ಕಾರಿ ವಿಭಾಗಗಳಿಗೆ ಕಳಿಸಲಾಗುತ್ತದೆ. ಅನುದಾನದಲ್ಲಿ ನಿಶ್ಚಿತತೆ ಇದೆ. ವರ್ಷಕ್ಕೆ ರೂ 1000 ಕೋಟಿ ಅನುದಾನ ನಿಗದಿ ಮಾಡಿದ್ದು, ಪ್ರತಿ ತ್ರೈಮಾಸಿಕದ ಅವಧಿಗೆ ಸರ್ಕಾರದ ಅನುದಾನ ಬಂದು ಬಿಡುತ್ತದೆ.**

ಮುನಿದ ಪ್ರಕೃತಿ ಒಂದು ಕಡೆ. ಅದನ್ನು ಅರಿಯದೆ, ಇದು ತಮ್ಮ ಹಣೆ ಬರಹವೆಂದು ಕೈ ಚೆಲ್ಲಿ ಕುಳಿತಿರುವ ಅಜ್ಞ ಜನ ಮತ್ತೊಂದು ಕಡೆ. ಪ್ರಕೃತಿಯ ಶಾಪದ ಉಪಶಮನ ಮಾಡಲು ಅರಿಯದೇ ಕಾಲ ಕಳೆಯುತ್ತ ಬಂದಿರುವ ಸರ್ಕಾರ ಮಗದೊಂದು ಕಡೆ.. ಇಂತಹ ಚಕ್ರವ್ಯೂಹದಲ್ಲಿ ಸಿಲುಕಿದ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವವರು ಯಾರು ಮತ್ತು ಹೇಗೆ? ಕರ್ನಾಟಕ ನಿರ್ಮಾಣವಾಗಿ ಆರು ದಶಕಗಳೇ ಕಳೆದರೂ ಈ ದ್ವಂದ್ವ ಇಂದಿಗೂ ಮುಂದುವರಿದಿದೆ. ಇನ್ನಿಷ್ಟು ಕಾಲ ಕಳೆದರೂ, ಸಮಸ್ಯೆಗೆ ಇಂದಿನ ಪರಿಸ್ಥಿತಿಯಲ್ಲಿ ಪರಿಹಾರ ಸಿಗಬಹುದೇ ಎನ್ನುವದನ್ನು ಧೈರ್ಯದಿಂದ ಹೇಳಲಾಗದ ವಾತಾವರಣವಿದೆ.

ಪ್ರಾದೇಶಿಕ ಅಸಮಾನತೆ ಮತ್ತು ಹಿಂದುಳಿದ ಪ್ರದೇಶಗಳು, ರಾಜ್ಯ ನಿರ್ಮಾಣದೊಂದಿಗೆ ಬಂದ ಚಾರಿತ್ರಿಕ ಬಳುವಳಿ. (ಪ್ರಾದೇಶಿಕ ಅಸಮಾನತೆ ನಿವಾರಣೆ ಸಮಿತಿಯ ಅಂದಾಜಿನ ಪ್ರಕಾರ ಕರ್ನಾಟಕದ 175 ತಾಲೂಕುಗಳ ಪೈಕಿ 114 ತಾಲೂಕುಗಳು ಹಿಂದುಳಿದಿವೆ.) ಕರ್ನಾಟಕ ರಾಜ್ಯವು ಒಂದು ಖ್ಯಾತಿಯನ್ನು (?) ಹೊಟ್ಟೆಯಲ್ಲಿ ಇಟ್ಟುಕೊಂಡೇ ಜನ್ಮವೆತ್ತಿತು. ದೇಶದಲ್ಲಿನ ಬರ ಪೀಡಿತ ರಾಜ್ಯಗಳ ಪಟ್ಟಿಯಲ್ಲಿ ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕವೇ ಮುಂಚೂಣಿಯಲ್ಲಿ. ರಾಜ್ಯದಲ್ಲಿರುವ ಕೃಷ್ಣಾ ಕಣಿವೆ ಮತ್ತು ಕಾವೇರಿ ಕಣಿವೆಗಳು ಒದಗಿಸುವ ನೀರಾವರಿ ಸೌಲಭ್ಯವನ್ನು ಸಂಪೂರ್ಣ ಉಪಯೋಗ ಮಾಡಿಕೊಂಡರೂ ಮಳೆ ಆಧರಿತ ಪ್ರದೇಶದ ಮತ್ತು ಬರ ಪೀಡಿತ ಪ್ರದೇಶಗಳ ವ್ಯಾಪ್ತಿ ಕಡಿಮೆಯಾಗುವದಿಲ್ಲವೆನ್ನುವ ಕಟು ಸತ್ಯದ ಬಗ್ಗೆ ಅಧಿಕಾರದ ಚುಕ್ಕಾಣಿ ಹಿಡಿದವರಿಗೆಲ್ಲ ಅರಿವಿತ್ತು, ಆದರೂ ಕರ್ನಾಟಕದಲ್ಲಿ ನೀರಾವರಿ ಸೌಲಭ್ಯದ ಉಪಯೋಗವೂ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಹಾಗೂ ಹಿಂದುಳಿದ ಪ್ರದೇಶದ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮಾನತೆಯ ನಿರ್ಮೂಲನಕ್ಕೆ ಸಿಗಬೇಕಾದ ಪ್ರಾಶಸ್ತ್ಯವು ಸಿಗಲೇ ಇಲ್ಲ. ಇನ್ನೂ ಸಿಗುತ್ತಿಲ್ಲವೆನ್ನುವದು ವಾಸ್ತವ.

### ಹಿನ್ನೆಲೆ

ರಾಜ್ಯ ನಿರ್ಮಾಣವಾಗಿ ಮೊದಲ 25 ವರ್ಷದ ತನಕ ಯಾರೂ ಹಿಂದುಳಿದ ಪ್ರದೇಶದ ಅಭಿವೃದ್ಧಿಯ ಬಗೆಗೆ ತಲೆ ಕೆಡಿಸಿಕೊಂಡಿರಲೇ ಇಲ್ಲ. ಅದರ ಬಗೆಗೆ ಅರಿವು ಬಂದದ್ದು ಎಂಭತ್ತರ ದಶಕದಲ್ಲಿ, ಅದೂ ಆಕಸ್ಮಿಕವಾಗಿ. ಕೇರಳದ ಸಿ. ಎಂ. ಸ್ಟೀಫನ್ ರವರು ಕಲಬುರ್ಗಿ ಉಪಚುನಾವಣೆಯ ಮೂಲಕ ಲೋಕಸಭೆಗೆ ಆರಿಸಿ ಬಂದು ಮುಂದೆ ಸಂಪರ್ಕ ಮಂತ್ರಿಗಳಾದಾಗ ಹಿಂದುಳಿದ ಪ್ರದೇಶದ ಅಭಿವೃದ್ಧಿಯತ್ತ ಗಮನ ಹರಿಸಲು, ಅಂದಿನ ಕರ್ನಾಟಕ ಮುಖ್ಯಮಂತ್ರಿಗಳಾಗಿದ್ದ ದಿ. ಗುಂಡುರಾವರ ಮನ ಒಲಿಸಿದರು. ಈ ವಿಷಯದಲ್ಲಿ ವರದಿ ತಯಾರಿಸಲು ಕಲಬುರ್ಗಿಯವರೇ ಆದ ಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ ಅವರ ಹಿರಿತನದಲ್ಲಿ ಒಂದು ಸಮಿತಿಯನ್ನೂ ರಚಿಸಲಾಯಿತು. ಅಂದು ಗಮನವಿದ್ದುದು ಸಮಗ್ರ ರಾಜ್ಯದ ಎಲ್ಲ ಹಿಂದುಳಿದ ಪ್ರದೇಶಗಳ ಮೇಲಲ್ಲ. ಅದರ ಭಾಗದಲ್ಲಿ ಒಂದಾದ ಅತಿ ಹಿಂದುಳಿದ ಪ್ರದೇಶವೆಂದು ನಿರ್ವಿವಾದವಾಗಿ ಹೇಳಲ್ಪಡುವ ಹೈದರಾಬಾದ ಕರ್ನಾಟಕದ ಮೇಲೆ. ಮಾತ್ರ. (ಉಳಿದ ಹಿಂದುಳಿದ ಪ್ರದೇಶಗಳು ಅಂದರೆ ಮುಂಬೈ

* ಹಿರಿಯ ಪತ್ರಕರ್ತರು ಮತ್ತು ಅಂಕಣಕಾರರು, ಹುಬ್ಬಳ್ಳಿ.

ಕರ್ನಾಟಕದ ಮತ್ತು ಹಳೆ ಮೈಸೂರಿನ ಹಿಂದುಳಿದ ಪ್ರದೇಶಗಳತ್ತ ಲಕ್ಷ್ಯ ಬರುವದಕ್ಕೆ ಇನ್ನು ಎರಡು ದಶಕಗಳೇ ಬೇಕಾಯಿತು.) ಆಸಕ್ತಿ ಕಾರ್ಯರೂಪಕ್ಕೆ ಬರಲು ಇನ್ನೊಂದು ದಶಕವೇ ಬೇಕಾಯಿತು. ಅಂದಿನ ಕಲಬುರ್ಗಿ ಜಿಲ್ಲಾಧಿಕಾರಿ ನಂತರ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಪದಕ್ಕೆ ಏರಿದ, ಶ್ರೀ ಬಾಲಸುಬ್ರಹ್ಮಣ್ಯಂ ಕಾರ್ಯದರ್ಶಿಯಾಗಿದ್ದ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿ ಒಂದು ವಿಸ್ತೃತ ವರದಿಯನ್ನು ಕೊಟ್ಟಿತು. ಹತ್ತು ವರ್ಷದ ಅವಧಿಯಲ್ಲಿ ಆಯ್ದ 10 ಮುಖ್ಯ ವಲಯಗಳಲ್ಲಿ ರೂ 350 ಕೋಟಿ ಬಂಡವಾಳವನ್ನು ಹೂಡಬೇಕೆಂಬುದೊಂದು ಅದರ ಮುಖ್ಯ ಸಲಹೆಗಳಲ್ಲಿ ಒಂದಾಗಿತ್ತು. ಇಲ್ಲಿ ಉದ್ಭವವಾದ ಪ್ರಶ್ನೆ ಬೇಕಾದ ಹೆಚ್ಚುವರಿ ಹಣವನ್ನು ಎಲ್ಲಿಂದ ತರಬೇಕು ಎಂದು. ಕೇಂದ್ರ ಸರಕಾರ ಇದಕ್ಕೆ ನೆರವು ನೀಡುವದಿಲ್ಲ. ರಾಜ್ಯ ಸರ್ಕಾರದ ಸಂಪನ್ಮೂಲಗಳ ಪರಿಸ್ಥಿತಿ ಅಷ್ಟು ಅನುಕೂಲಕರವಾಗಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಪರ್ಯಾಯ ವ್ಯವಸ್ಥೆಯೆಂದರೆ ಧರ್ಮಸಿಂಗ ಸಮಿತಿ ಹೇಳಿದಂತೆ ವಿಶೇಷ ನಿಗಮವನ್ನು ಸ್ಥಾಪಿಸಬೇಕು. ಮತ್ತು ಅದರ ಮೂಲಕ ಹೊರಗಿನ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಇದಕ್ಕೆ ತಾಂತ್ರಿಕ ತೊಂದರೆಗಳಿವೆ. ಕೇಂದ್ರ ಸರ್ಕಾರದ ಒಪ್ಪಿಗೆ ಬೇಕು ಮತ್ತು ಅದು ಅಷ್ಟು ಸುಲಭವಾಗಿ ಸಿಗುವದಿಲ್ಲ ಎಂಬ ವಾದವೂ ಕೇಳಿ ಬಂದಿತು. ಇದೆಲ್ಲವುದರ ಕೂಲಂಕಷ ಚರ್ಚೆಯಾಗುವದರೊಳಗೆ ಚುನಾವಣೆ ಬಂದು ಅಧಿಕಾರ ಹಸ್ತಾಂತರವಾಯಿತು. ಈ ವಿಷಯ ಮರುಕಳಿಸಿದ್ದು ಒಂದು ದಶಕದ ನಂತರ.

1989 ರಲ್ಲಿ ಅಧಿಕಾರಕ್ಕೆ ಬಂದ ಅಂದಿನ ಸರ್ಕಾರ 1991ರಲ್ಲಿ ಒಂದು ವಿಶೇಷ ಕಾನೂನಿನ ಮೂಲಕ ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ರಚಿಸಿತು. ಅದು ಕಾರ್ಯವನ್ನು ಶುರುಮಾಡಿದ್ದು 1992 ಅಕ್ಟೋಬರದಲ್ಲಿ. ಅಂದಿನ ಅವಿಭಜಿತ ಕಲಬುರ್ಗಿ, ಬೀದರ, ಅವಿಭಜಿತ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಬೇಕಾದ ವಾರ್ಷಿಕ ಯೋಜನೆಗಳನ್ನು ತಯಾರಿಸಬೇಕು, ಅನುಷ್ಠಾನದ ಉಸ್ತುವಾರಿ ಮಾಡಬೇಕು ಮತ್ತು ಗುಣಮಟ್ಟ ಮೇಲೆ ಕಣ್ಣಿಡಬೇಕು ಎನ್ನುವದು ಬೋರ್ಡಿಗೆ ಕೊಟ್ಟ ಜವಾಬ್ದಾರಿ. ಇದಲ್ಲದೇ ಸರ್ಕಾರವು ಮಲೆನಾಡು ಅಭಿವೃದ್ಧಿ ಮಂಡಳಿ, (13 ಜಿಲ್ಲೆಗಳ 71 ವಿಧಾನಸಭಾ ಕ್ಷೇತ್ರ), ಬಯಲುಸೀಮೆ ಅಭಿವೃದ್ಧಿ ಮಂಡಳಿ (12 ಜಿಲ್ಲೆಗಳ 76 ವಿಧಾನಸಭಾ ಕ್ಷೇತ್ರಗಳು), ಹಾಗೂ ಗಡಿನಾಡ ಅಭಿವೃದ್ಧಿ ಯೋಜನೆ (15 ಜಿಲ್ಲೆಗಳ 52 ವಿಧಾನಸಭಾ ಕ್ಷೇತ್ರಗಳು) ಇದೇ ಕಾಲದಲ್ಲಿ ರಚಿಸಿತು. ಮಂತ್ರಿಗಳ ಹಿರಿತನದಲ್ಲಿ ಇರುವ ಈ ಅಭಿವೃದ್ಧಿ ಮಂಡಳಿಗಳ ಸದಸ್ಯರೆಂದರೆ ಆಯಾ ಭಾಗದ ಶಾಸಕರು ಮತ್ತು ಜಿಲ್ಲಾ ಪಂಚಾಯತ ಅಧ್ಯಕ್ಷರು. ಇವುಗಳಲ್ಲಿ ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಯೇ ಅದಕ್ಕೊದಗಿಸಿದ ಬಜೆಟ್ (ಸುಮಾರು 75%) ಮೇಲೆ ನೋಡಿದರೆ ಎಲ್ಲದಕ್ಕಿಂತಲೂ ದೊಡ್ಡದು. ಈ ಮಂಡಲಿಗಳ ಕೆಲಸ ಹೇಗಿತ್ತು ಎನ್ನುವದಕ್ಕೆ ನಂಜುಂಡಪ್ಪ ಹಿರಿತನದ ಪ್ರಾದೇಶಿಕ ಅಸಮಾನತೆ ನಿವಾರಣಾ ಸಮಿತಿಯು ಕೊಟ್ಟ ಅಭಿಪ್ರಾಯ ಗಮನಿಸಿದರೆ ಅರ್ಥವಾದೀತು. ಈ ಎಲ್ಲ ಅಭಿವೃದ್ಧಿ ಮಂಡಳಿಗಳ ಕಾರ್ಯವನ್ನು ವಿಶೇಷವಾಗಿ ಅಧ್ಯಯನ ಮಾಡಿಸಿದ ನಂಜುಂಡಪ್ಪ ಸಮಿತಿ, ಇವುಗಳನ್ನು ರದ್ದು ಮಾಡಬೇಕು ಇವುಗಳ ರಚನೆಯ ಉದ್ದೇಶವೇ ಫಲಿಸಿಲ್ಲವೆಂಬ ಶಿಫಾರಸ್ಸನ್ನು, 2002ರಲ್ಲಿ ಕೊಟ್ಟ ತನ್ನ ಅಂತಿಮ ವರದಿಯಲ್ಲಿ ಸ್ಪಷ್ಟವಾಗಿ ಹೇಳಿತ್ತು.

1992ರಲ್ಲಿ ಅಸ್ತಿತ್ವಕ್ಕೆ ಬಂದ ಹೈ. ಕ.ಅಭಿವೃದ್ಧಿ ಮಂಡಳಿ, ಸಂವಿಧಾನದ ತಿದ್ದುಪಡಿಯ ಮೂಲಕ ಸ್ಥಾಪಿತವಾದ ಅದೇ ಹೆಸರಿನ ಇನ್ನೊಂದು ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಇತ್ತೀಚಿನ ದಿನಗಳಲ್ಲಿ ಬರುವ ತನಕ ಅಂದರೆ ಸುಮಾರು ಎರಡು ದಶಕಗಳ ಮೇಲ್ಪಟ್ಟು ಅವಧಿಯ ತನಕ ಕೆಲಸ ಮಾಡಿದೆ. ಅದರ ಕಾರ್ಯವೈಖರಿ ಮಂಡಳಿಯ ವಿಶೇಷ ಅಧ್ಯಯನ ವರದಿಯಿಂದ ಗೊತ್ತಾಗುತ್ತದೆ. ಕಾರ್ಯಕ್ರಮ ರೂಪಿಸುವದಕ್ಕೆ ಯಾವ ನೀತಿ ನಡಾವಳಿಗಳೂ ಇಲ್ಲ. ಕೆಲಸಗಳ ಅನುಷ್ಠಾನಕ್ಕೆ ಬೇಕಾದ ಅನುಷ್ಠಾನ ಸಮಿತಿಯ ರಚನೆಯನ್ನು ಕೊನೆಯ ತನಕ ಮಾಡಲೇ ಇಲ್ಲ. ಮೊದಲ ದಿನಗಳಲ್ಲಿ ಮಂಡಳಿಯ ಕಾರ್ಯಕ್ರಮಗಳು ಸಾಮಾನ್ಯವಾಗಿ ಬಜೆಟ್ ಕಾರ್ಯಕ್ರಮಕ್ಕಿಂತ ಭಿನ್ನ ಮತ್ತು ಹೆಚ್ಚುವರಿಯಾದುದು ಎಂದಿದ್ದರೂ, ದಿನಗಳು ಕಳೆದಂತೆ ಈ ಸೂಕ್ಷ್ಮ ವ್ಯತ್ಯಾಸದ ಗೆರೆ ಮಾಸ ತೊಡಗಿತು. ಹೈ ಕ ಅಭಿವೃದ್ಧಿ ಕಾರ್ಯಕ್ರಮಗಳು ಸಾಮಾನ್ಯ ಬಜೆಟ್ ಕಾರ್ಯಕ್ರಮಕ್ಕಿಂತ ಬದಲಾಗಿ ಕೈಕೊಂಡ



ಕಾರ್ಯಕ್ರಮಗಳೆಂದಾಗಿ ಭಾವಿಸುವದರಿಂದ ಹೈಕ ಮಂಡಳಿ ಕಾರ್ಯಕ್ರಮವು ವಿಶೇಷ ಅರ್ಥವನ್ನೇ ಕಳೆದುಕೊಂಡಿತು. ಸರ್ಕಾರದಿಂದ ಬರುವ ಅನುದಾನವು ಅನಿಶ್ಚಿತ ಮತ್ತು ಬಂದ ಅನುದಾನವನ್ನೂ ಸರಿಯಾಗಿ ವೆಚ್ಚಮಾಡದಿದ್ದ ಪರಿಸ್ಥಿತಿಯೂ ಅನೇಕ ಸಲ ಬಂದೊದಗಿದೆ.

### ಮನ್ವಂತರ

ಸಂವಿಧಾನ ತಿದ್ದುಪಡಿಯ ಮೂಲಕ ರಚಿತವಾದ ಹೊಸ ಹೈ ಕ. ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಕಥೆ ಸ್ವಲ್ಪ ಭಿನ್ನ. ಪ್ರಾರಂಭದ ದಿವಸಗಳ ಅನಿಶ್ಚಿತತೆ ದೂರವಾಗಿ ಅದು ನೆಲ ಊರತೊಡಗಿದೆ. ಕಾರ್ಯಕ್ರಮಗಳೆಲ್ಲ ಮಂಡಳಿಯಲ್ಲಿಯೇ ನಿರ್ಣಯವಾಗಿ ಅನುಷ್ಠಾನದ ಹೊಣೆ ಹೊತ್ತಿರುವ ಸರ್ಕಾರಿ ವಿಭಾಗಗಳಿಗೆ ಕಳಿಸಲಾಗುತ್ತದೆ. ಮೊದಲಿನ ಮಂಡಳಿಗಿಂತ ಭಿನ್ನವಾದದ್ದೆಂದರೆ ಸರ್ಕಾರದಿಂದ ಬರುವ ಅನುದಾನದಲ್ಲಿ ನಿಶ್ಚಿತತೆ ಇದೆ. ವರ್ಷಕ್ಕೆ ರೂ 1000 ಕೋಟಿ ಅನುದಾನ ನಿಗದಿ ಮಾಡಿದ್ದು, ಪ್ರತಿ ತ್ರೈಮಾಸಿಕದ ಅವಧಿಗೆ ಸರ್ಕಾರದ ಅನುದಾನ ಬಂದು ಬಿಡುತ್ತದೆ. ಎಷ್ಟು ಬೇಗ ಯೋಜನೆಗಳು ಕಾರ್ಯಗತವಾಗುತ್ತವೆಯೋ ಅಷ್ಟು ಬೇಗ ಹಣ ಬಂದುಬಿಡುತ್ತದೆ. ಖರ್ಚಾಗದಿದ್ದ ಹಣ ವಾಪಸ್ಸು ಹೋಗುವ ಹೆದರಿಕೆ ಇಲ್ಲ. ಅದನ್ನು ಬೇರೆ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗುತ್ತದೆ. ಇಲ್ಲಿ ಬಂದಿರುವ ಒಂದೇ ತೊಂದರೆಯೆಂದರೆ ಯೋಜನೆಗಳ ಅನುಷ್ಠಾನವು ಸರ್ಕಾರಿ ವಿಭಾಗಗಳಿಂದ ಆಗುವದರಿಂದ ಯೋಜನೆ ಮುಗಿಸುವಲ್ಲಿ ವಿಳಂಬವಾಗುತ್ತಿದೆ. ಏಕೆಂದರೆ ಅದೇ ವಿಭಾಗದವರು, ಇತರ ಸರ್ಕಾರಿ ಯೋಜನೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆ ಕೆಲಸಗಳ ಜೊತೆಗೆ ಹೈ ಕ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಇರುವ ನೌಕರರ ಸಂಖ್ಯೆ ಹೆಚ್ಚಾಗಿಲ್ಲ. ಹೊಸ ನೇಮಕಗಳು ಆಗಿಲ್ಲ. ಮತ್ತು ಹೈ ಕ ಆಭಿವೃದ್ಧಿ ಕೆಲಸಗಳಿಗೆ

ಹೆಚ್ಚುವರಿ ಸಿಬ್ಬಂದಿ ಇಲ್ಲ. ಹಾಗಾಗಿ ಅವರ ಮೇಲೆ ಕೆಲಸದ ಒತ್ತಡ ಹೆಚ್ಚುತ್ತಿದೆ. ಆದ್ದರಿಂದ ಯೋಜನೆ ಕಾರ್ಯಗತವಾಗುವಲ್ಲಿ ವಿಳಂಬಗಳಾಗುತ್ತಿವೆ. ಈ ಗೊಂದಲದಲ್ಲಿ ಅವರು ತೊಳಲಾಡುತ್ತಿದ್ದಾರೆ.

### ಹಿಂದಿನ ಅನುಭವ – ಪಾಠ

ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ಬೆಳೆಯುತ್ತಿದೆ ಮತ್ತು ಅದನ್ನು ನಿವಾರಿಸಬೇಕು ಎಂದು ಕೂಗು ಏಳುತ್ತಿದ್ದಂತೆ ರಾಜ್ಯದ ಎಲ್ಲ ನಾಲ್ಕೂ ವಿಭಾಗಗಳಿಗೆ ಅಭಿವೃದ್ಧಿ ಫಲ ಹೊಂದಲು ಸಮಾನ ಅವಕಾಶವಿರಬೇಕೆಂಬ ಉದ್ದೇಶದಿಂದ 2000 ಇಸ್ವಿಯಲ್ಲಿ ರಚನೆಯಾದದ್ದು ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮಾನತೆ ನಿವಾರಣಾ ಸಮಿತಿ. ಅದರ ಮೂಲ ಉದ್ದೇಶವು ಉತ್ತರ ಕರ್ನಾಟಕದಲ್ಲಿನ ಅಸಮಾನತೆಯ ಅಧ್ಯಯನವಾಗಿದ್ದರೂ, ಇಡೀ ರಾಜ್ಯದಲ್ಲಿರುವ ಅಸಮಾನತೆಯನ್ನು ಪರಿಗಣಿಸಿ ಅಧ್ಯಯನ ನಡೆಸಿದುದರ ಪರಿಣಾಮವಾಗಿ, ಹೊರ ಬಂದ ಸಂಗತಿಯೆಂದರೆ, ಪ್ರಾದೇಶಿಕ ಅಸಮಾನತೆ ಬರೀ ಉತ್ತರ ಕರ್ನಾಟಕ್ಕೆ ಸೀಮಿತವಾಗಿಲ್ಲ ಆದರೆ ದಕ್ಷಿಣ ಕರ್ನಾಟಕದಲ್ಲಿಯೂ ಇದೆ. ಅದರ ಪ್ರಕಾರ ರಾಜ್ಯದ 175 ತಾಲೂಕುಗಳಲ್ಲಿ 114 ತಾಲೂಕುಗಳು ಒಂದಲ್ಲೊಂದು ರೀತಿಯಿಂದ ಹಿಂದುಳಿದಿವೆ. ತೀಕ್ಷ್ಣತೆಯ ಆಧಾರದ ಮೇಲೆ ಹಿಂದುಳಿದ ತಾಲೂಕುಗಳನ್ನು ಅತಿ ಹಿಂದುಳಿದ (39). ಸಾಧಾರಣ ಹಿಂದುಳಿದ (40) ಮತ್ತು ಹಿಂದುಳಿದ (35) ವಿಂಗಡಿಸಲಾಗಿದೆ. ಹೀಗಾಗಿ ಉಂಟಾಗಿರುವ ಅಭಿವೃದ್ಧಿ ಅಸಮಾನತೆ ನಿವಾರಣೆಗಾಗಿ ಮುಂದಿನ ಎಂಟು ವರ್ಷದ ಅವಧಿಯಲ್ಲಿ ಹೆಚ್ಚುವರಿ ರೂ 16,000 ಕೋಟಿಯನ್ನು ವೆಚ್ಚಮಾಡಬೇಕು ಎಂದು ಹೇಳಿತ್ತು. ಮೇಲ್ನೋಟಕ್ಕೆ ಇದರ ಅನುಷ್ಠಾನದಲ್ಲಿ ಯಾವ ಸಮಸ್ಯೆ ಇರಲಿಲ್ಲ. ವರ್ಷಕ್ಕೆ ಬೇಕಾದದ್ದು ರೂ. 2000 ಕೋಟಿ. ಯಾವ ಯಾವ ತಾಲೂಕುಗಳು ಯಾವ ಯಾವ ಕ್ಷೇತ್ರಗಳಲ್ಲಿ ಹಿಂದುಳಿದಿವೆ ಎಂಬ ವಿವರವನ್ನು ಒದಗಿಸಿರುವದರಿಂದ ಅದರ ಆಧಾರದ ಮೇಲೆ ಜಿಲ್ಲಾವಾರು ಎಂಟು ವರ್ಷದ ಕಾರ್ಯಕ್ರಮ ತಯಾರಿಸಿ ಆಯ್ದ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಯೋಜನೆ ತಯಾರಿಸುವದು ಬಹಳ ಕಷ್ಟವೇನಲ್ಲ. ಸಮಿತಿಯ ಇಂಗಿತದಂತೆ 2002–03ರ ಅಂದಾಜು ಪತ್ರಿಕೆಯ ಮಂಡಣೆಯ ಪೂರ್ವದಲ್ಲಿಯೇ ಈ ಸಮಿತಿಯ ವರದಿ ಸರ್ಕಾರಕ್ಕೆ ನೀಡಿರುವದರಿಂದ ಅದೇ ವರ್ಷದಿಂದ ಇದರ ಅನುಷ್ಠಾನಕ್ಕೆ ಯಾವ ಸಮಸ್ಯೆಯೂ ಇರಲಿಲ್ಲ. ಆದರೆ ಆದು ಹಾಗೆ ಆಗಲಿಲ್ಲ. ಸಮಿತಿಯು ರಚನೆಯಾದಾಗ ಇದ್ದ ಉತ್ಸಾಹ ಸಮಿತಿಯ ವರದಿ ಬಂದಾಗ ಇರಲಿಲ್ಲ. ರಾಜಕೀಯ ಧುರೀಣರಿಗೆ ಮನಸ್ಸಿಲ್ಲವಾದರೆ ಅಧಿಕಾರಿಗಳಿಗೆ ಏಕೆ ಇರಬೇಕು? ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಹಾಗೆ ಅಧಿಕಾರಿ ವರ್ಗವೂ ಸಮಿತಿಯ ವರದಿಯಲ್ಲಿ ಒಂದಲ್ಲೊಂದು ತಪ್ಪು ಹುಡುಕುವದರಲ್ಲಿ ಉದ್ಯುಕ್ತವಾಯಿತು. ಇದರ ಒಟ್ಟಿನ ಪರಿಣಾಮವೆಂದರೆ 2007ರ ತನಕ ಸಮಿತಿಯ ವರದಿ ಕಾರ್ಯರೂಪಕ್ಕೆ ಬರಲೇ ಇಲ್ಲ. ಸರ್ಕಾರ ನೆವ ಹೇಳದೇ, ಸಮಿತಿಯ ವರದಿಯನ್ನು ಕಾರ್ಯಗತ ಮಾಡಲು ಹೊರಟಿದ್ದು 2007–2008ರಲ್ಲಿ, ಅದಕ್ಕಾಗಿ ವಿಶೇಷ ಅಭಿವೃದ್ಧಿ ಯೋಜನೆಯೊಂದನ್ನು ರೂಪಿಸಿ ಅಂದಾಜು ಪತ್ರಿಕೆಯಲ್ಲಿ ಅಳವಡಿಸಿದರು. 2002–2003ರಲ್ಲಿದ ಬೆಲೆಗಳ ಆಧಾರದ ಸಮಿತಿ ಮಾಡಿದ್ದ ಹೆಚ್ಚುವರಿ ಹಣದ ಅಂದಾಜನ್ನು ಪ್ರಸಕ್ತ ಬೆಲೆಗಳ ಅಧಾರದ ಮೇಲೆ ಪುನರ್ವಿಮರ್ಶೆ ಮಾಡಿದುದಲ್ಲದೇ ಬರುವ ಎಂಟು ವರ್ಷಗಳಲ್ಲಿ, ಒಟ್ಟಿನ ಹಣದಲ್ಲಿ 60% ಹಣವನ್ನು ಕಲಬುರ್ಗಿ (40%) ಮತ್ತು ಬೆಳಗಾವಿ ವಿಭಾಗ (20%) ಗಳಿಗೆ ಹಾಗೂ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಉಳಿದ 40% ಹಣವನ್ನು ಖರ್ಚು ಮಾಡಬೇಕೆಂದು ಸಮಿತಿ ಹೇಳಿದಂತೆ ಮಾಡಲು ಸರ್ಕಾರ ನಿಶ್ಚಯ ಮಾಡಿತು. ಹೈದ್ರಾಬಾದ್ ಕರ್ನಾಟಕ ವಿಭಾಗಕ್ಕೆ ಇದರಿಂದ ದ್ವಿಗುಣ ಲಾಭ. ಅದಕ್ಕೆ ತನ್ನದೇ ಆದ ಅಭಿವೃದ್ಧಿ ಮಂಡಳಿಯ ಹಣವೂ ಸಿಗುತ್ತದೆ ಮತ್ತೂ ನಂಜುಂಡಪ್ಪ ಸಮಿತಿಯ ಲಾಭವೂ ಸಿಗುತ್ತದೆ. ಆದರೆ ದುರಂತವೇನೆಂದರೆ ಈ ಮೀನ ಮೇಷದಲ್ಲಿ ಅತಿ ಮೌಲ್ಯವಾದ ಕಾಲದ ವ್ಯಯವಾಗಿತ್ತು. ಸಮಿತಿಯ ಮೊದಲ ಕಾಲಮಿತಿಯ ಮೊದಲ ಐದು ವರ್ಷಗಳಲ್ಲಿ ಕೆಲಸವೇ ಶುರುವಾಗದೇ, ಕಾಲಮಿತಿ ಗಡುವು ಮುಗಿಯುವ ಕಾಲದಲ್ಲಿ ಕಾರ್ಯ ಶುರುವಾಯಿತು. ಅದರ ಎಂಟು ವರ್ಷದ ಕಾಲಮಿತಿ ಈಗ ಮುಗಿಯುತ್ತ ಬಂದಿರುವಾಗಲೂ ಗಣನೀಯವಾಗಿ ಅಸಮಾನತೆಯ ಪಿಡುಗನ್ನು ದೂರಮಾಡಲಾಗಿದೆ ಎಂದು ಯಾರೂ ಹೇಳಿಕೊಳ್ಳುವಂತಿಲ್ಲ. ಆ



ಬಗೆಗೆ ಮೌಲ್ಯಮಾಪನವೂ ಆದಂತಿಲ್ಲ. ಅನುಷ್ಠಾನದಲ್ಲಿ ಬಂದಿರುವ ಮುಖ್ಯ ತೊಂದರೆಯೆಂದರೆ ಸಮಿತಿಯು ಸೂಚಿಸಿದ ಆಯ್ದ ಕ್ಷೇತ್ರಗಳಲ್ಲಿ ಹೆಚ್ಚುವರಿ ಹಣದ ಹೂಡಿಕೆಯಾಗುತ್ತಿಲ್ಲ. ಕಾಲದ ಅಪವ್ಯಯದಿಂದ ಹೂಡಬೇಕಾದ ಹಣದಲ್ಲಿ ಗಣನೀಯ ಹೆಚ್ಚಳವಾಗಿದೆ. ಏಕೆಂದರೆ ಬೆಲೆಗಳು ಏರುತ್ತಲೇ ಇವೆ. ವಿಳಂಬವಾದಷ್ಟು ಗುರಿ ಮುಟ್ಟುವದಕ್ಕೆ ತೆರಬೇಕಾದ ಬೆಲೆ ಹೆಚುತ್ತಲೇ ಹೋಗುತ್ತಿದೆ. ಅನುಷ್ಠಾನದಲ್ಲಿ ಜಿಲ್ಲಾವಾರು ಸಮಿತಿಯ ಶಿಫಾರಸಿನನ್ವಯ ಯೋಜನೆಗಳನ್ನು ರೂಪಿಸಲಾಗಿಲ್ಲವೆಂದು ವರದಿಗಳು ಹೇಳುತ್ತವೆ. ಹಣದ ಬಿಡುಗಡೆ ಮತ್ತು ವೆಚ್ಚದ ನಡುವೆ ಇರುವ ಕಂದಕವನ್ನು ಮುಚ್ಚಲಾಗಿಲ್ಲ. ಹೀಗಾಗಿ ಅನುಷ್ಠಾನವೂ ಕುಂಟುತ್ತಲೇ ನಡೆದಿದೆ. ವರದಿ ಕೊಟ್ಟಮೇಲೆ ನಂಜುಂಡಪ್ಪನವರನ್ನು ಈ ಲೇಖಕ ಕೇಳಿದ್ದುಂಟು. ವರದಿ ಕೊಟ್ಟಾದ ಮೇಲೆ ಅನುಷ್ಠಾನದ ಜವಾಬ್ದಾರಿ ವಹಿಸಿ ಕೊಳ್ಳುವವರು ಯಾರು? ಅದಕ್ಕೆ ನಂಜುಂಡಪ್ಪನವರು ಕೊಟ್ಟ ಉತ್ತರ ಮರೆಯುವಂತಿಲ್ಲ. "ನನಗೆ ವಹಿಸಿದ ಕೆಲಸವನ್ನು ನಾನು ಮಾಡಿದ್ದೇನೆ. ಅದರಂತೆ ಕೆಲಸ ಮಾಡಿಸಿಕೊಳ್ಳುವದು ಶಾಸಕರ ಜವಾಬ್ದಾರಿ. ಸರ್ಕಾರದ ಮೇಲೆ ಒತ್ತಡ ತಂದು ಕೆಲಸವನ್ನು ಮಾಡಿಸಿಕೊಳ್ಳಬೇಕು".

### ಬದ್ಧತೆಯ ನಿರೀಕ್ಷೆಯಲ್ಲಿ

ಇಲ್ಲಿಯ ತನಕದ ಅನುಭವದ ಮೇಲೆ ಹೇಳಬೇಕಾದರೆ ಜನಪ್ರತಿನಿಧಿಗಳಿಗೂ ಇದರಲ್ಲಿ ಆಸಕ್ತಿ ಇಲ್ಲ. ಬಹು ಮಂದಿಗೆ ನಂಜುಂಡಪ್ಪ ಸಮಿತಿಯೇನು ಅದರೆ ಶಿಫಾರಸುಗಳೇನು ಎನ್ನುವದರ ಅರಿವಿಲ್ಲ. ಜನಪ್ರತಿನಿಧಿಗಳಿಗೆ ಆಸಕ್ತಿ ಇಲ್ಲದ ಮೇಲೆ ಸರ್ಕಾರದ ಮೇಲೆ ಒತ್ತಡ ಹೇರಿ ತರುವ, ಬೇಗ ಕೆಲಸವಾಗುವಂತೆ ಮಾಡುವವರು ಯಾರು ಎನ್ನುವದೊಂದು ಯಕ್ಷ ಪ್ರಶ್ನೆಯಾಗಿದೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು? ❑

# ಕರ್ನಾಟಕದಲ್ಲಿ ಸಂವಿಧಾನದ ಅನುಚ್ಛೇದ 371(ಜೆ)

* ಡಾ. ಟಿ.ಆರ್. ಚಂದ್ರಶೇಖರ



> **ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸದರಿ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು ಮತ್ತು ಅನುಷ್ಠಾನದಲ್ಲಿರುವ ಅಭಿವೃದ್ಧಿ ಯೋಜನೆಗಳ ನಿರ್ವಹಣೆಯನ್ನು ಉತ್ತಮ ಪಡಿಸಬೇಕು. ಈ ಪ್ರದೇಶದಲ್ಲಿ ಮುಖ್ಯವಾಗಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಸಂತಾನೋತ್ಪತ್ತಿ ಹಕ್ಕುಗಳು, ಮಹಿಳಾ ಸಮಾನತೆ, ಮಕ್ಕಳ ಆರೋಗ್ಯ, ವಲಸೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳು – ಮುಂತಾದ ಸಂಗತಿಗಳ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ.**

ಅನೇಕ ಚಾರಿತ್ರಿಕ, ಭೌಗೋಳಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಅದರ ಈಶಾನ್ಯ ಭಾಗದಲ್ಲಿರುವ ಹೈದರಾಬಾದ್ ಕರ್ನಾಟಕ ಪ್ರದೇಶ ಎಂದು ಯಾವುದನ್ನು ಕರೆಯುತ್ತೇವೆಯೋ ಅದರ ಆರು ಜಿಲ್ಲೆಗಳು(ಬೀದರ್, ಕಲಬುರಗಿ, ಯಾದಗೀರ್, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು)ಇಂದಿಗೂ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿವೆ. ಈ ಪ್ರದೇಶದ ಜಿಲ್ಲೆಗಳ ಹಿಂದುಳಿದಿರುವಿಕೆಯನ್ನು ಪ್ರಾದೇಶಿಕ ಅಸಮಾನತೆ ನಿವಾರಣೆ ಅಧ್ಯಯನದ ಉನ್ನತಾಧಿಕಾರ ಸಮಿತಿ(ಡಾ.ಡಿ.ಎಂ.ನಂಜುಂಡಪ್ಪ ಸಮಿತಿ 2000)ಯು ಅಂಕಿಅಂಶಗಳ ಆಧಾರದಲ್ಲಿ ದೃಢಪಡಿಸಿದೆ. ಇತ್ತೀಚಿಗೆ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ಜಿಲ್ಲಾ ಪಂಚಾಯತಿಗಳ ಸಹಯೋಗದಲ್ಲಿ ಸಿದ್ಧಪಡಿಸಿರುವ ಮೂವತ್ತು ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳಲ್ಲಿಯೂ(2015) ಇದು ಬಹಿರಂಗಗೊಂಡಿದೆ. ನಮ್ಮ ರಾಜ್ಯಕ್ಕೆ ಸಂಬಂಧಿಸಿದ 2011ರ ಜನಗಣತಿ ವರದಿಯಲ್ಲಿಯೂ ನಮಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳ ಹಿಂದುಳಿದಿರುವುದರ ಬಗ್ಗೆ ಮಾಹಿತಿ ದೊರೆಯುತ್ತದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು 2012ರಲ್ಲಿ ಸಂವಿಧಾನದ ಅನುಚ್ಛೇದ 371ಕ್ಕೆ ತಿದ್ದುಪಡಿ ತಂದು ಹೊಸದಾಗಿ 371(ಜೆ) ಎಂಬ ಅನುಚ್ಛೇದವನ್ನು ಅದರಲ್ಲಿ ಸೇರಿಸಿ ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ

### ಸಂವಿಧಾನದ ಅನುಚ್ಛೇದ 371(ಜೆ) ಅಸ್ತಿತ್ವಕ್ಕೆ ಬಂದ ಬಗೆ

**ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಗೆ ವಿಶೇಷ ಸ್ಥಾನಮಾನ ನೀಡುವ ಅನುಚ್ಛೇದ 371(ಜೆ) ಒಳಗೊಂಡ ಸಂವಿಧಾನದ 118ನೆಯ ತಿದ್ದುಪಡಿಗೆ ಲೋಕಸಭೆಯು ಡಿಸೆಂಬರ್ 18, 2012ರಂದು ಅನುಮೋದನೆ ನೀಡಿತು.**

**ಈ ಮಸೂದೆಗೆ ರಾಜ್ಯಸಭೆಯು ಮರುದಿನವೇ ಅಂದರೆ ಡಿಸೆಂಬರ್ 19, 2012ರಲ್ಲಿ ತನ್ನ ಅನುಮೋದನೆ ನೀಡಿತು.**

**ಸಂವಿಧಾನದ ಅನುಚ್ಛೇದ 371 ಜೆ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ಅವರು ಜನವರಿ 1, 2013ರಂದು ಸಹಿ ಹಾಕಿದರು.**

**ಸಂವಿಧಾನದ ಅನುಚ್ಛೇದ 371 ಜೆ ತಿದ್ದುಪಡಿ ಮಸೂದೆಗೆ ಜನವರಿ 02, 2013 ರಂದು ರಾಷ್ಟ್ರಪತಿ ಒಪ್ಪಿಗೆಯ ಗೆಜೆಟ್ ಪ್ರಕಟವಾಯಿತು.**

**ರಾಷ್ಟ್ರಪತಿ ಅವರು ಸಂವಿಧಾನದ 118ನೆಯ ತಿದ್ದುಪಡಿ ಮೂಲಕ ರೂಪಿಸಿರುವ ಅನುಚ್ಛೇದ 371(ಜೆ) ಅಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಕರ್ನಾಟಕದ ರಾಜ್ಯಪಾಲರಿಗೆ ಅಧಿಕಾರ ನೀಡುವ ಆದೇಶವನ್ನು 23 ಅಕ್ಟೋಬರ್ 2013ರಲ್ಲಿ ಹೊರಡಿಸಿದರು.**

---

* ಸಮಾಲೋಚಕರು, ನಾಲ್ಕನೇ ರಾಜ್ಯ ಹಣಕಾಸು ಆಯೋಗ, ಕರ್ನಾಟಕ.

ಅಸಮಾನತೆಯನ್ನು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆ ಸಮಸ್ಯೆಯನ್ನು ಸಂವಿಧಾನದ ಅನುಚ್ಛೇದ 371 ಜೆ ಹಿನ್ನೆಲೆಯಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಈ ಲೇಖನದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ರಾಜ್ಯಮಟ್ಟದ ಅಭಿವೃದ್ಧಿ ಸೂಚಿಗಳಿಗೆ ಹೋಲಿಸಿದರೆ ಎಷ್ಟು ಹಿಂದುಳಿದಿವೆ, ಯಾವ ಯಾವ ವಿಷಯದಲ್ಲಿ ಅವು ಹಿಂದುಳಿದಿವೆ ಎಂಬುದನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂವಿಧಾನದ ಅನುಚ್ಛೇದ 371(ಜೆ) ಅಡಿಯಲ್ಲಿ ಸದರಿ ಪ್ರದೇಶದ ಜಿಲ್ಲೆಗಳಿಗೆ ಏನೆಲ್ಲ ಶಾಸನಾತ್ಮಕ ಅನುಕೂಲಗಳು ದೊರೆಯುತ್ತವೆ, ಸದರಿ ಪ್ರದೇಶದ ಅಭಿವೃದ್ಧಿಗೆ ಯಾವ ಸಾಂಸ್ಥಿಕ ವ್ಯವಸ್ಥೆಯನ್ನು ಅದರಲ್ಲಿ ಮಾಡಲಾಗಿದೆ ಎಂಬ ಸಂಗತಿಗಳ ವಿವರಗಳನ್ನು ನೀಡಲಾಗಿದೆ. ಮೂರನೆಯ ಭಾಗದಲ್ಲಿ ಸದರಿ ಅನುಚ್ಛೇದ 371(ಜೆ) ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಏನೆಲ್ಲ ಅನುಕೂಲಗಳು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಲಭಿಸಿವೆ, ಸದರಿ ಕ್ರಮವು ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯನ್ನು ಪರಿಹರಿಸಬಲ್ಲುದೆ, ಅದರ ಮಿತಿಗಳೇನು ಮುಂತಾದ ಸಂಗತಿಗಳನ್ನು ಪರಿಶೀಲಿಸಲಾಗಿದೆ.

### ಭಾಗ 1

### ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ

ಈಗಾಗಲೆ ತಿಳಿಸಿರುವಂತೆ ಕರ್ನಾಟಕದ ಈಶಾನ್ಯ ಭಾಗದಲ್ಲಿರುವ ಆರು ಜಿಲ್ಲೆಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಎಂದು ಕರೆಯಲಾಗುತ್ತದೆ. ಈ ಆರು ಜಿಲ್ಲೆಗಳು ರಾಜ್ಯದ ಕಲಬುರಗಿ ವಿಭಾಗಕ್ಕೆ ಸೇರಿವೆ. ಈ ಪ್ರದೇಶವು 1948ರವರೆಗೆ ಹೈದರಾಬಾದ್ ನಿಜಾಮ್ ಸಂಸ್ಥಾನಕ್ಕೆ ಸೇರಿತ್ತು. ಸ್ವಾತಂತ್ರ್ಯಾನಂತರ 1956ರವರೆಗೆ ಇದು ಹೈದರಾಬಾದ್ ರಾಜ್ಯದ ಭಾಗವಾಗಿತ್ತು. ಕರ್ನಾಟಕ ಏಕೀಕರಣವಾದ 1956 ನವೆಂಬರ್ 1 ರಂದು ಅದು ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡಿತು. ಚಾರಿತ್ರಿಕವಾಗಿ ಈ ಪ್ರದೇಶವು ವಸಾಹತುಶಾಹಿ ಆಡಳಿತವನ್ನು ಅನುಭವಿಸಲಿಲ್ಲ. ವಸಾಹತುಶಾಹಿ ಆಡಳಿತದಿಂದ ವಂಚಿತವಾದ ಸದರಿ ಪ್ರದೇಶವು ಇಂದಿಗೂ ಹಿಂದುಳಿದ ಸ್ಥಿತಿಯಲ್ಲಿದೆ. ಚಾರಿತ್ರಿಕ ಸಂಗತಿಯು ಇದರ ಹಿಂದುಳಿದಿರುವಿಕೆ ಒಂದು ಕಾರಣವಾದರೆ ಭೌಗೋಳಿಕವಾಗಿ ಅತ್ಯಂತ ತೀವ್ರ ಒಣ ಪ್ರದೇಶಕ್ಕೆ ಇದು ಸೇರಿರುವುದರಿಂದ ಇದು ನಿರಂತರವಾಗಿ ಬರಗಾಲಕ್ಕೆ ಒಳಗಾಗುತ್ತಾ ಬಂದಿರುವುದು ಅದರ ಹಿಂದುಳಿದಿರುವಿಕೆ ಮತ್ತೊಂದು ಕಾರಣವಾಗಿದೆ.

### ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯ ಮಾಪನ

* ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜನಸಂಖ್ಯೆಯ ಪ್ರಮಾಣ ಶೇ 18.36.

* ನಮ್ಮ ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಅಕ್ಷರಸ್ಥರ ಪಾಲು ಶೇ15.23.

* ನಮ್ಮ ರಾಜ್ಯದ 2012–2013ನೆಯ ಸಾಲಿನ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ(ಚಾಲ್ತಿ ಬೆಲೆಗಳಲ್ಲಿ) ಹೈದರಾಬಾದ್ ಕರ್ನಾಟಕ ಪ್ರದೇಶದ ಪಾಲು ಶೇ13.23.

* ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣ 2011ರಲ್ಲಿ ಶೇ 75.36. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ ಶೇ 64.45.

* ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ., ಮತ್ತು ಪ.ಪಂ., ಜನಸಂಖ್ಯೆಯ ಪ್ರಮಾಣ ಶೇ24.01. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ., ಮತ್ತು ಪ.ಪಂ., ಜನಸಂಖ್ಯೆಯ ಪ್ರಮಾಣ ಶೇ 35.03.

* ಡಾ. ಡಿ.ಎಂ.ನಂಜುಂಡಪ್ಪ ಸಮಿತಿಯ ಪ್ರಕಾರ ರಾಜ್ಯದಲ್ಲಿರುವ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 21 (ಶೇ. 53.84) ತಾಲ್ಲೂಕುಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿವೆ.

* ರಾಜ್ಯದಲ್ಲಿನ ಒಟ್ಟು ಹಿಂದುಳಿದಿರುವಿಕೆ–ಯಲ್ಲಿ (ರಾಜ್ಯದ ಒಟ್ಟು ಸಂಚಿತ ದುಃಸ್ಥಿತಿ ಸೂಚ್ಯಂಕ: 20.26) ಹೈದರಾಬಾದ್ ಕರ್ನಾಟಕ ಪ್ರದೇಶದ (ಹೈದರಾಬಾದ್ ಕರ್ನಾಟಕ ಪ್ರದೇಶದ ಸಂಚಿತ ದುಃಸ್ಥಿತಿ ಸೂಚ್ಯಂಕ: 8.06) ಪಾಲು ಶೇ40.



* ರಾಜ್ಯಮಟ್ಟದಲ್ಲಿ 2001 ರಿಂದ 2011ರ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ 15.60ರಷ್ಟಿದ್ದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ 17.73ರಷ್ಟಿದೆ.

* ಕರ್ನಾಟಕದ 'ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು 2014'ರ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕ 0.400ಕ್ಕಿಂತ ಕಡಿಮೆಯಿರುವ ಜಿಲ್ಲೆಗಳ ಸಂಖ್ಯೆ ಎಂಟು. ಅವುಗಳಲ್ಲಿ ನಾಲ್ಕು ಜಿಲ್ಲೆಗಳು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿವೆ.

* ಕರ್ನಾಟಕದ ಒಟ್ಟು 176 ತಾಲ್ಲೂಕುಗಳ ಪೈಕಿ ಮಾನವ ಅಭಿವೃದ್ಧಿ ಸೂಚ್ಯಂಕ 0.500ಕ್ಕಿಂತ ಕಡಿಮೆಯಿರುವ ತಾಲ್ಲೂಕುಗಳ ಸಂಖ್ಯೆ 115. ಅವುಗಳಲ್ಲಿ 28 (ಶೇ24.35) ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿವೆ.

* ಕರ್ನಾಟಕ ರಾಜ್ಯಮಟ್ಟದಲ್ಲಿ ಕೃಷಿಯನ್ನು ಅವಲಂಬಿಸಿ ಕೊಂಡಿರುವ ದುಡಿಮೆಗಾರರ ಪ್ರಮಾಣ 2011ರಲ್ಲಿ ಶೇ49.24ರಷ್ಟಿದ್ದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅವರ ಪ್ರಮಾಣ ಶೇ 63.52ರಷ್ಟಿದೆ.

ಮೇಲಿನ ಹತ್ತು ಸೂಚಿಗಳು ಸ್ಪಷ್ಟವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಜನಸಂಖ್ಯೆಯ ಬೆಳವಣಿಗೆ ದೃಷ್ಟಿಯಿಂದ ಹಿಂದುಳಿದಿರುವುದನ್ನು ಮತ್ತು ಅದು ಎಷ್ಟು ಹಿಂದುಳಿದಿದೆ ಅನ್ನುವುದನ್ನು ಅವು ತೋರಿಸುತ್ತವೆ.

## ಭಾಗ 2

### ಸಂವಿಧಾನದ ಅನುಚ್ಛೇದ 371 (ಜೆ) ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ

ಭಾರತವು ಒಂದು ಒಕ್ಕೂಟ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ದೇಶ. ಕೇಂದ್ರ ಮತ್ತು ರಾಜ್ಯ ಸರ್ಕಾರವು ನಮ್ಮ ಒಕ್ಕೂಟ ವ್ಯವಸ್ಥೆಯ ಎರಡು ಅಂಗಗಳು. ರಾಜ್ಯಗಳು ಯಾವುದೇ ಕಾರಣಕ್ಕೆ ದುಸ್ಥಿತಿಯನ್ನು ಅನುಭವಿಸುತ್ತಿದ್ದರೆ ಅಂತಹ ರಾಜ್ಯಗಳಿಗೆ ವಿಶೇಷ ಅನುದಾನ, ಹಣಕಾಸು ನೆರವು ಮತ್ತು ಸವಲತ್ತುಗಳನ್ನು ನೀಡುವ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿದೆ. ಇದು ಕೇಂದ್ರದ ಸಂವಿಧಾನಾತ್ಮಕ ಜವಾಬುದಾರಿ. ದೇಶದಲ್ಲಿ ಕೆಲವು ರಾಜ್ಯಗಳು ವಿಶೇಷವಾಗಿ ಭೌಗೋಳಿಕ ಕಾರಣಕ್ಕೆ, ಚಾರಿತ್ರಿಕ ಕಾರಣಕ್ಕೆ ಅಭಿವೃದ್ಧಿಯ ಫಲಗಳಿಂದ ವಂಚಿತವಾಗಿವೆ. ಅಂತಹ ಹಿಂದುಳಿದ, ನೈಸರ್ಗಿಕ ಸಂಪನ್ಮೂಲಗಳ ದೃಷ್ಟಿಯಿಂದ ಅನನುಕೂಲ ಎದುರಿಸುತ್ತಿರುವ ಮತ್ತು ರಾಜಕೀಯವಾಗಿ ಸಂಘಟಿತವಾಗಲು ಸಾಧ್ಯವಾಗಿಲ್ಲದ ರಾಜ್ಯಗಳಿಗೆ ಮತ್ತು ರಾಜ್ಯಗಳ ಒಳಗಿನ ಕೆಲವು ಪ್ರದೇಶಗಳಿಗೆ ವಿಶೇಷ ಸವಲತ್ತು ನೀಡುವುದಕ್ಕೆ ಅವಕಾಶ ಮಾಡಿಕೊಡುವ ಒಂದು ಕ್ರಮ ನಮ್ಮ ಸಂವಿಧಾನದಲ್ಲಿದೆ. ಅದೇ ಅನುಚ್ಛೇದ 371.

### ಸಂವಿಧಾನದ ಅನುಚ್ಛೇದ 371 ರಡಿಯಲ್ಲಿ ಸೌಲಭ್ಯ ಪಡೆದಿರುವ ರಾಜ್ಯಗಳ ವಿವರ

ನಮ್ಮ ಸಂವಿಧಾನದ ಅನುಚ್ಛೇದ 371 ರಡಿಯಲ್ಲಿ ವಿಶೇಷ ಸ್ಥಾನಮಾನ ಪಡೆದಿರುವ ರಾಜ್ಯಗಳು ಹೀಗಿವೆ:

1. ಮಹಾರಾಷ್ಟ್ರ ಮತ್ತು ಗುಜರಾತ್ (371), 2. ನಾಗಾಲ್ಯಾಂಡ್ (371 ಎ), 3. ಅಸ್ಸಾಮ್ (371 ಬಿ), 4. ಮಣಿಪುರ (371 ಸಿ), 5. ಆಂಧ್ರಪ್ರದೇಶ (371 ಡಿ), 6. ಆಂಧ್ರಪ್ರದೇಶ (371 ಈ), 7. ಸಿಕ್ಕಿಮ್ (371 ಎಫ್), 8. ಮಿಜೋರಾಮ್ (371 ಜಿ), 9. ಅರುಣಾಚಲಪ್ರದೇಶ (371 ಎಚ್) 10. ಗೋವಾ (371 ಐ) ಮತ್ತು 11. ಕರ್ನಾಟಕ (371 ಜೆ).

ಸಂವಿಧಾನಾತ್ಮಕವಾದ ಸೌಲಭ್ಯವನ್ನು ಕರ್ನಾಟಕದ ಅತ್ಯಂತ ಹಿಂದುಳಿದ ಭಾಗವಾದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಒದಗಿಸಬೇಕು ಎಂದು ಸದರಿ ಪ್ರದೇಶದ ಜನತೆಯು ಕಳೆದ 30–40 ವರ್ಷಗಳಿಂದ ಹೋರಾಟ ನಡೆಸಿಕೊಂಡು ಬಂದಿದೆ. ಆದರೆ ಈ ಜನರ ಒತ್ತಾಯಕ್ಕೆ ಕೇಂದ್ರ ಸರ್ಕಾರ ಅನೇಕ ವರ್ಷಗಳ ಕಾಲ ಮಣಿದಿರಲಿಲ್ಲ. ಆದರೆ 2012–2013ರಲ್ಲಿ ಕೇಂದ್ರ ಸರ್ಕಾರವು ಸಂವಿಧಾನಕ್ಕೆ 118ನೆಯ ತಿದ್ದುಪಡಿ ತಂದು ಅನುಚ್ಛೇದ 371ಕ್ಕೆ ಅನುಚ್ಛೇದ 371 ಜೆ ಎಂಬುದನ್ನು ಸೇರಿಸಿ, ಅದರ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡಿತು (ವಿವರ ಚೌಕಟ್ಟು 1ರಲ್ಲಿ). ಸಂವಿಧಾನದ ಅನುಚ್ಛೇದ 371 ಜೆ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ಪ್ರಾಪ್ತವಾಗಿದೆ ಮತ್ತು ಅದರಿಂದ ಸದರಿ ಪ್ರದೇಶದ ಜನರಿಗೆ ಮೂರು ಬಗೆಯ ಅನುಕೂಲಗಳು ದೊರೆಯುತ್ತವೆ.

1. ಈ ಪ್ರದೇಶದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವ ಮತ್ತು ಯೋಜನೆ ಸಿದ್ಧಪಡಿಸುವ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಎಂಬ ಸಂವಿಧಾನಾತ್ಮಕ ಸಂಸ್ಥೆಯ ಸ್ಥಾಪನೆ. 2. ಶಿಕ್ಷಣಕ್ಷೇತ್ರದಲ್ಲಿ ಮತ್ತು ವೃತ್ತಿ ತರಬೇತಿಯಲ್ಲಿ





ಪ್ರವೇಶಕ್ಕೆ ಸಂಬಂಧಿಸಿದಂತೆ ಸದರಿ ಪ್ರದೇಶದ ಮಕ್ಕಳಿಗೆ ಸದರಿ ಪ್ರದೇಶದಲ್ಲಿ (ಪ್ರಾದೇಶಿಕ ಮೀಸಲಾತಿ) ಮತ್ತು ರಾಜ್ಯಮಟ್ಟದ ಸಂಸ್ಥೆಗಳಲ್ಲಿ (ರಾಜ್ಯಮಟ್ಟದ ಮೀಸಲಾತಿ) ಮೀಸಲಾತಿ 3. ಈ ಪ್ರದೇಶದ ಜನತೆಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಸದರಿ ಪ್ರದೇಶದಲ್ಲಿ (ಪ್ರಾದೇಶಿಕ ಮೀಸಲಾತಿ) ಮತ್ತು ರಾಜ್ಯಟಮಟ್ಟದ ಸಂಸ್ಥೆಗಳಲ್ಲಿ(ರಾಜ್ಯಮಟ್ಟದ ಮೀಸಲಾತಿ) ಮೀಸಲಾತಿ.

### ಕರ್ನಾಟಕ ಸರ್ಕಾರವು ಅನುಚ್ಛೇದ 371 ಜೆ ಅನುಷ್ಠಾನಕ್ಕೆ ತೆಗೆದುಕೊಂಡ ಕ್ರಮಗಳು

ಸಂವಿಧಾನದ ಅನುಚ್ಛೇದ 371 ಜೆ ಜಾರಿಗೆ ಬಂದ ಮೇಲೆ ಕರ್ನಾಟಕ ಸರ್ಕಾರವು ಅದರ ಅನುಷ್ಠಾನಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶಗಳು ಹೀಗಿವೆ:

1. ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆದೇಶ 2013. ಈ ಆದೇಶಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ರಚಿಸಿದೆ. ಈ ಮಂಡಳಿಗೆ ರಾಜ್ಯ ಸರ್ಕಾರವು 2013–2014 ರಿಂದ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ಮಂಡಳಿಯು ಸರ್ಕಾರವು ಬಿಡುಗಡೆ ಮಾಡಿದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಅನುಷ್ಠಾನಗೊಳಿಸುತ್ತದೆ.

2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ 2013. ಈ ಆದೇಶದ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ ಶಿಕ್ಷಣ ಸಂಸ್ಥೆಗಳು ಸದರಿ ಪ್ರದೇಶದವರಿಗೆ ಪ್ರವೇಶದಲ್ಲಿ ಶೇ70 ಮೀಸಲಾತಿ ನೀಡಬೇಕು.

3. ಕರ್ನಾಟಕ ಸಾರ್ವಜನಿಕ ಉದ್ಯೋಗ(ಹೈದರಾಬಾದ್ ಕರ್ನಾಟಕ

ಪ್ರದೇಶದಲ್ಲಿ ಉದ್ಯೋಗಗಳ ಮೀಸಲಾತಿ) ಆದೇಶ 2013. ಇದರ ಪ್ರಕಾರ ಸ್ಥಳೀಯ ವೃಂದ ರೂಪಿಸಬೇಕು ಮತ್ತು ಕೆಳಗೆ ನೀಡಿರುವ ಪ್ರಮಾಣದಲ್ಲಿ ವಿವಿಧ ಗುಂಪುಗಳಿಗೆ ಉದ್ಯೋಗಗಳಲ್ಲಿ ಮೀಸಲಾತಿ ನೀಡಬೇಕು.

ಅ). ಗುಂಪು. ಎ. ಕಿರಿಯ ಶ್ರೇಣಿ ಶೇ. 75

ಆ). ಗುಂಪು. ಬಿ. ಶೇ. 75

ಇ). ಗುಂಪು. ಸಿ. ಶೇ. 80

ಈ). ಗುಂಪು. ಡಿ. ಶೇ. 85

ಇದಲ್ಲದೆ ರಾಜ್ಯಮಟ್ಟದಲ್ಲಿನ ಕಚೇರಿಗಳಲ್ಲಿ ಅಥವಾ ಸಂಸ್ಥೆಗಳಲ್ಲಿ ಅಥವಾ ಉನ್ನತ ಸಂಸ್ಥೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ನಾಗರಿಕರಿಗೆ ಉದ್ಯೋಗದಲ್ಲಿ ಶೇ8 ಮೀಸಲಾತಿ.

4. ಕರ್ನಾಟಕ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳು(ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ 2013. ಈ ಆದೇಶದ ಪ್ರಕಾರ ಸ್ಥಳೀಯ ವಿಶ್ವವಿದ್ಯಾಲಯಗಳಲ್ಲಿ ಅಥವಾ ಪ್ರಥಮ ಅನುಸೂಚಿಯಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಹೈದರಾಬಾದ್ ಕರ್ನಾಟಕದ ಮಕ್ಕಳಿಗೆ ಪ್ರವೇಶದಲ್ಲಿ ಶೇ. 70 ಮೀಸಲಾತಿ ನೀಡಬೇಕು. ಇದಲ್ಲದೆ ರಾಜ್ಯವ್ಯಾಪ್ತಿ ವಿಶ್ವವಿದ್ಯಾಲಯಗಳಲ್ಲಿ ಅಥವಾ ರಾಜ್ಯವ್ಯಾಪ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಮಕ್ಕಳಿಗೆ ಪ್ರವೇಶದಲ್ಲಿ ಶೇ8 ಮೀಸಲಾತಿ ನೀಡಬೇಕು.

ಮೇಲಿನ ನಾಲ್ಕು ಆದೇಶಗಳ ಜೊತೆ ಮತ್ತೆರಡು ಆದೇಶಗಳನ್ನು ಹೊರಡಿಸಲಾಗಿದೆ.

1. ಕರ್ನಾಟಕ ಸಾರ್ವಜನಿಕ ಉದ್ಯೋಗ(ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉದ್ಯೋಗದಲ್ಲಿ ಮೀಸಲಾತಿ) (ಸ್ಥಳೀಯ ವೃಂದ ಸಂಘಟಿಸುವುದು, ನಿಯೋಜನೆ ಮತ್ತು ಉದ್ಯೋಗಿಗಳ ವರ್ಗಾವಣೆ) ಆದೇಶ 2013.

2. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉದ್ಯೋಗ ಮೀಸಲಾತಿ) (ಅರ್ಹತೆಯ ಪ್ರಮಾಣ ಪತ್ರಗಳನ್ನು ನೀಡುವುದನ್ನು ಕುರಿತು) ಆದೇಶ 2013.

**ಭಾಗ 3**

ಸಂವಿಧಾನದ ಅನುಚ್ಛೇದ 371 ಜೆ ಅಡಿಯಲ್ಲಿ ಸಾಧನೆ. ಈ ಸಂವಿಧಾನಾತ್ಮಕ ಕ್ರಮ ಜಾರಿಗೆ ಬಂದು ಮೂರು ವರ್ಷಗಳಾಗಿವೆ. ಈ ಕ್ರಮದಡಿಯಲ್ಲಿ ಸಾಧಿಸಿಕೊಂಡ ಸಾಧನೆಗಳ ಮೌಲ್ಯಮಾಪನಕ್ಕೆ ಕಾಲಾವಧಿಯು ಅತ್ಯಂತ ಕಡಿಮೆ. ಆದರೂ ಸದರಿ ಕ್ರಮದಡಿಯಲ್ಲಿ ಏನೆಲ್ಲ ಜನರಿಗೆ ಅನುಕೂಲಗಳ ಪ್ರಾಪ್ತವಾಗಿವೆ ಅನ್ನುವುದನ್ನು ಚರ್ಚಿಸಬಹುದು.

ಮೊದಲನೆಯದಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಮೀಸಲಾತಿಯು ಅನೇಕ ಕಾನೂನಾತ್ಮಕ ಅಡ್ಡಿಗಳ ನಡುವೆ ಅನುಷ್ಠಾನಗೊಳ್ಳುತ್ತಿದೆ. ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು ಸದರಿ ಕ್ರಮದ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಾವೆ.

ಎರಡನೆಯದಾಗಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಅನೇಕ ಕಾನೂನಾತ್ಮಕ ತೊಡಕುಗಳು ಎದುರಾಗಿವೆ. ಅವುಗಳ ನಿವಾರಣೆಗೆ ರಾಜ್ಯ ಸರ್ಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ.

ಮೂರನೆಯದಾಗಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2015–2016ನೆಯ ಸಾಲಿನ ಬಜೆಟ್ಟಿನಲ್ಲಿ ರೂ1000 ಕೋಟಿ ಅನುದಾನ ನೀಡಲಾಗಿದೆ.

ನಮ್ಮ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರ್ಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಕೇಂದ್ರ ಸರ್ಕಾರದ 'ಹಿಂದುಳಿದ ಪ್ರದೇಶ ಅನುದಾನ ನಿಧಿ (ಬಿ ಆರ್ ಜಿ ಎಫ್) ಎಂಬ ಯೋಜನೆಯು 2007–08ರಿಂದ ಜಾರಿಯಲ್ಲಿದೆ. ಈ ಯೋಜನೆಯಡಿಯಲ್ಲಿ ನಮ್ಮ ರಾಜ್ಯದ ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ (ಯಾದಗಿರಿ) ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ಅನುದಾನ ದೊರೆಯುತ್ತಿದೆ. ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯ ಶಿಫಾರಸ್ಸಿಗನುಗುಣವಾಗಿ ಸರ್ಕಾರವು ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007–08ರಿಂದ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಕಾಲಾವಧಿ 2014–2015ನೆಯ ಸಾಲಿಗೆ ಮುಗಿದಿದೆ. ಆದರೆ ಸಮಸ್ಯೆಯ



ತೀವ್ರತೆಯನ್ನು ಗಮನಿಸಿ ಸರ್ಕಾರವು ಸದರಿ ಯೋಜನೆಯನ್ನು ಮತ್ತೆ ನಾಲ್ಕು ವರ್ಷಗಳಿಗೆ ವಾರ್ಷಿಕ ರೂ3000 ಕೋಟಿ ಅನುದಾನದೊಂದಿಗೆ ಮುಂದುವರಿಸಿದೆ.

ಈ ಎಲ್ಲ ಯೋಜನೆಗಳು ಅನುಷ್ಠಾನಗೊಂಡಿದ್ದರೂ ನಮಗೆ ಪ್ರಾದೇಶಿಕ ಅಸಮಾನತೆಯನ್ನು ಪೂರ್ಣವಾಗಿ ತೊಡೆದು ಹಾಕುವುದು ಸಾಧ್ಯವಾಗಿಲ್ಲ. ನಮ್ಮ ರಾಜ್ಯದ ಅತ್ಯಂತ ಹಿಂದುಳಿದ ಕಲಬುರಗಿ ವಿಭಾಗದ ಆರು ಜಿಲ್ಲೆಗಳಿಗೆ ಸಂವಿಧಾನದ ಅನುಚ್ಛೇದ 371 ಜೆ ವರವಾಗಿ ಪರಿಣಮಿಸಿದೆ. ಈ ಕ್ರಮದಡಿಯಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ಅನುಷ್ಠಾನಗೊಳಿಸಬೇಕಾಗಿದೆ. ಈ ಪ್ರದೇಶದಲ್ಲಿನ ಅಭಿವೃದ್ಧಿ ಯೋಜನೆಯಗಳ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸಬೇಕಾಗಿದೆ. ಪ್ರಾದೇಶಿಕ ಅಸಮಾನತೆಗೆ ಮಹಿಳಾ ಮುಖವಿರುತ್ತದೆ. ಉದಾಹರಣೆಗೆ ರಾಜ್ಯಮಟ್ಟದಲ್ಲಿ 2011ರ ಜಣಗಣತಿ ಪ್ರಕಾರ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ68.08. ಆದರೆ ಕಲಬುರಗಿ ವಿಭಾಗದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ 54.53. ರಾಜ್ಯಮಟ್ಟದಲ್ಲಿ ಭೂರಹಿತ ಕೃಷಿ ಕಾರ್ಮಿಕರ ಪ್ರಮಾಣ ಶೇ25.64ರಷ್ಟಿದ್ದರೆ ಕಲಬುರಗಿ ವಿಭಾಗದಲ್ಲಿ ಅವರ ಪ್ರಮಾಣ ಶೇ 63.52 ರಷ್ಟಿದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶದ ಅಭಿವೃದ್ಧಿಗೆ ಅನುಚ್ಛೇದ 371 ಜೆ ವ್ಯಾಪ್ತಿಯನ್ನು ಮೀರಿ ಪ್ರಯತ್ನ ನಡೆಯಬೇಕಾಗುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸದರಿ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು ಮತ್ತು ಅನುಷ್ಠಾನದಲ್ಲಿರುವ ಅಭಿವೃದ್ಧಿ ಯೋಜನೆಗಳ ನಿರ್ವಹಣೆಯನ್ನು ಉತ್ತಮ ಪಡಿಸಬೇಕು. ಈ ಪ್ರದೇಶದಲ್ಲಿ ಮುಖ್ಯವಾಗಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಸಂತಾನೋತ್ಪತ್ತಿ ಹಕ್ಕುಗಳು, ಮಹಿಳಾ ಸಮಾನತೆ, ಮಕ್ಕಳ ಆರೋಗ್ಯ, ವಲಸೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳು ಮುಂತಾದ ಸಂಗತಿಗಳ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ. ❑

# ಹಿಂದುಳಿದ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಣದ ಸಮಸ್ಯೆ

* ಪ್ರೊ. ಓಂಕಾರ ಕಾಕಡೆ



ಹಿಂದುಳಿದ ಪ್ರದೇಶಗಳಲ್ಲಿ ಮಹಿಳೆಯರ ಶಿಕ್ಷಣ ಕುಂಠಿತಗೊಳ್ಳಲು ಹಲವಾರು ಕಾರಣಗಳಿವೆ. ಪ್ರಾಥಮಿಕ ಶಾಲಾ ಶಿಕ್ಷಣ ಮುಗಿದ ಕೂಡಲೇ ಬಹಳಷ್ಟು ಹೆಣ್ಣು ಮಕ್ಕಳು ಶಾಲೆಯನ್ನು ಬಿಟ್ಟು ಬಿಡುತ್ತಾರೆ. ಇದಕ್ಕೆ ಪ್ರಮುಖ ಕಾರಣ ಹೀಗೆ ಶಾಲೆ ಬಿಟ್ಟ ನಂತರ ಹೆಚ್ಚು ಹೆಣ್ಣು ಮಕ್ಕಳು ಕೆಲಸದಲ್ಲಿ ಭಾಗವಹಿಸಿದ್ದು ಮತ್ತು ಕಡಿಮೆ ವಯಸ್ಸಿನಲ್ಲಿಯೇ ಮದುವೆಯಾಗಿರುವುದು ಕಂಡುಬರುತ್ತದೆ.

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ನಮ್ಮ ನೀತಿ ನಿರೂಪಕರೆಲ್ಲರೂ ಮನಗಂಡಿರುವುದರಿಂದಲೇ ಇತ್ತೀಚಿನ ದಶಕಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ದೇಶದ ಜನರನ್ನು 'ಮಾನವ ಬಂಡವಾಳ'ವನ್ನಾಗಿ ಪರಿವರ್ತಿಸಲು ಶಿಕ್ಷಣ ಪ್ರಬಲ ಅಸ್ತ್ರ ಎಂಬುದರಲ್ಲಿ ಅನುಮಾನವೇ ಇಲ್ಲ. ಶಿಕ್ಷಿತ ಜನರು ದೇಶದ ಆಸ್ತಿ, ಅಭಿವೃದ್ಧಿಗೆ ಒಂದು ಸಾಧನ. ಶಿಕ್ಷಣ ಎಂಬುದನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ಜ್ಞಾನ, ದೃಷ್ಟಿಕೋನ, ಕೌಶಲ್ಯ. ಇದರಿಂದಾಗಿಯೇ ದೇಶದ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣದ ಸೌಲಭ್ಯ ಕಲ್ಪಿಸಬೇಕು ಎಂಬುದು ನಮ್ಮ ಸಂವಿಧಾನದ ಆಶಯ. ಅದಕ್ಕಾಗಿಯೇ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ನೀಡಬೇಕು ಎಂಬ ಕಾನೂನು ಕೂಡಾ ಇದೆ. ಆದರೆ ಸ್ವಾತಂತ್ರ್ಯ ಗಳಿಸಿ ಹಲವು ದಶಕಗಳೇ ಕಳೆದಿದ್ದರೂ ಅದು ಪ್ರತಿಶತ ಕಾರ್ಯಗತವಾಗಿಲ್ಲ. ಅಷ್ಟೇ ಅಲ್ಲ ಮಹಿಳೆಯರ ಶಿಕ್ಷಣದಲ್ಲಿ ಗಮನಾರ್ಹ ಸಾಧನೆ ಕೂಡಾ ಮಾಡಲು ಸಾಧ್ಯವಾಗಿಲ್ಲ. ಅದರಲ್ಲಿಯೂ ಹಿಂದುಳಿದ ಪ್ರದೇಶಗಳ ಮಹಿಳೆಯರ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು ಇನ್ನೂ ಕ್ಲಿಷ್ಟಕರವಾಗಿವೆ. ಇದಕ್ಕೆ ಕಾರಣಗಳು ಹಲವಾರು. ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಗತಿಗಳು ಪ್ರಮುಖವಾಗಿ ನಿರೀಕ್ಷಿತ ಪ್ರಮಾಣದಲ್ಲಿ ಹಿಂದುಳಿದ ಪ್ರದೇಶಗಳ ಮಹಿಳೆಯರಲ್ಲಿ ಶೈಕ್ಷಣಿಕ ಪ್ರಗತಿ ಸಾಧಿಸಲು ಅಡ್ಡಿಯಾಗಿವೆ. ಅನಕ್ಷರತೆ, ಬಡತನದಿಂದಾಗಿ ಕುಂಠಿತಗೊಂಡಿರುವ ಮಹಿಳೆಯರ ಶಿಕ್ಷಣ ಅವಕಾಶಗಳನ್ನು ಸೃಷ್ಟಿಸುವುದು ಒಂದು ಬಹು ದೊಡ್ಡ ಸವಾಲಿನ ಕೆಲಸವಾಗಿದೆ.

ಮಹಬೂಬ್ ಉಲ್–ಹಕ್ ಅವರು ಪ್ರತಿಪಾದಿಸಿದ ಮಾನವ ಸಂಪನ್ಮೂಲ ಅಭಿವೃದ್ಧಿಯ ಪರಿಕಲ್ಪನೆ ವ್ಯಾಪಕವಾಗಿ ಅನುಷ್ಠಾನಕ್ಕೆ ಬಂದಾಗಿನಿಂದ ಅಭಿವೃದ್ಧಿಯ ವ್ಯಾಖ್ಯಾನವೇ ಬದಲಾಗಿದೆ. ಮಾನವ ಅಭಿವೃದ್ಧಿಯ ಮುಖ್ಯ ಸೂಚಕಗಳೆಂದರೆ: ಆರೋಗ್ಯ, ಶಿಕ್ಷಣ, ಆದಾಯ. ಒಳ್ಳೆಯ ಜೀವನದ ಗುಣಮಟ್ಟವನ್ನು ಪಡೆಯಲು ಈ ಮೂರು ಮೂಲಭೂತ ಮಾನವ ಚಿಂತನೆಗಳು ಅವಶ್ಯ. ದೀರ್ಘಾಯುಷ್ಯ ಹಾಗೂ ಹೆಚ್ಚು ಕಾಲ ಮತ್ತು ಆರೋಗ್ಯಕರವಾದ ಜೀವನ ನಡೆಸುವ ಸಾಮರ್ಥ್ಯ, ಕುಶಲತೆ ಮತ್ತು ಜ್ಞಾನ ಪಡೆಯುವ ಅವಕಾಶಗಳು ಹಾಗೂ ಆದಾಯ ಗಳಿಕೆ, ಸಂಪನ್ಮೂಲಗಳ ಮೇಲಿನ ನಿಯಂತ್ರಣ, ಇವಿಷ್ಟು ಸುಲಭವಾಗಿ ದೊರೆಯುವ ವಾತಾವರಣ ಸೃಷ್ಟಿಯಾದರೆ ಅಭಿವೃದ್ಧಿ ಮತ್ತು ಸಂತೋಷಕರ ಜೀವನ ಪಡೆಯುವ ಅವಕಾಶಗಳು ತಾವಾಗಿಯೇ ಅನುಸರಿಸುತ್ತವೆ ಎಂಬುದು ಮಹಬೂಬ್ ಉಲ್–ಹಕ್ ಅವರ ಪ್ರತಿಪಾದನೆ. ಈ ಹಿನ್ನೆಲೆಯಲ್ಲಿ ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ.

### ಮೂರು ಹಂತಗಳ ಶಿಕ್ಷಣ

ಸಾಮಾನ್ಯವಾಗಿ ಶಿಕ್ಷಣವು ಮೂರು ಹಂತಗಳಲ್ಲಿ ರಚನೆಯಾಗಿದ್ದು, ಮೊದಲನೆಯ ಹಂತದಲ್ಲಿ ಪ್ರಾಥಮಿಕ ಶಿಕ್ಷಣ, ಎರಡನೆಯ ಹಂತದಲ್ಲಿ ಮಾಧ್ಯಮಿಕ ಶಿಕ್ಷಣ ಮತ್ತು ಮೂರನೆಯ ಹಂತದಲ್ಲಿ ಉನ್ನತ ಶಿಕ್ಷಣ. ಇತ್ತೀಚಿನ ಕೆಲವು ವರ್ಷಗಳಲ್ಲಿ, ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಆರೋಗ್ಯಕರ ಬೆಳವಣಿಗೆಗಳು ಆಗಿವೆ. ಭಾರತದ ನಾಗರಿಕರಿಗೆ ಮೂಲಭೂತ ಹಕ್ಕಾಗಿ ಈಗ 'ಶಿಕ್ಷಣ ಹಕ್ಕು ಕಾಯಿದೆ'ಯು

* ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

ಜಾರಿಯಾಗಿದೆ. ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬದ್ಧವಾಗಿವೆ. ಇದಕ್ಕಾಗಿ ಸರ್ಕಾರವು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಧ್ಯಾಹ್ನದ ಬಿಸಿಯೂಟ, ಉಚಿತ ಸೈಕಲ್ ವಿತರಣೆ, ಶಿಷ್ಯವೇತನಗಳಂತಹ ಹಲವಾರು ಯೋಜನೆಗಳನ್ನು ಪರಿಚಯಿಸಿದೆ. ಈ ಯೋಜನೆಗಳ ಫಲವಾಗಿ ಒಂದಷ್ಟು ಶೈಕ್ಷಣಿಕ ಪ್ರಗತಿ ಕಾಣುತ್ತಿದೆಯಾದರೂ ಮಹಿಳೆಯರ ಶಿಕ್ಷಣದಲ್ಲಿ ಗಮನಾರ್ಹ ಬದಲಾವಣೆ ಕಾಣುತ್ತಿಲ್ಲ. ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಸಮಗ್ರ ದೃಷ್ಟಿಕೋನದಿಂದ ನೋಡಬೇಕಾಗಿದೆ. ಶಿಕ್ಷಣವೆಂದರೆ ಜೀವನ ಮುಖಿಯಾಗಿದ್ದು, ಅದು ಒಬ್ಬ ಮಹಿಳೆಯ ವ್ಯಕ್ತಿತ್ವದ ವಿವಿಧ ಮುಖಗಳನ್ನು ಬೆಳೆಸುವ ಮತ್ತು ಪ್ರೌಢಗೊಳಿಸುವ ಶಕ್ತಿಯಾಗಿದ್ದು, ಮಹಿಳಾ ಶಿಕ್ಷಿತಳನ್ನಾಗಿ ಮಾಡುವುದಲ್ಲದೆ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತದೆ. ಭಾರತದ ಜನತೆಯನ್ನು ಎಚ್ಚರಗೊಳಿಸುವ ಸಲುವಾಗಿ ಮೊದಲು ಮಹಿಳೆಯರನ್ನು ಜಾಗೃತಗೊಳಿಸಬೇಕಾಗಿದೆ. ಅವರು ಒಮ್ಮೆ ಜಾಗೃತಗೊಂಡರೆ ಇಡೀ ಹಳ್ಳಿ ಚಲಿಸುತ್ತದೆ. ಅದು ಕೊನೆಗೆ ದೇಶವನ್ನೆ ಚಲನಗೊಳಿಸುತ್ತದೆ. ಯಾವುದೇ ಸಮಾಜದ ಮನೋಭಾವದ ಬದಲಾವಣೆಯ ಸೂಚನಾ ಫಲಕವು ಕುಟುಂಬವಾಗಿರುತ್ತದೆ. ಆದ್ದರಿಂದ ನಮ್ಮ ಅತ್ಯುತ್ತಮ ಪ್ರಯತ್ನಗಳು ಮಹಿಳೆಯರ ಪರಿಕಲ್ಪನೆ ಮತ್ತು ಮನೋಭಾವದ ಬದಲಾವಣೆಯ ಕಡೆಗೆ ಇರಬೇಕಾಗುತ್ತದೆ. ಇದಕ್ಕಾಗಿ ಮೊಟ್ಟ ಮೊದಲಿಗೆ ತಾಯಿಯನ್ನು ಗುರಿಯಾಗಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಆಕೆಯು ಮಕ್ಕಳ ಮನೋಭಾವದ ಗತಿಯನ್ನು ನಿರ್ಧರಿಸುತ್ತಾಳೆ. ತನ್ನ ಮಕ್ಕಳನ್ನು ಶಾಲೆಗೆ ಕಳುಹಿಸುವುದರಿಂದಾಗುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಮಹತ್ವವನ್ನು ಶಿಕ್ಷಿತ ಮಹಿಳೆ ಮನವರಿಕೆ ಮಾಡಿಕೊಳ್ಳುವುದರಿಂದ ಶಿಕ್ಷಣದ ವಿಸ್ತಾರದ ವೇಗ ಹೆಚ್ಚಾಗಲು ಕಾರಣಳಾಗುತ್ತಾಳೆ.

### ಆಶಾದಾಯಕವಲ್ಲದ ಸಾಕ್ಷರತೆ ಬೆಳವಣಿಗೆ

ಭಾರತದಲ್ಲಿ ಮಹಿಳೆಯರ ಔಪಚಾರಿಕ ಶಿಕ್ಷಣ ಒಂದು ಶತಮಾನಕ್ಕೂ ಹಿಂದೆಯೇ ಪ್ರಾರಂಭವಾಯಿತು. ಸಾಮಾಜಿಕ ಸುಧಾರಣೆಗಳು ಹೆಣ್ಣು ಮಕ್ಕಳ ಶಿಕ್ಷಣವು ಒಂದು ಪ್ರಮುಖ ಗುರಿಯೆಂದು ಭಾವಿಸಿದ್ದವು. ಇಷ್ಟು ಪ್ರಯತ್ನಗಳು ನಡೆದರೂ ಸಹ ಮಹಿಳೆಯ ಸಾಕ್ಷರತೆಯ ಸುಧಾರಣೆಯು ಅಷ್ಟು ಆಶಾದಾಯಕವಾಗಿಲ್ಲ. ಸ್ವಾತಂತ್ರ್ಯದ ನಂತರ ಸಾಕ್ಷರತೆಯು ಸಾಕಷ್ಟು ಸುಧಾರಣೆಗೊಂಡಿತು. ಪ್ರತಿ ದಶಕದಲ್ಲೂ ಮಹಿಳೆಯರ ಸಾಕ್ಷರತೆಯು ಹೆಚ್ಚುತ್ತಿದೆ. ಆದರೆ ನಿರಂತರವಾಗಿ ಅವರ ಸಾಕ್ಷರತೆಯು ಪುರುಷರ ಸಾಕ್ಷರತೆಗಿಂತ ಕಡಿಮೆಯಾಗಿಯೇ ಇದೆ. ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ ಪುರುಷರ ಸಾಕ್ಷರತೆಯ ಪ್ರಮಾಣ ಶೇಕಡ 82.85ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ 68.13ರಷ್ಟಿದೆ. ಕರ್ನಾಟಕದ ಹಿಂದುಳಿದ ಜಿಲ್ಲೆ ಮತ್ತು ತಾಲ್ಲೂಕುಗಳ ಸಾಕ್ಷರತಾ ಪ್ರಮಾಣವನ್ನು ಗಮನಿಸಿದಾಗ ಈ ಅಂತರ ಇನ್ನೂ ಹೆಚ್ಚಿರುವುದು ಕಂಡು ಬರುತ್ತದೆ. ರಾಜ್ಯದ ಹಿಂದುಳಿದ ಜಿಲ್ಲೆಗಳ ಪೈಕಿ ಒಂದಾಗಿರುವ ವಿಜಯಪುರ ಜಿಲ್ಲೆಯ ಸಾಕ್ಷರತೆಯ ಪ್ರಮಾಣವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಪುರುಷರ ಸಾಕ್ಷರತೆಗೆ ಹೋಲಿಸಿದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆ ಮಟ್ಟದಲ್ಲಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 2011ರ ಜನಗಣತಿಯ ಪ್ರಕಾರ ವಿಜಯಪುರ ತಾಲ್ಲೂಕು ಮಹಿಳಾ ಸಾಕ್ಷರತೆಯಲ್ಲಿ ಶೇ.63.59ರಷ್ಟನ್ನು ದಾಖಲಿಸಿ ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಮುದ್ದೇಬಿಹಾಳ ಶೇ.55.61, ಇಂಡಿ ಶೇ.53.32, ಬಸವನ ಬಾಗೇವಾಡಿ ಶೇ.54.24 ಮತ್ತು ಸಿಂದಗಿ ಶೇ.50.49 ರಷ್ಟನ್ನು ದಾಖಲಿಸಿದೆ. ರಾಜ್ಯದ ಮಹಿಳಾ ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದಾಗ ವಿಜಯಪುರ ಮತ್ತು ಅದರ ಎಲ್ಲ ತಾಲ್ಲೂಕುಗಳು ಅತ್ಯಂತ ಕಡಿಮೆ ದಾಖಲಿಸಿರುವುದನ್ನು ನೋಡಬಹುದು. ಶಿಕ್ಷಣದ ವಿಷಯಕ್ಕೆ ಬಂದಾಗ ಎಲ್ಲಾ ಜಾತಿ, ವರ್ಗಗಳಲ್ಲೂ ಪುರುಷರಿಗೆ ಶಿಕ್ಷಣ ನೀಡಿದ ಅನಂತರವೇ ಮಹಿಳೆಯರ ಶಿಕ್ಷಣದ ಬಗೆಗೆ ಯೋಚಿಸುವುದು ಕಂಡುಬರುತ್ತದೆ. ನಗರಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಿದರೂ ಗ್ರಾಮಗಳಲ್ಲಿ ಈ ವಾತಾವರಣ ಕಂಡುಬರುವುದಿಲ್ಲ. ಬದಲಿಗೆ ಕೃಷಿ ಕೆಲಸಕ್ಕೆ ತಮ್ಮ ಮಕ್ಕಳನ್ನು ಬಳಸಿಕೊಳ್ಳುವುದು ಸಾಮಾನ್ಯ. ಕೃಷಿಕರ ಮನೆಯ ಮಕ್ಕಳು ಕೃಷಿ ಕೆಲಸದಲ್ಲಿ ಭಾಗವಹಿಸುತ್ತಲೇ ಶಿಕ್ಷಣ ಪಡೆಯಬೇಕಾದ ಪರಿಸ್ಥಿತಿಯಿದೆ. ಎರಡನ್ನೂ ಒಟ್ಟೊಟ್ಟಿಗೆ ನಿರ್ವಹಿಸಲಾಗದ



ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಭೂಹಿಡುವಳಿದಾರರ ಮನೆಯ ಪರಿಸ್ಥಿತಿ ಈ ರೀತಿ ಇರುವಾಗ ಕೃಷಿಕಾರ್ಮಿಕರ ಮಕ್ಕಳ ಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ ಎಂದು ವಿಜಯಪುರ ಜಿಲ್ಲಾ ಮಾನವ ಅಭಿವೃದ್ಧಿ ವರದಿ 2014 ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

### ಕಾರಣಗಳು

ಹಿಂದುಳಿದ ಪ್ರದೇಶಗಳಲ್ಲಿ ಮಹಿಳೆಯರ ಶಿಕ್ಷಣ ಕುಂಠಿತಗೊಳ್ಳಲು ಹಲವಾರು ಕಾರಣಗಳಿವೆ. ಪ್ರಾಥಮಿಕ ಶಾಲಾ ಶಿಕ್ಷಣ ಮುಗಿದ ಕೂಡಲೇ ಬಹಳಷ್ಟು ಹೆಣ್ಣು ಮಕ್ಕಳು ಶಾಲೆಯನ್ನು ಬಿಟ್ಟು ಬಿಡುತ್ತಾರೆ. ಇದಕ್ಕೆ ಪ್ರಮುಖ ಕಾರಣ ಹೀಗೆ ಶಾಲೆ ಬಿಟ್ಟ ನಂತರ ಹೆಚ್ಚು ಹೆಣ್ಣು ಮಕ್ಕಳು ಕೆಲಸದಲ್ಲಿ ಭಾಗವಹಿಸಿದ್ದು ಮತ್ತು ಕಡಿಮೆ ವಯಸ್ಸಿನಲ್ಲಿಯೇ ಮದುವೆಯಾಗಿರುವುದು ಕಂಡುಬರುತ್ತದೆ. ಸಾಮಾನ್ಯ ವರ್ಗದ ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ವಿಶೇಷವಾಗಿ ಪರಿಶಿಷ್ಟ ಜಾತಿ/ವರ್ಗಗಳ ಹೆಣ್ಣು ಮಕ್ಕಳ ಶಿಕ್ಷಣವು ಹೆಚ್ಚು ಮುಂದುವರೆಯದೇ ಇರುವುದು ಕಳವಳವನ್ನುಂಟು ಮಾಡುವ ಸಂಗತಿಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಹೆಚ್ಚಿನ ಕುಟುಂಬಗಳಲ್ಲಿ ಗಂಡು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಊರಿಗೆ ಹತ್ತಿರದಲ್ಲಿ ಶಾಲೆಗಳು ಇಲ್ಲದಿರುವಿಕೆ, ಹಲವು ಶಾಲೆಗಳಿಗೆ ನಿಯಮಿತವಾಗಿ ಅಧ್ಯಾಪಕರು ಬಾರದಿರುವಿಕೆ, ಶಾಲೆಗಳಲ್ಲಿ ಶೌಚಾಲಯಗಳಿಲ್ಲದಿರುವುದು, ಪಾಲಕರ ಅಜ್ಞಾನ, ನಿರಾಸಕ್ತಿ, ಬಡತನ, ಬಾಲ್ಯ ವಿವಾಹ ಮುಂತಾದ ಸಂಗತಿಗಳು ಮಹಿಳಾ ಶಿಕ್ಷಣದ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿವೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ರಾಜ್ಯದಲ್ಲಿ 6 ರಿಂದ 17 ವರ್ಷದ ಗಂಡು ಮತ್ತು ಹೆಣ್ಣು ಮಕ್ಕಳು ಶಾಲೆಗೆ ಹೋಗದೇ ಇರಲು ಕಾರಣವೇನೆಂಬುದನ್ನು ಅಭ್ಯಸಿಸಿದಾಗ ಯಾವಾಗಲೂ ಶಾಲೆಗೆ ಹೋಗದಿರುವವರ ಪೈಕಿ ಹೆಚ್ಚಿನ ಹೆಣ್ಣು ಮಕ್ಕಳು ಮನೆಗೆಲಸ (ಶೇ.24) ಮತ್ತು ಶಿಕ್ಷಣದಲ್ಲಿ ಆಸಕ್ತಿ ಇಲ್ಲ

(ಶೇ.19) ಮತ್ತು ಶಿಕ್ಷಣದ ಅವಶ್ಯಕತೆ ಇಲ್ಲ (ಶೇ.14) ಎಂಬ ಕಾರಣಗಳನ್ನು ತಿಳಿಸಿದ್ದಾರೆ. ಅರ್ಧಕ್ಕೆ ಶಾಲೆ ಬಿಡಲು ಏನು ಕಾರಣ ಎಂದು ಈ ಹೆಣ್ಣು ಮಕ್ಕಳು ಸಮೀಕ್ಷೆಯಲ್ಲಿ ಪಟ್ಟಿ ಮಾಡಿದ್ದಾರೆ. ಈ ಪೈಕಿ ಮುಖ್ಯವಾಗಿ ತಮ್ಮ/ತಂಗಿಯರನ್ನು ನೋಡಿಕೊಳ್ಳಬೇಕು (ಶೇ.35) ಶಿಕ್ಷಣದ ಅವಶ್ಯಕತೆ ಇಲ್ಲ (ಶೇ.16) ಮತ್ತು ಪುನಃ ಪುನಃ ಅನುತ್ತೀರ್ಣ (ಶೇ.10) ರಾಗಿರುವುದು ಅರ್ಧಕ್ಕೆ ಶಾಲೆ ಬಿಡಲು ಕಾರಣ ಎಂದು ಹೇಳಿದ್ದಾರೆ. ಅಲ್ಲದೇ 17 ವರ್ಷಕ್ಕೆ ಮುಂಚೆಯೇ ಮದುವೆ ಆಗಿರುವ ಹೆಣ್ಣು ಮಕ್ಕಳು (ಶೇ.6.3) ಶಾಲೆಯನ್ನು ಬಿಟ್ಟಿರುವುದು ಈ ಸಮೀಕ್ಷೆಯಲ್ಲಿ ಕಂಡು ಬಂದಿದೆ. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿರಲು ಲಿಂಗಭೇದವು ಪ್ರಮುಖ ಕಾರಣವಾಗಿದ್ದರೆ, ಶಾಲೆಗಳು ಬಹಳ ದೂರದಲ್ಲಿರುವುದು, ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ಸರಿಯಾದ ಕಟ್ಟಡ, ಕುಡಿಯುವ ನೀರು, ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿಲ್ಲದಿರುವುದು ಇತರ ಕಾರಣಗಳಾಗಿವೆ.

### ಮನೆ ಮತ್ತು ಕೆಲಸದ ಹೊಣೆಗಾರಿಕೆಗಳು

ಗ್ರಾಮಾಂತರ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಡುವುದಕ್ಕೆ ಪ್ರಮುಖ ಕಾರಣ ಅವರು ಕಿರಿಯ ವಯಸ್ಸಿನಲ್ಲಿಯೇ ತಮ್ಮ ಮನೆಗಳಲ್ಲಿ ಕಸಗುಡಿಸುವ, ಮುಸುರೆ ಪಾತ್ರೆಗಳನ್ನು ತೊಳೆಯುವ ಕೆಲಸಗಳನ್ನು ಮಾಡಬೇಕಾಗುತ್ತದೆ. ಮನೆಯ ಇತರೆ ಕೆಲಸ ಕಾರ್ಯಗಳ ಜೊತೆಗೆ ಎಳೆ ಮಕ್ಕಳನ್ನು ನೋಡಿಕೊಳ್ಳಬೇಕಾಗುತ್ತದೆ. ಹಲವು ಮಕ್ಕಳು ಕಡ್ಡಾಯವಾಗಿ ಹಣಕ್ಕಾಗಿ ಅಥವಾ ಹಣವಿಲ್ಲದೆ ಕೆಲಸ ಮಾಡಬೇಕಾಗುತ್ತದೆ. ಗಂಡು ಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಕೆಲಸಗಳಿಗೆ ಹೋಗುತ್ತಾರೆ. ಬಾಲ ಕಾರ್ಮಿಕರ ಬಗ್ಗೆ ನಡೆಸಿದ ಅಧ್ಯಯನಗಳು ಹಲವಾರು ಕುಟುಂಬಗಳು ಬದುಕಿ ಉಳಿಯುವಲ್ಲಿ ತಮ್ಮ ಹೆಂಗಸರು ಮತ್ತು ಮಕ್ಕಳ ದುಡಿಮೆಯ ಮೇಲೆ ಅವಲಂಬಿಸಿವೆ ಎಂದು ತಿಳಿಸಿವೆ.

### ಬಾಲ್ಯ ವಿವಾಹ

ಮಹಿಳಾ ಶಿಕ್ಷಣವು ವಿವಾಹ ವಯಸ್ಸಿನ ಮೇಲೆ ಅವಲಂಬಿಸಿದೆ. ಚಿಕ್ಕ ವಯಸ್ಸಿನಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದರೆ ಅವರು ಶಿಕ್ಷಣ ಮುಂದುವರೆಸುವುದು ಅಸಾಧ್ಯವಾಗುತ್ತದೆ. ಮೇಲ್ವರ್ಗಗಳ ಮತ್ತು ಮಧ್ಯಮ ವರ್ಗಗಳ ಹೆಣ್ಣು ಮಕ್ಕಳು ಹೆಚ್ಚು ವಿದ್ಯಾವಂತರಾಗಿದ್ದರೆ ಅವರಿಗೆ ವಿವಾಹದ ಸಂದರ್ಭದಲ್ಲಿ ತುಂಬಾ ಬೇಡಿಕೆಯಿದೆ. ಆದ್ದರಿಂದ ಆ ವರ್ಗಗಳು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ವರ ಸಿಗುವುದು ಕಷ್ಟವಾದ್ದರಿಂದ ಬಡವರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಹಿಂಜರಿಯುತ್ತಾರೆ.

### ಸಂಕುಚಿತ ಮನೋಭಾವ

ಮಹಿಳೆಯರನ್ನು ಹೊರಗೆ ಉದ್ಯೋಗ ಮಾಡಲು ಕಳುಹಿಸಬಾರದು ಎಂಬ ಗ್ರಾಮೀಣ ಜನರ ಸಂಕುಚಿತ ಮನೋಭಾವ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹಿಂದೇಟು ಹಾಕಲು ಒಂದು ಪ್ರಮುಖ ಕಾರಣವಾಗಿದೆ. ಮಹಿಳೆ ಉದ್ಯೋಗಕ್ಕೆ ಹೋದರೆ ಮನೆ ನಿಭಾಯಿಸುವವರು ಯಾರು? ಮಕ್ಕಳ ಲಾಲನೆ-ಪಾಲನೆ ಯಾರು ಮಾಡಬೇಕು? ಒಂದು ಮನೆಯಲ್ಲಿ ಗಂಡ-ಹೆಂಡತಿ ಇಬ್ಬರೂ ಉದ್ಯೋಗಕ್ಕೆ ಹೋದರೆ ಮನೆ ನಿಭಾಯಿಸುವುದು ಕಷ್ಟ. ಹೀಗಾಗಿ ಹೆಣ್ಣು ಮಗಳು ಕಲಿತು ಸಾಧಿಸುವುದೇನಿದೆ ಎಂಬ ಧೋರಣೆ ಮಹಿಳಾ ಶಿಕ್ಷಣಕ್ಕೆ ದೊಡ್ಡ ಅಡ್ಡಿಯಾಗಿದೆ.

### ಮಹಿಳಾ ಕಾಲೇಜುಗಳ ಅಲಭ್ಯತೆ

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಗ್ರಾಮಾಂತರ ಪ್ರದೇಶ/ಹಿಂದುಳಿದ ಪ್ರದೇಶಗಳಲ್ಲಿ ಪ್ರತ್ಯೇಕ ಶಾಲೆಗಳನ್ನು ಅರಂಭಿಸದೇ ಇರುವುದು ಕೂಡಾ ಒಂದು ದೊಡ್ಡ ಸಮಸ್ಯೆಯಾಗಿದೆ. ವಿಶೇಷವಾಗಿ ಕಾಲೇಜು ಶಿಕ್ಷಣ ಮುಂದುವರೆಸಲು ಹೆಣ್ಣುಮಕ್ಕಳನ್ನು ಕಳುಹಿಸುವಾಗ ಪಾಲಕರು ಮಹಿಳಾ ಕಾಲೇಜುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಆದರೆ ರಾಜ್ಯದಲ್ಲಿ ಮಹಿಳಾ ಕಾಲೇಜುಗಳ ಸಂಖ್ಯೆ ಅತ್ಯಂತ ಕಡಿಮೆ. ಅದೂ ಈ ಮಹಿಳಾ ಕಾಲೇಜುಗಳು ಹೆಚ್ಚಾಗಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಕೇಂದ್ರೀಕೃತವಾಗಿವೆ. ಹಿಂದುಳಿದ ಜಿಲ್ಲೆಗಳಲ್ಲಿಯಂತೂ ಮಹಿಳಾ ಕಾಲೇಜುಗಳ ಸಂಖ್ಯೆ ತೀರಾ ಕಡಿಮೆ. ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ ಕೇವಲ 106 ಮಹಿಳಾ ಕಾಲೇಜುಗಳಿವೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿರುವ ಮಹಿಳಾ ಕಾಲೇಜುಗಳಿಗೆ ಗ್ರಾಮಾಂತರ



ಪ್ರದೇಶಗಳ ಹೆಣ್ಣುಮಕ್ಕಳು ಬಸ್ ಮತ್ತಿತರ ವಾಹನಗಳಲ್ಲಿ ಪ್ರಯಾಣಿಸಿ ಪ್ರವೇಶ ಪಡೆಯಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಪಾಲಕರು ಹೆಣ್ಣುಮಕ್ಕಳ ಕಾಲೇಜು ಶಿಕ್ಷಣ ಮುಂದುವರಿಕೆಗೆ ಆಸಕ್ತಿ ತೋರದಿರುವುದು ಕಂಡು ಬರುತ್ತದೆ. ಸಹ ಶಿಕ್ಷಣ ಪದ್ಧತಿಯಿಂದ ಹೆಚ್ಚು ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗುವುದಕ್ಕೆ ಮತ್ತು ಅವರ ತಾಯಿ ತಂದೆಗಳು ಸಹ ಅವರನ್ನು ಶಾಲೆಗೆ ಕಳುಹಿಸುವುದಕ್ಕೆ ಹಿಂಜರಿಯುತ್ತಾರೆ.

### ಮೂಲ ಸೌಲಭ್ಯಗಳ ಕೊರತೆ

ಸರ್ಕಾರದ ಹೆಚ್ಚಿನ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಅಧ್ಯಾಪಕರಿಗೆ ಪಕ್ಕಾ ಕಟ್ಟಡಗಳು, ಕುಡಿಯುವ ನೀರು, ವಾಹನ ಸೌಕರ್ಯ ಮತ್ತು ಶೌಚಾಲಯಗಳ ಕೊರತೆಯ ಕಾರಣದಿಂದ ಇವರು ಗ್ರಾಮಗಳಿಗೆ ಹೋಗಿ ಬೋಧನಾ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಕರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದರಿಂದಲೇ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಆದರೆ ಹಿಂದುಳಿದ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಕರ ಸಂಖ್ಯೆ ಕಡಿಮೆ ಇರುವುದೂ ಕೂಡಾ ಹೆಣ್ಣುಮಕ್ಕಳ ಶಿಕ್ಷಣ ಕುಂಠಿತಗೊಳ್ಳಲು ಕಾರಣವಾಗಿದೆ.

### ವಿಶೇಷ ಗಮನ ನೀಡದಿರುವುದು

ಗ್ರಾಮಾಂತರ ಪ್ರದೇಶ/ಹಿಂದುಳಿದ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಪ್ರಮಾಣ ಹೆಚ್ಚಿಸುವಲ್ಲಿ ಮತ್ತು ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸುವ ನಿಟ್ಟಿನಲ್ಲಿ ವಿಶೇಷ ಪ್ರಯತ್ನಗಳನ್ನು ನಡೆಸದೇ ಇರುವುದು ಕಂಡು ಬಂದಿದೆ. ಈ ಪ್ರದೇಶಗಳ ಹೆಣ್ಣುಮಕ್ಕಳು ಅತ್ಯಂತ ಕಠಿಣ ಪರಿಸ್ಥಿತಿ ಎದುರಿಸುವವರಾಗಿತ್ತಾರೆ.

**(51ನೇ ಪುಟಕ್ಕೆ)**

# ಉತ್ತರ ಕರ್ನಾಟಕದ ವಿಶೇಷತೆಗಳು

* ಪ್ರೊ. ಛಾಯಾ ದೇಗಾಂವಕರ



ಕಲ್ಯಾಣ ಕರ್ನಾಟಕ ನಾಡು ಇಂದು ಬಡತನ, ಅನಭಿವೃದ್ಧಿಯಿಂದ ಬಳಲುತ್ತಿದೆ. ಬರದಿಂದ ರೈತರು ಸಂತ್ರಸ್ತರಾಗಿದ್ದಾರೆ. ಇವೆಲ್ಲ ಮಧ್ಯದಲ್ಲಿಯೂ ಜನರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಬಡತನದಲ್ಲಿಯೂ ತಮ್ಮ ಆದರಾತಿಥ್ಯ ಹಾಗೂ ನಿಸ್ವಾರ್ಥತೆಯನ್ನು ಕಾಪಾಡಿಕೊಂಡಿದ್ದಾರೆ.

ಉರಿಯುತ್ತಿರುವ ಬಿಸಿಲಿನಲ್ಲಿ ಹೊಲಗಳಲ್ಲಿ ಬೆವರು ಸುರಿಸುತ್ತ ಕಾಯಕವೇ ಕೈಲಾಸವೆಂದು ದುಡಿಯುತ್ತಿರುವ ಶ್ರಮಜೀವಿ ಜನರನ್ನು ನೋಡಿದಾಗ ಇದು ಗುಲಬರ್ಗಾ ಅಥವಾ ರಾಯಚೂರ ಇರಬಹುದೆಂದು ಖಚಿತವಾಗಿ ಹೇಳಬಹುದು. ಉತ್ತರ ಕರ್ನಾಟಕ ಅದರಲ್ಲಿಯೂ ಹೈದರಾಬಾದ ಕರ್ನಾಟಕದ ವಿಶೇಷತೆ ಎಂದರೆ ಕಡುಬಿಸಿಲು. ಇಲ್ಲಿರುವ ಎರಡು ಋತುಗಳೆಂದರೆ ಬಿಸಿಲು ಮತ್ತು ಕಡುಬಿಸಿಲು.

**ಭೂಮಿಯ ವಿಶೇಷಗಳು**

ಈ ಭೂಮಿಯು ಕಪ್ಪು ಮಣ್ಣಿನಿಂದ ಕೂಡಿದ ಬಯಲು ಪ್ರದೇಶ ಮತ್ತು ವಿಸ್ತಾರವಾದ ಪ್ರಸ್ಥಭೂಮಿಯಾಗಿದೆ. ಸಮುದ್ರ ಮಟ್ಟದಿಂದ ಸರಾಸರಿ 365 ರಿಂದ 610 ಮೀ.ಗಳಷ್ಟು ಎತ್ತರದಲ್ಲಿದೆ. ಅಲ್ಲಲ್ಲಿ ಚಿಕ್ಕ ಗುಡ್ಡಗಳು ಕಂಡುಬರುತ್ತವೆ. ಅವುಗಳಲ್ಲಿ ನರಗುಂದ ಬೆಟ್ಟ, ಪರಸಗಡ ಗುಡ್ಡ, ಇಳಕಲ್ ಗುಡ್ಡ ಪ್ರಮುಖವಾಗಿವೆ. ಬೀದರ್, ವಿಜಯಾಪುರ, ಕಲಬುರಗಿ, ಯಾದಗಿರಿ, ಗದಗ, ಕೊಪ್ಪಳ, ರಾಯಚೂರು, ಬಳ್ಳಾರಿ, ಹಾವೇರಿ, ಬಾಗಲಕೋಟೆ ಹಾಗೂ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳು ಉತ್ತರದ ಮೈದಾನದಲ್ಲಿವೆ. ಬೇಸಿಗೆಯಲ್ಲಿ ಅಧಿಕ ಉಷ್ಣಾಂಶವಿರುವುದರಿಂದ ಇದಕ್ಕೆ 'ಬಿಸಿಲ ನಾಡು' ಎನ್ನುವರು.

**ವಾಯುಗುಣ**

ಉತ್ತರ ಕರ್ನಾಟಕದ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬೇಸಿಗೆಯಲ್ಲಿ ಹೆಚ್ಚು ಬಿಸಿಲಿರುತ್ತದೆ. ಕಡುಬೇಸಿಗೆ ಮತ್ತು ವರ್ಷದ ಉದ್ದಕ್ಕೂ ಒಣ ಹವೆ, ಕಡಿಮೆ ಮಳೆ, ತೀವ್ರವಾದ ಚಳಿ ಇಲ್ಲಿಯ ಹವಾಮಾನದ ಸಾಮಾನ್ಯವಾದ ಲಕ್ಷಣಗಳಾಗಿವೆ. ಆದರೆ ಬೀದರ ತಂಪು ಮತ್ತು ಹಿತಕರವಾದ ವಾಯುಗುಣವನ್ನು ಹೊಂದಿದ್ದು. ಈ ವಿಭಾಗದ ಅತಿ ಹೆಚ್ಚು ಮಳೆ ಪಡೆಯುವ ಜಿಲ್ಲೆಯಾಗಿದೆ. ಕೊಪ್ಪಳ ಜಿಲ್ಲೆಯು ಈ ವಿಭಾಗದ ಅತಿ ಕಡಿಮ ಮಳೆ ಪಡೆಯುವ ಜಿಲ್ಲೆಯಾಗಿದೆ.

**ನದಿಗಳು :** ಈ ವಿಭಾಗದ ಮುಖ್ಯ ನದಿಗಳೆಂದರೆ ಕೃಷ್ಣಾ ಭೀಮಾ, ಮುಲ್ಲಾಮಾರಿ, ಬೆಣ್ಣೆತೊರೆ, ತುಂಗಭದ್ರಾ, ಹತ್ತಿನಾಲಾ, ಸಿಂಧನೂರನಾಲಾ, ಹಿರೇಹಳ್ಳ ನಾಲಾ ಮಸ್ಕಿ ನಾಲಾ, ಕನಕಗಿರಿ ನಾಲಾ, ಚುಳಕಿನಾಲಾ, ಗಂಡೇರಿ ಮತ್ತು ಮಾಂಜರಾಗಳಾಗಿವೆ. ಕೃಷ್ಣಾ ನದಿಯು ಈ ವಿಭಾಗದಲ್ಲಿ ಛಾಯಾ ಭಾಗವತಿ ಎಂಬ ಸ್ಥಾನದಲ್ಲಿ ಏಳು ಧಾರೆಗಳ ಜಲಪಾತವನ್ನುಂಟು ಮಾಡಿದೆ. ಇದು ರಾಯಚೂರು ಜಿಲ್ಲೆಯಲ್ಲಿದೆ.

ಕಾರಂಜಾ ಜಲಾಶಯವು ಬೀದರ್ ಜಿಲ್ಲೆಯ ಕೃಷಿಕರಿಗೆ ವರದಾನವಾಗಿರುವುದು. ಕಾರಂಜಾ ನದಿಯು ಮಾಂಜರಾ ನದಿಯ ಉಪನದಿಯಾಗಿದೆ. ಈ ನದಿಯು ಆಂಧ್ರಪ್ರದೇಶದ ಕೋಹಿರ್ ಎಂಬ ಗ್ರಾಮದ ಬಳಿ ಉಗಮವಾಗಿ ಕರ್ನಾಟಕದ ಭಂಗೂರು ಗ್ರಾಮದ ಹತ್ತಿರ ಪ್ರವೇಶಿಸಿ ಮಂಜರಾ ನದಿ ಸೇರುತ್ತವೆ. ಈ ಜಲಾಶಯದಿಂದ ತಾಲೂಕಿನ ಬಹುತೇಕ ಗ್ರಾಮಗಳು ನೀರಾವರಿ ಸೌಲಭ್ಯ ಪಡೆದಿವೆ. ತುಂಗಭದ್ರಾ ಯೋಜನೆಯು ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ. ಬಳ್ಳಾರಿ ಜಿಲ್ಲೆ ಹೊಸಪೇಟೆ ಬಳಿ ಮಲ್ಲಾದೂರ ಎಂಬಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು

* ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ನಿರ್ಮಿಸಲಾಗಿದೆ. ಈ ಜಲಾಶಯವನ್ನು ಪಂಪಸಾಗರ ಎಂದು ಕರೆಯುತ್ತಾರೆ. ನೀರಾವರಿ ಮತ್ತು ಜಲವಿದ್ಯುತ್ತನ್ನು ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಇದು ಆಂಧ್ರಪ್ರದೇಶ ಮತ್ತು ಕರ್ನಾಟಕ 5.5 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಒದಗಿಸುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯು ಕರ್ನಾಟಕದ ದೊಡ್ಡ ನೀರಾವರಿ ಯೋಜನೆಯಾಗಿದೆ. ಇದು ಬಾಗಲಕೋಟಿ, ಬಿಜಾಪುರ, ಕಲಬುರಗಿ, ರಾಯಚೂರು, ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಮತ್ತು ಕುಡಿಯುವ ನೀರಿನ ಯೋಜನೆಯಾಗಿದೆ.

ಬಿಜಾಪುರ ಜಿಲ್ಲೆ ಆಲಮಟ್ಟಿ ಬಳಿ ಕೃಷ್ಣಾ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಆಲಮಟ್ಟಿ ಅಣೆಕಟ್ಟನ್ನು ಲಾಲಬಹದ್ದೂರ ಶಾಸ್ತ್ರೀ ಜಲಾಶಯ ಎಂದು ಕರೆಯುತ್ತಾರೆ. ಕೃಷ್ಣಾ ನದಿಗೆ ನಾರಾಯಣಪುರದಲ್ಲಿ ಅಣೆಕಟ್ಟು ನಿರ್ಮಿಸಲಾಗಿದೆ. ಇದಕ್ಕೆ ಬಸವ ಸಾಗರ ಜಲಾಶಯ ಎನ್ನುವರು. ಇದು 6.47 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸಾಲಭ್ಯ ಒದಗಿಸುತ್ತಿದೆ ಹಾಗೂ ಇತ್ತೀಚೆಗೆ ಇಲ್ಲಿ ಜಲವಿದ್ಯುತ್ ಉತ್ಪಾದಿಸಲಾಗುತ್ತಿದೆ.

### ಮಣ್ಣು ಹಾಗೂ ಬೆಳೆಗಳು

ಕೆಂಪು ಮಣ್ಣು, ಕಪ್ಪು ಮಣ್ಣು ಮತ್ತು ಮರಳು ಮಿಶ್ರಿತ ಜಿಗೀಮಣ್ಣು ಇಲ್ಲಿ ವ್ಯಾಪಕವಾಗಿ ಹರಡಿವೆ. ಅದರಿಂದಾಗಿ ಬೀದರ ಮತ್ತು ಗುಲಬರ್ಗಾ ಭಾಗದಲ್ಲಿ ಕಬ್ಬನ್ನು ನೀರಾವರಿಯಿಂದ ಬೆಳೆಯುತ್ತಾರೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ಹಾಗೂ ಗಂಗಾವತಿ ಭತ್ತದ ಬೆಳೆಗೆ ಪ್ರಸಿದ್ಧವಾಗಿದೆ. ಇಲ್ಲಿನ ಸೋನಾಮಸೂರಿ ಅಕ್ಕಿ ಹೆಸರನ್ನು ಪಡೆದಿದೆ. ಒಣ ಬೇಸಾಯದ ಬೆಳೆಗಳಾದ ಜೋಳ, ಸಜ್ಜೆ, ಶೇಂಗಾ, ಹತ್ತಿ, ಮತ್ತು ಬೇಳೆಕಾಳುಗಳನ್ನು ಇಲ್ಲಿ ಬೆಳೆಯಲಾಗುತ್ತವೆ. ಗುಲ್ಬರ್ಗಾ ವಿಭಾಗವು ತೊಗರಿ ಉತ್ಪಾದನೆಯಲ್ಲಿ ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ. ಇದನ್ನು ಕರ್ನಾಟಕದ ತೊಗರಿಯ ಕಣಜ ಎಂದು ಹೇಳುತ್ತಾರೆ. ಕೃಷಿ ಜನರ ಮುಖ್ಯ ಉದ್ಯೋಗವಾಗಿದೆ. ಕೃಷಿ ಕಾರ್ಮಿಕರ ಪ್ರಮಾಣ ಅಧಿಕವಾಗಿದೆ.

### ಅರಣ್ಯ ಸಂಪತ್ತು

ಈ ವಿಭಾಗದಲ್ಲಿ ಕಾಡು ಕಡಿಮೆಯಿದ್ದರೂ ಕೆಲವು ಭಾಗದಲ್ಲಿ ತೇಗ, ಬೇವು ಕರಿಮರ, ಕೆಂಪು ಜಾಲಿ, ಸೀಗೆ, ಹೊನ್ನೆ, ಹುಣಸೆ ಮುಂತಾದ ಗಿಡಗಳು ಬೆಳೆಯುತ್ತವೆ. ಅಂತರ್ಜಲ ಮುಕ್ತವಾಗಿ ಹರಿಯುವುದಕ್ಕೆ ಬೀದರ ಜಿಲ್ಲೆ ಪ್ರಸಿದ್ಧವಾಗಿದೆ. ನಾನಕ ಝರಾ, ನರಸಿಂಹ ಝರಾಗಳನ್ನು ಉದಾಹರಣೆಯಿ ಹೆಸರಿಸಬಹುದಾಗಿದೆ. ಝರಾ ಎಂದರೆ ನೀರಿನ ತೊರೆ ಎಂದು ಅರ್ಥ.

### ಉದ್ದಿಮೆ ಮತ್ತು ಉದ್ಯೋಗಗಳು

ಉತ್ತರ ಕರ್ನಾಟಕದಲ್ಲಿ ಕಂಡು ಬರುವ ಪ್ರಮುಖ ಕೈಗಾರಿಕೆಗಳೆಂದರೆ, ಉಕ್ಕು, ಸಕ್ಕರೆ, ಪೆಟ್ರೋಕೆಮಿಕಲ್ಸ್, ವಿದ್ಯುತ್ ಉತ್ಪಾದನೆ, ಕಬ್ಬಿಣದ ಅದಿರು, ಸಿಮೆಂಟ್, ಚಿನ್ನದ ಗಣಿ ಮತ್ತು ಬಟ್ಟೆ. ಸಣ್ಣ ಕೈಗಾರಿಕೆಗಳಲ್ಲಿ ಕೈಮಗ್ಗ, ಕಿನ್ನಾಳದ ಗೊಂಬೆಗಳು, ಬೀದರದ 'ಬಿದರಿ ಕಲೆ' ಜಗತ್ಪ್ರಸಿದ್ದವಾಗಿದೆ. ಹೂದಾನಿ, ಆಭರಣ ಪೆಟ್ಟಿಗೆ, ಬಳೆಗಳು, ಮುಂತಾದವುಗಳನ್ನು ತಯಾರಿಸಲಾಗುತ್ತದೆ. ಬಿದರಿ ಕಲಾಕೃತಿಗಳಿಗೆ ದೇಶ ವಿದೇಶಗಳಲ್ಲಿ ಬೇಡಿಕೆ ಇದೆ.

### ಉಡುಪು, ಆಹಾರ ಮತ್ತು ವಸತಿ

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಗಂಡಸರು ಧೋತ್ರ ಅಂಗಿ ಮತ್ತು ಟೊಪ್ಪಿಗೆಯನ್ನು ಧರಿಸುತ್ತಾರೆ. ಇವುಗಳ ಬಣ್ಣವು ಬಿಳಿಯಾಗಿರುತ್ತದೆ. ಹಿರಿಯರು ದೊಡ್ಡದಾದ ರೇಷ್ಮೆಯ ಪಟಕಾ (ಪೇಟ)ವನ್ನು ತಲೆಗೆ ಸುತ್ತಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ತಲೆಯ ಮೇಲೆ ಸೆರಗನ್ನು ಹೊದ್ದುಕೊಂಡು ಸೀರೆ ಉಡುತ್ತಾರೆ. ಅಲ್ಲದೆ ಮಹಾರಾಷ್ಟ್ರದ ಪ್ರಭಾವ ಇರುವ ಬೀದರ್‌ದ ಕೆಲವು ಭಾಗದಲ್ಲಿ ಹೆಣ್ಣು ಮಕ್ಕಳು ಕಚ್ಚೆ ಸೀರೆಯನ್ನು ಉಡುವ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಂಡಿದ್ದಾರೆ. ಇಳಕಲ್ಲಿನ ಕೈಮಗ್ಗದ ರೇಷ್ಮೆ ಸೀರೆಗಳು ಸಮಾರಂಭದ ಸೊಗಸು ಹೆಚ್ಚಿಸುತ್ತವೆ. ಇವುಗಳ ಬಣ್ಣಗಳು ಹಾಗೂ ರಂಗಸಂಗತಿಯು ಮನಮೋಹಕವಾಗಿರುತ್ತದೆ.

ಬೆಳಗಾವದ ಶಹಾಪುರ ದಡಿ ಅಂಚಿನ ಸೀರೆಗಳು ಕೂಡ ಅಕರ್ಷಕ ವಾಗಿರುತ್ತವೆ. ಇವುಗಳ ಮೇಲೆ ಕಸೂತಿ ಮಾಡಲಾಗುತ್ತದೆ. ಧಾರವಾಡದ ಕಸೂತಿ ನಾಜೂಕ ಇರುತ್ತದೆ. ಸೀರೆಗಳ ಮೇಲೆ ಕಸೂತಿ ಕೆಲಸ ಮಾಡುವುದು ಇಲ್ಲಿನ ಕಸಬು. ಮುಸ್ಲಿಂ ಮಹಿಳೆಯರು ಕಾಮದಾನಿ, ಎಂಬ್ರಾಯಡರಿ ಕೆಲಸ ಮಾಡುತ್ತಾರೆ. ಇದರಲ್ಲಿ ಟಿಕಲಿ, ಮಿಂಚು ಮುಂತಾದವನ್ನು ಉಪಯೋಗಿಸಿ ಸೀರೆಯನ್ನು ಆಕರ್ಷಕವಾಗಿ ಕಾಣುವಂತೆ ಮಾಡುತ್ತಾರೆ. ಬೀದರ, ಕಲಬುರಗಿಯಲ್ಲಿ ಈ ಕೆಲಸ ನಡೆಯುತ್ತದೆ. ವಿವಿಧ ಜಾತಿಯ ಜನರು ವಿವಿಧ ಉಡುಪುಗಳನ್ನು ಧರಿಸುತ್ತಾರೆ. ಲಂಬಾಣಿ ಹೆಣ್ಣುಮಕ್ಕಳು ಲಂಗಾ, ಕುಪ್ಪಸ ಹಾಗೂ ದಾವಣಿಯನ್ನು ಉಡುತ್ತಾರೆ. ಇವುಗಳ ಮೇಲೆ ಸಣ್ಣ ಕನ್ನಡಿಗಳನ್ನು ಹಚ್ಚಿರುತ್ತಾರೆ. ದಾವಣಿಯ ಮೇಲೆ ಮುಖದ ಭಾಗದಲ್ಲಿ ರೂಪಾಯಿಯ ಬಿಲ್ಲೆಗಳನ್ನು ಹಚ್ಚಿರುತ್ತಾರೆ.



### ಊಟ – ಉಪಚಾರಗಳು

ಉತ್ತರ ಕರ್ನಾಟಕದ ಊಟದಲ್ಲಿಯೂ ವೈವಿಧ್ಯತೆ ಇದೆ. ಊಟ ತಯಾರಿಸುವುದರಲ್ಲಿ ಮಹಿಳೆಯರ ಅಧಿಕ ಸಮಯ ವ್ಯಯವಾಗುತ್ತದೆ. ನಿತ್ಯದ ಊಟದಲ್ಲಿ ಜೋಳದ ರೊಟ್ಟಿ ಮತ್ತು ಕಾಳು ಪಲ್ಲೆ, ಕೆಂಪು ಚಟ್ನಿ ಅಥವಾ ಶೇಂಗಾ ಚಟ್ನಿ ಇರುತ್ತದೆ. ಮಹಾರಾಷ್ಟ್ರದ ಪ್ರಭಾವವಿರುವ ಗಡಿ ಸೀಮೆಯಲ್ಲಿ ಝುಣಕ ಭಾಕರ ಅಂದರೆ ಹಿಟ್ಟಿನಪಲ್ಲೆ (ಜುಣಕ) ಕೂಡ ಇರುತ್ತದೆ. ರೊಟ್ಟಿ ಇಡಲು ಬಿದರಿನ ಬುಟ್ಟಿ ಇರುತ್ತದೆ. ರೊಟ್ಟಿ ಬಡೆಯುವುದೊಂದು ಕಸಬು. ಇವು ಪಾಪಡ ಹಾಗೆ ತೆಳ್ಳಗಿರುತ್ತವೆ. ಬಿಸಿ ರೊಟ್ಟಿಯ ರುಚಿಯೆ ಬೇರೆ. ಕಟಿಯಾದ ರೊಟ್ಟಿ ಹಾಗೂ ಶೇಂಗಾಹಿಂಡಿಯ ರುಚಿಕೂಡ ಅಧಿಕ. ಕಾಯಿ ದಿನಸಿಗಿಂತಲೂ ಪಲ್ಲೆಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ.

ಸಪ್ಪಸಗಿ, ಮೆಂತೆಪಲ್ಲೆ, ರಾಜಗಿರಿ ಪಲ್ಲೆ ಇರುತ್ತದೆ. ಪುಂಡಿಪಲ್ಲ್ಯೆಗೆ ವಿಶೇಷವಾದ ಸ್ಥಾನವಿದೆ. ರೊಟ್ಟಿ ಹಾಗೂ ಪುಂಡಿಪಲ್ಲ್ಯೆ ಊಟ ವಿಶೇಷ ಊಟವಾಗಿರುತ್ತದೆ. ಬದನೆಕಾಯಿ ಪಲ್ಲ್ಯೆ ಕೂಡ ವಿಶೇಷವಾಗಿದೆ. ತುಂಬಗಾಯಿ ಬದನೆಕಾಯಿ ವಿಶೇಷ ರುಚಿಯನ್ನು ಹೊಂದಿರುತ್ತದೆ. ಆಗಾಗ ಸಜ್ಜೆ ರೊಟ್ಟಿಗಳು ಊಟದಲ್ಲಿ ಕಾಣುತ್ತವೆ.



ಸಜ್ಜೆ ರೊಟ್ಟಿ ಕೂಡ ಜನಪ್ರಿಯವಾಗಿವೆ. ಇನ್ನೊಂದು ರುಚಿಕರ ಪದಾರ್ಥವೆಂದರೆ ಗಟ್ಟಿ ಬೇಳೆ. ಹಳ್ಳಿಗಳಲ್ಲಿ ಊಟದ ಜೊತೆಗಿರುವ ಉಳ್ಳಾಗಡ್ಡಿ, ಸೌತೆಕಾಯಿ ಊಟದ ರುಚಿಯನ್ನು ಹೆಚ್ಚಿಸುತ್ತವೆ. ಜೋಳದ ಕಡಬುಗಳು ಎಳ್ಳಮಾವಾಸ್ಯೆಯ ಊಟದಲ್ಲಿ ಕಾಣುತ್ತವೆ. ಹಳ್ಳಿಯ ಮದುವೆ ಇರಲಿ ಅಥವಾ ಪಟ್ಟಣದಲ್ಲಿ ಮದುವೆ ಇರಲಿ ಮದುವೆ ಊಟದಲ್ಲಿ ಜೋಳದ ರೊಟ್ಟಿ ಹಾಗೂ ಸಜ್ಜೆ ರೊಟ್ಟಿ ಇರಲೇ ಬೇಕು. ಅಡಿಗೆಯಲ್ಲಿ ಉಳ್ಳಾಗಡ್ಡಿ ಹಾಗೂ ಬಳ್ಳೊಳ್ಳಿ ವ್ಯಾಪಕವಾಗಿ ಬಳಸುತ್ತಾರೆ. ಇದು ಆರೋಗ್ಯಕರ ಕೂಡ ಹೌದು.

ಊಟ ಸಾಮಾನ್ಯವಾಗಿ ಖಾರವಾಗಿರುತ್ತದೆ. ಹಬ್ಬದ ದಿನಗಳಲ್ಲಿ ಹೋಳಿಗೆ ಊಟ ಇರುತ್ತದೆ. ಇದರ ಜೊತೆಗಿರುವ ಬದನಿಕಾಯಿ ಪಲ್ಯ ಹಾಗೂ ಕಟ್ಟಿನ ಸಾರು ರುಚಿಕರವಾಗಿರುತ್ತದೆ. ಕರಿದ ಸಂಡಗಿ ಅಥವಾ ಹಪ್ಪಳಗಳು ಕೂಡ ಇರುತ್ತವೆ. ಬೇಸಿಗೆಯ ಉರಿ ಬಿಸಿಲಿನಲ್ಲಿ ಇಡೀ ವರ್ಷಕ್ಕೆ ಬೇಕಾಗುವ ಸಂಡಿಗೆ ಹಪ್ಪಳಗಳನ್ನು ತಯಾರಿಸಿ ಸಂಗ್ರಹಿಸಲಾಗುತ್ತದೆ. ಮನೆಗೆ ಬಂದ ಅತಿಥಿಗಳಿಗೆ ಹೋಳಿಗೆ ಊಟ ಹಾಕಿ ಉಪಚರಿಸಲಾಗುತ್ತದೆ. ಮದುವೆ ಗಟ್ಟಿ ಮಾಡುತ್ತಿರುವಾಗ ಹೋಳಿಗೆ ಊಟ ಮಾಡಿಸಲಾಗುತ್ತದೆ. "ಹೋಳಿಗೆ ಉಂಡು ಬಂದಿದ್ದೇವೆ" ಎಂದರೆ ಮದುವೆ ಗಟ್ಟಿಯಾಗಿದೆ ಎಂದು ಅರ್ಥ. ಆಹಾರದಲ್ಲಿ ಅಕ್ಕಿಯ ಪ್ರಮಾಣ ಕಡಿಮೆ ಇರುತ್ತದೆ. ಆದರೆ ಈ ವಿಭಾಗದ ರಾಯಚೂರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಜನರು ಅಕ್ಕಿಯನ್ನು ಊಟದಲ್ಲಿ ವ್ಯಾಪಕವಾಗಿ ಬಳಸುತ್ತಾರೆ.

ಧಾರವಾಡದ ಠಾಕುರ ಪೆಡಾಗಳು, ಗೋಕಾಕದ ಕರದಂಟು. ಕಲಬುರಗಿಯ ಮಾಲಪುರಿ ಸವಿಯಲು ರುಚಿಕರವಾಗಿವೆ. ಕಲಬುರಗಿ ತಾಲೂಕಿನ ಕಮಲಾಪುರದ ಕೆಂಪು ರಸಬಾಳೆಹಣ್ಣು ಬೆಳೆಯುವ ಕೇಂದ್ರ. ಇದು ಒಂದು ಅಪರೂಪದ ತಳಿ, ಬಣ್ಣ, ರುಚಿ, ಗಾತ್ರ ಎಲ್ಲಾ ರೀತಿಯಿಂದಲೂ ವಿಶೇಷವಾದುದು. ಕೊಪ್ಪಳ ಜಿಲ್ಲೆ ಕುಷ್ಟಗಿಯ ದಾಳಿಂಬೆ ಹಣ್ಣುಗಳ ಉತ್ಪಾದನೆಗೆ ತುಂಬಾ ಪ್ರಸಿದ್ಧವಾಗಿದೆ. ವಿಜಯಪುರವು ದ್ರಾಕ್ಷಿ ಹಣ್ಣಿಗಾಗಿ ಪ್ರಸಿದ್ಧವಿದೆ.

**ವಸತಿ**

ಮಣ್ಣಿನ ಗೋಡೆಗಳಿದ್ದ ಮನೆಗಳು. ಗುಡಿಸಲುಗಳು ಹಳ್ಳಿಗಳಲ್ಲಿ ಸಾಮಾನ್ಯ. ಗಚ್ಚಿನ ಮನೆಗಳ ಸಂಖ್ಯೆ ಈಗ ಹೆಚ್ಚುತ್ತಿದೆ. ಇವುಗಳನ್ನು ಒಂದಕ್ಕೊಂದು ಹತ್ತಿಕೊಂಡಂತೆ ಕಟ್ಟಿರುತ್ತಾರೆ. ಇದರಿಂದ ಅಲ್ಲಿಯ ಪ್ರಬಲವಾದ ಬಿಸಿಲನ್ನು ತಡೆದುಕೊಳ್ಳಲು ಸಾಧ್ಯವಾಗುತ್ತವೆ. ಪರಸ್ಪರ ಸೌಹಾರ್ದತೆಯೂ ಸೂಚಿಸುತ್ತದೆ.

ಕುಟುಂಬಗಳ ಹೆಸರುಗಳು ಅಥವಾ ಅಡ್ಡಹೆಸರುಗಳು ವಿವಿಧ ಮೂಲಗಳಿಂದ ಬಂದಿರುತ್ತವೆ. ಆಹಾರ ಪದಾರ್ಥಗಳು– ಉಳ್ಳಾಗಡ್ಡಿ, ಬಳ್ಳೊಳ್ಳಿ, ಕೊತಂಬರಿ ಮೆಣಸಿನಕಾಯಿ (ಇವೆಲ್ಲವು ಊಟದ ಮುಖ್ಯ ಅಂಶಗಳು) – ಮನೆಯ ಗಾತ್ರ ಹಾಗೂ ನಿವೇಶನ – ದೊಡ್ಡಮನಿ, ಅಗಸಿ ಮುಂದಿನ, ನಡುವಿನ ಮನಿ, ಹಿಂದಿನ ಮನಿ, ಮುಂದಿನ ಮನಿ – ವೃತ್ತಿಸ್ವರೂಪ – ಬಡಿಗೇರ, ಗಾಣಗೇರ, ಕಂಬಾರ ಬಟ್ಟಿಗಳು – ರೇಶ್ಮೆ – ಹಳ್ಳಿಗಳ ಹೆಸರುಗಳು – ಬಬಲಾದಿ, ಬಾಗಲವಾಡ, ಧಾರವಾಡಕರ, ನರಗುಂದ, ಕಲಬುರ್ಗಿ – ವ್ಯಕ್ತಿಯ ಸ್ಥಾನ – ಪಾಟೀಲ, ಕುಲಕರ್ಣಿ ಮುಂತಾದವುಗಳು. ಇಲ್ಲಿನ ನಗರಗಳು ಸಾಂಪ್ರದಾಯಿಕತೆ ಹಾಗೂ ಆಧುನಿಕತೆಗಳು ಕೂಡಿವೆ. ಹಳ್ಳಿಯಿಂದ ನಗರಕ್ಕೆ ವಲಸೆ ಬಂದ ಕುಟುಂಬಗಳು ಆಧುನಿಕ ಜೀವನ ಅನುಸರಣೆ ಮಾಡುತ್ತಿದ್ದಾರೆ.

**ಆಡುವ ಭಾಷೆ**

ಜನರು ಆಡುವ ಭಾಷೆಯು ಒರಟಾಗಿದೆ. ಅದು ವಿವಿಧ ಭಾಷೆಗಳಿಂದ ಕೂಡಿದೆ. ಅದರಲ್ಲಿಯೂ ಬೀದರ, ಕಲಬುರಗಿ ಭಾಷೆ ಬೇರೆ ಮತ್ತು ಧಾರವಾಡ ಕಡೆ ಭಾಷೆ ಬೇರೆಯಾಗಿದೆ.

ಈ ಭಾಗದ ಭಾಷೆಯ ಮೇಲೆ ಮರಾಠಿ, ಉರ್ದು ಹಾಗೂ ತೆಲುಗು ಭಾಷೆಯ ಪ್ರಭಾವ ಕಂಡುಬರುತ್ತದೆ, ಶಬ್ದಗಳ ಉಚ್ಚಾರ ಭಿನ್ನವಾಗಿದೆ, ಕೆಲವು ಉದಾಹರಣೆಗಳು ಇಲ್ಲಿವೆ. 'ಮಳೆ ಬರಾಖತ್ಯಾದ' ಎಂದರೆ ಮಳೆ ಬರುತ್ತಿದೆ. ಬಹಳ ಇದೆ ಅನ್ನುವುದಕ್ಕೆ 'ಬಕ್ಕಳ' ಅಥವಾ 'ಮನಾರ' ಇದೆ; ಬರುತ್ತಿದ್ದೇನೆ ಎಂದರೆ 'ಬರಾಖತಿನಿ'. ಅವಳ ಮೇಲೆ ಕರುಣೆ ಏಕೆ? ಅನ್ನುವುದಕ್ಕೆ 'ಅವಳ ಮ್ಯಾಗ ಕರುಣೆ ಯಾಕ?' ಇಪ್ಪತ್ತೈದುಗೆ 'ಪಂಚವಿಸ' ಮತ್ತು ಮುಕ್ಕಾಲ ಘಂಟೆ ಎಂದರೆ ಪಾವುಣ ಘಂಟಾ' 'ಜರಾ ಕುಡ್ತಿನಿ' 'ಊಟ ಆಗ್ಯಾದ' 'ಮುಂದಕ ನಡಿ', 'ದಾರು ಬಂದಾರ ಖುನಾ ಇಲ್ಲ' ಇವು ಭಾಷೆಯ ವೈವಿಧ್ಯತೆಗಳು.

**ಸಾಹಿತ್ಯ, ಸಂಗೀತ ಕಲೆ ಸಂಸ್ಕೃತಿ**

ಕನ್ನಡ ಕಾವ್ಯ ಪರಂಪರೆ ಆದಿಕವಿ ಪಂಪನಿಂದ ಪ್ರಾರಂಭವಾಗುತ್ತದೆ. ಪಂಪ, ಪೊನ್ನ ಹಾಗೂ ರನ್ನ ಈ ಮೂರು ಕಾವ್ಯರತ್ನಗಳು ಇಲ್ಲಿ ಮೆರೆದರು. ಶ್ರೀವಿಜಯನ 'ಕವಿರಾಜಮಾರ್ಗ' ಇಲ್ಲಿ ಉದ್ಭವಿಸಿತು. ವಚನ ಸಾಹಿತ್ಯ ಒಂದು ಸಮೃದ್ಧ ಸಾಹಿತ್ಯ. ವಚನ ಸಾಹಿತ್ಯದ ಕೇಂದ್ರಬಿಂದು ಬೀದರ ಆಗಿತ್ತು. ಈ ವಚನ ಸಾಹಿತ್ಯದ ಚಳವಳಿ ಬೀದರ, ಗುಲಬರ್ಗಾ ರಾಯಚೂರದ ಸುತ್ತಮುತ್ತ ಬೆಳೆಯಿತು, ಬಸವಣ್ಣ, ಅಲ್ಲಮಪ್ರಭು. ದಾಸಿಮಯ್ಯಾ, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದ ಶರಣರು ಈ ಸಾಹಿತ್ಯವನ್ನು ರಚಿಸಿದರು. ಇದು ಜೀವನದ ಅನುಭವಗಳಿಂದ ಮೂಡಿಬಂದಿದೆ.

ರಾಯಚೂರ ಜಿಲ್ಲೆಯು ದಾಸ ಸಾಹಿತ್ಯದ ಕೊಡುಗೆಯನ್ನು ನೀಡಿದೆ. ವ್ಯಾಸರಾಯರು, ಪುರಂದರದಾಸರು

ಬಳ್ಳಾರಿ ಹಾಗೂ ರಾಯಚೂರ ಜಿಲ್ಲೆಗಳಲ್ಲಿ ಜನರ ಆಚಾರ ವಿಚಾರಗಳಲ್ಲಿ ಕ್ರಾಂತಿಕಾರಿ ಬದಲಾವಣೆ ಮೂಡಿಸಿದರು. ಮಡಿ, ಮೈಲಿಗೆಗಳ ಕಲ್ಪನೆಗಳನ್ನು ತೊಡೆದು ಹಾಕಿದರು. ಹಾಸ್ಯಬ್ರಹ್ಮರೆಂದು ಪ್ರಸಿದ್ಧರಾದ 'ಬೀಚಿ' ಇಲ್ಲಿ ಜನಿಸಿದರು. 'ಕಾವ್ಯಾನಂದ' ಎಂದು ಖ್ಯಾತಿ ಪಡೆದ ಸಿದ್ದಯ್ಯಾ ಪುರಾಣಿಕ ಕೊಪ್ಪಳ ಜಿಲ್ಲೆಯಲ್ಲಿ ಜನಿಸಿದರು. ಸಂಗೀತದಲ್ಲಿ ಇಲ್ಲಿನ ಜಾನಪದ ಗೀತೆಗಳಿಗೆ ತಮ್ಮದೆ ಆದ ಸೌಂದರ್ಯವಿದೆ. ಇವುಗಳಲ್ಲಿ ಬದುಕಿನ ಸಾರ ತುಂಬಿದೆ. ಇದು ಸಾಮಾನ್ಯ ಜನರ ಸಂಗೀತವಾಗಿದೆ.

ಗುಲಬರ್ಗಾದ ಎಸ್ ಎಂ ಪಂಡಿತರು ಕಲೆ ಕ್ಷೇತ್ರದಲ್ಲಿ ಖ್ಯಾತರಾಗಿದ್ದಾರೆ. ಕೊಪ್ಪಳ ಜಿಲ್ಲೆಗೆ ದೊಡ್ಡಾಟಕ್ಕೆ ಸಂಬಂಧಿಸಿದಂತೆ ಉಜ್ವಲ ಪರಂಪರೆ ಇದೆ. ಡೊಳ್ಳು ಕುಣಿತ, ಹಲಿಗೆ ವಾದ್ಯ, ಬುಡುಬುಡಿಕೆ, ತಂಬುರಿ ಮುಂತಾದ ವಾದ್ಯಗಳು ಇಲ್ಲಿನ ಆಕರ್ಷಣೆಗಳು.

**ಪ್ರವಾಸಿ ತಾಣಗಳು**

ಇದು ಬಿಸಿಲು ಹಾಗೂ ಒಣ ಪ್ರದೇಶವಾದರೂ ಹಲವಾರು ಆಕರ್ಷಕ ಪ್ರವಾಸಿ ತಾಣಗಳನ್ನು ಹೊಂದಿದೆ. ಬೀದರದ ಗುರು ನಾನಕ ಝರಾ ಝರಣಿ ನರಸಿಂಹ ಪ್ರಸಿದ್ಧ ಧಾರ್ಮಿಕ ಸ್ಥಾನಗಳಾಗಿವೆ. ಬೀದರದ ಕೋಟೆ, ಮಹಮ್ಮದ ಗವಾನ ಮದರಸಾ ಐತಿಹಾಸಿಕ ತಾಣಗಳಾಗಿವೆ.

ಬಸವ ಕಲ್ಯಾಣದಲ್ಲಿರುವ ಅನುಭವ ಮಂಟಪ ಶರಣರ ಸ್ಥಾನವಾಗಿದೆ. ಕಲಬುರಗಿ ನಗರದಲ್ಲಿರುವ ಶರಣಬಸವೇಶ್ವರ ದೇವಾಲಯವು ಸುಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಖಾಜಾ ಬಂದೇನವಾಜ ದರ್ಗಾ ಸಂತ ಸುಫಿಯವರ ಸ್ಥಾನವಾಗಿದೆ. ಅಫಜಲಪುರ ತಾಲ್ಲೂಕಿನ ಗಾಣಗಾಪುರದಲ್ಲಿ ದತ್ತಾತ್ರೇಯದ ದೇವಸ್ಥಾನವಿದೆ.

ಚಿತ್ತಾಪುರ ತಾಲೂಕಿನ ಸನ್ನತ್ತಿಯಲ್ಲಿ ರಾಜಾ ಅಶೋಕನ ಕಾಲದ ಶಾಸನಗಳು ಬೆಳಕಿಗೆ ಬಂದಿವೆ. ಮರತುರದಲ್ಲಿ ವಿಜ್ಞಾನೇಶ್ವರರು 'ಮಿತಾಕ್ಷರ' ವೆಂಬ ಕೃತಿಯನ್ನು ರಚಿಸಿದರು. ಇದು ಹಿಂದು ಕಾನೂನು ಗ್ರಂಥವಾಗಿದೆ.

ಸೇಡಂ ತಾಲೂಕಿನ ಮಳಖೇಡ ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಪ್ರತೀತಿ ಪ್ರಕಾರ ಗಂಗಾವತಿ ತಾಲೂಕಿನ ಅಂಜನಾದ್ರಿ (ಕಿಷ್ಕಿಂಧೆ) ಯಲ್ಲಿ ಹನುಮಂತನು ಹುಟ್ಟಿದನು. ರಾಮಾಯಣದ ಸುಂದರಕಾಂಡ ನಡೆದಿದ್ದು ಇಲ್ಲಿಯೇ. 'ಕಣ್ಣಿದ್ದವನು ಕನಕಗಿರಿ ನೋಡಬೇಕು' ಎಂಬ ಗಾದೆ ಇದೆ. ಇಲ್ಲಿ ವಾಸ್ತುಶಿಲ್ಪ ಕೇಂದ್ರ ಇದೆ. ಶ್ರೀ ಕೃಷ್ಣದೇವರಾಯನ ಕಾಲದ ಲಕ್ಷ್ಮೀನರಸಿಂಹ ದೇವಾಲಯವಿದೆ.

ವಿಜಯನಗರ ಸಾಮ್ರಾಜ್ಯದ ಭವ್ಯ ರಾಜಧಾನಿ ಹಂಪಿ ಬಳ್ಳಾರಿ ಜಿಲ್ಲೆಯಲ್ಲಿದೆ. ವಿಜಯಪುರದ ಗೊಲಗುಂಬಜ ಜಗಪ್ರಸಿದ್ಧವಿದೆ. ಸೌದತ್ತಿಯ ಯಲ್ಲಮ್ಮನ ಗುಡ್ಡ ಯಾತ್ರಾಸ್ಥಾನವಾಗಿದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು ನೋಡುವ ಐತಿಹಾಸಿಕ ತಾಣಗಳಾಗಿವೆ. ಸುಮಾರು 62 ಮೀ. ಎತ್ತರದಿಂದ ಧುಮುಕುವ ಘಟಪ್ರಭಾ ನದಿಯ ಗೋಕಾಕ್ ಜಲಪಾತ ಇಲ್ಲಿ



ಪ್ರಸಿದ್ಧವಾಗಿದೆ. ಇದಲ್ಲದೇ ಛಾಯಾ ಭಗವತಿ ಹಾಗೂ ಸೊಗಲ ಜಲಪಾತಗಳು ಉತ್ತರದ ಮೈದಾನದಲ್ಲಿವೆ. ಕೂಡಲ ಸಂಗಮ ಯಾತ್ರಾಸ್ಥಾನವಾಗಿದೆ. ಹೀಗೆ ಹಲವಾರು ಪ್ರವಾಸಿ ತಾಣಗಳು ಈ ಭಾಗದಲ್ಲಿವೆ.

**ಸಮಾರೋಪ**

ಈ ವಿಶೇಷಗಳನ್ನು ಹೊಂದಿರುವ ಈ ಕಲ್ಯಾಣ ಕರ್ನಾಟಕ ನಾಡು ಇಂದು ಬಡತನ, ಅನಭಿವೃದ್ಧಿಯಿಂದ ಬಳಲುತ್ತಿದೆ. ಬರದಿಂದ ರೈತರು ಸಂತ್ರಸ್ತರಾಗಿದ್ದಾರೆ.

ಇವೆಲ್ಲ ಮಧ್ಯದಲ್ಲಿಯೂ ಜನರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಬಡತನದಲ್ಲಿಯೂ ತಮ್ಮ ಆದರಾತಿಥ್ಯ ಹಾಗೂ ನಿಸ್ವಾರ್ಥತೆಯನ್ನು ಕಾಪಾಡಿ ಕೊಂಡಿದ್ದಾರೆ. ಈ ಭಾಗದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳು ಇಂದು ಜಾರಿಯಲ್ಲಿವೆ. ಮುಂಬರುವ ದಿನಗಳಲ್ಲಿ ಇತಿಹಾಸದ, ಸಮೃದ್ಧತೆಯ ಪುನರಾವರ್ತನೆ ಆಗಬಹುದೆಂದು ಆಸೆಯನ್ನು ಹೊತ್ತಿಕೊಂಡು ಜನರು ಸರಳ ಜೀವನದ ಹಾದಿಯ ಮೇಲೆ ಮುಂದೆ ಹೆಜ್ಜೆ ಹಾಕುತ್ತಿದ್ದಾರೆ. ❑

(36ನೇ ಪುಟದಿಂದ)

## ಬುಡಕಟ್ಟು ಜನರ ಬವಣೆಗೆ ಸ್ಪಂದನೆ

ಹಾಗೆಯೇ ಸಮಾಜದ ಇತರೆ ಸ್ಥರಗಳಲ್ಲಿ ಕೆಲಸ ನಿರ್ವಹಿಸಲು ಪೂರಕವಾಗಿದೆ. ಜೊತೆಗೆ ತಮ್ಮ ಹಾಡಿಗಳ ಸರ್ವಾಂಗೀಣ ಸಕಾರಾತ್ಮಕ ಬದಲಾವಣೆಗೆ ಬುಡಕಟ್ಟು ಯುವಕ ಯುವತಿಯರು ಕಾರ್ಯಪ್ರವೃತ್ತರಾಗಿರುವುದು ಬದಲಾವಣೆಯ ದ್ಯೋತಕವಾಗಿದೆ. ಇದೆಲ್ಲರ ಬದಲಾವಣೆಯ ದ್ಯೋತಕ ತಾಲ್ಲೂಕು ಗಿರಿಜನ ಮಹಿಳಾ ಒಕ್ಕೂಟ. ತಾಲ್ಲೂಕಿನ ಬುಡಕಟ್ಟು ಜನ ಮಹಿಳೆಯರನ್ನು ಒಂದೆಡೆ ಸೇರಿಸಲು ಸಕ್ರಿಯವಾಗಿ, ಬದಲಾವಣೆಗಾಗಿ ಕಾರ್ಯ ಪ್ರವೃತ್ತರಾಗಲು ಸಜ್ಜುಗೊಳಿಸಿದೆ. ಈ ಒಕ್ಕೂಟದ ಜಾಗೃತ ಮಹಿಳಾ ಸಬಲೀಕರಣದ ಸೂಚಕವೇ ಜಿ.ಎಂ ಹಳ್ಳಿ ಹಾಡಿಯ ಜಾಗೃತ ಬುಡಕಟ್ಟು ಮಹಿಳೆ ಸುನೀತಾ. ಸುನೀತಾ ಒಂದು ಉದಾಹರಣೆ ಮಾತ್ರ; ಇಂತಹ ಜಾಗೃತ ಯುವಕ/ ಯುವತಿಯರು, ಮಹಿಳೆಯರು, ಪೋಷಕರು, ಪ್ರತಿ ಹಾಡಿಯಲ್ಲಿಯೂ ಸಿದ್ಧಗೊಂಡಿರುವುದು, ಬದಲಾವಣೆಯ ಪ್ರತೀಕ. ಬದಲಾವಣೆ ಜಗದ ನಿಯಮ. ಬದಲಾವಣೆಗೆ ಹಾತೊರೆಯುವ ಮುಗ್ಧ ಜೀವಗಳಿಗೆ, ನಿರಾಶ್ರಿತರಿಗೆ, ಅಸಹಾಯಕರಿಗೆ, ಮಾನವಿಯ ನೆಲೆಗಟ್ಟಿನಲ್ಲಿ ಆರೋಗ್ಯ ಸೇವೆಯನ್ನುನೀಡಿದಲ್ಲಿ ಇಂತಹ ಸಾವಿರಾರು ಜಾಗೃತ, ಮಾದರಿ ಸುನೀತಾರನ್ನು ನಿರ್ಮಾಣ ಮಾಡಲು ಸಾಧ್ಯ. ಸಂಸ್ಥೆ, ಸಮುದಾಯ ಹಾಗೂ ಸರ್ಕಾರದ ಸಹಭಾಗಿತ್ವ ಮತ್ತು ಸಮನ್ವಯತೆಯ ಸಲುವಾಗಿ ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯವಾಗಿದೆ. ತನ್ಮೂಲಕ ಒಂದು ಆರೋಗ್ಯಯುತ ಸಮುದಾಯವನ್ನೆ ನಿರ್ಮಾಣ ಮಾಡಲು ಸಾಧ್ಯ ಎಂಬುದು ಸಂಸ್ಥೆಯ ಅಚಲವಾದ ನಂಬಿಕೆ. ❑

# ನಿಮಗಿದು ತಿಳಿದಿದೆಯೇ?

**ಈಶಾನ್ಯದ ತಾಣಗಳು – 2016 ಉತ್ಸವ**



ಈಶಾನ್ಯ ರಾಜ್ಯಗಳ ಸಾಂಸ್ಕೃತಿಕ ಹಾಗೂ ಆರ್ಥಿಕ ಚಟುವಟಿಕೆ ಬಿಂಬಿಸುವ ಈಶಾನ್ಯದ ತಾಣಗಳು – 2016 ಉತ್ಸವ ನವದೆಹಲಿಯಲ್ಲಿ ಇತ್ತೀಚೆಗೆ ನಡೆಯಿತು. ಈಶಾನ್ಯ ವಲಯ ಅಭಿವೃದ್ಧಿ ಸಚಿವಾಲಯ ಮತ್ತು ಸಂಸ್ಕೃತಿ ಸಚಿವಾಲಯ ಫೆಬ್ರವರಿ 12ರಿಂದ 14ರ ವರೆಗೆ ಏರ್ಪಡಿಸಿದ್ದ ಈ ಉತ್ಸವವನ್ನು ಈಶಾನ್ಯ ವಲಯಾಭಿವೃದ್ಧಿ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಪ್ರಸಾದ್ ಮತ್ತು ಗೃಹಖಾತೆ ರಾಜ್ಯ ಸಚಿವ ಶ್ರೀ ಕಿರೆನ್ ರಿಜೀಜು ಉದ್ಘಾಟಿಸಿದರು. ಈಶಾನ್ಯ ವಲಯದ ಪಾರಂಪರಿಕ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಮರ್ಥ್ಯವನ್ನು ರಾಷ್ಟ್ರಮಟ್ಟದಲ್ಲಿ ಬಿಂಬಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಯುವ ಉದ್ದಿಮೆಗಳಿಗೆ ಮತ್ತು ಸ್ಟಾರ್ಟ್‌ಆಪ್ ಯೋಜನೆಗಳಿಗೆ ಅನುಕೂಲವಾಗುವಂತೆ ಈ ಉತ್ಸವವನ್ನು ಮುಂಬೈ ಹಾಗೂ ಬೆಂಗಳೂರುಗಳಲ್ಲಿಯೂ ಕೂಡ ಆಯೋಜಿಸಲು ಉದ್ದೇಶಿಸಲಾಗಿದೆ. ನವದೆಹಲಿಯಲ್ಲಿ ನಡೆದ ಉತ್ಸವದ ಸಂದರ್ಭದಲ್ಲಿ, ಈಶಾನ್ಯ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಇರುವ ಅವಕಾಶ, ಈಶಾನ್ಯ ಭಾಗದಲ್ಲಿ ಕಿರುಧನಹೂಡಿಕೆ, ಕುಶಲ ಅಭಿವೃದ್ಧಿ ಆಧರಿತ ಕೈಮಗ್ಗ ಮತ್ತು ಕುಸುರು ಕೆಲಸದ ಸಿದ್ಧ ಉಡುಪು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರಾಂಡ್ ನಿರೂಪಣೆ – ಮುಂತಾದ ವಿಷಯಗಳ ಬಗ್ಗೆ ವಿಚಾರ ಸಂಕಿರಣ, ಚರ್ಚೆ ವ್ಯವಸ್ಥೆ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಈಶಾನ್ಯ ಭಾಗದ ಜಾನಪದ ವಾದ್ಯ ಸಂಗೀತ, ನೃತ್ಯ, ಬಿಹು ನೃತ್ಯ, ಸಮೂಹನೃತ್ಯ, ರಾಕ್ ಸಂಗೀತ, ವಿವಿಧ ಸಂಗೀತ ಪದ್ಧತಿಗಳ ಸಂಯುಕ್ತ ಸಂಯೋಜನೆ, ಫ್ಯಾಷನ್ ಶೋ, ಶಾಲಾಮಕ್ಕಳಿಗಾಗಿ ಕ್ವಿಜ್ ಕಾರ್ಯಕ್ರಮ ಸಂಗೀತ (ಹಿಂದೂಸ್ತಾನಿ, ಇಂಡಿಯನ್ ಪಾಪ್, ವೆಸ್ಟರ್ನ್ ಪಾಪ್, ಶಾಸ್ತ್ರೀಯ ಸಂಗೀತ) ನಾಟಕ ಸ್ಪರ್ಧೆ ವ್ಯವಸ್ಥೆ ಮಾಡಲಾಗಿತ್ತು. ವ್ಯಾಪಾರ ಉದ್ಯಮ, ಕೃಷಿ, ಆಹಾರ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ, ವ್ಯಾಪಾರೋದ್ಯಮ, ಕೈಮಗ್ಗ ಮತ್ತು ಕರಕುಶಲ ವಸ್ತುಗಳು, ಸ್ಟಾರ್ಟ್‌ಆಪ್ ಮೊದಲಾದ ವಿಷಯ ಕುರಿತಂತೆ ವ್ಯಾಪಾರಿ ಶೃಂಗ ಸಭೆಗಳು ನಡೆದವು. ಇದಲ್ಲದೆ ಈಶಾನ್ಯ ವಲಯದ ಶ್ರೀಮಂತ ಕಲಾ ಪರಂಪರೆಗಳಾದ ಸ್ಥಳೀಯ ಬಟ್ಟೆ, ಪಾರಂಪರಿಕ ಉಡುಪು, ಪೀಠೋಪಕರಣ, ಚಿತ್ರ ಕಲೆ, ಬಂಬೂ ಪೇಂಟಿಂಗ್ಸ್‌ಗಳ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಈಶಾನ್ಯ ವಲಯದ ಖಾದ್ಯ ಆಹಾರ ಉತ್ಸವ ವಿಶೇಷವಾಗಿತ್ತು.








**(ಸಂಕಲನ : ವಾಟಿಕಾ ಚಂದ್ರ)**

❑

(46ನೇ ಪುಟದಿಂದ)

## ಹಿಂದುಳಿದ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಣದ ಸಮಸ್ಯೆ

ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶಗಳ ಅಗತ್ಯಗಳಿಗೆ ಅನುಗುಣವಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಮೂಲಕ ಶಾಲೆಯಿಂದ ಹೊರಗುಳಿಯವ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸುವ ಮೂಲಕ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಪ್ರಮಾಣ ಹೆಚ್ಚಿಸಬಹುದಾಗಿದೆ. ಇದು ಅತ್ಯಂತ ಕಠಿಣ ಸವಾಲಿನ ಕೆಲಸವೂ ಹೌದು. ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ರೂಪಿಸಲಾದ 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಗಂಡು ಹೆಣ್ಣಿನ ಸಮಾನತೆಯನ್ನು ಎತ್ತಿ ಹಿಡಿದಿದೆ. ಅದನ್ನು ಅನುಷ್ಠಾನದಲ್ಲಿ ತರಲು ಶಿಕ್ಷಣವನ್ನು ಸಾಧನವನ್ನಾಗಿ ಬೆಳೆಸಬೇಕೆಂದು ಅದು ಸ್ಪಷ್ಟ ನಿಲುವು ಹೊಂದಿದೆ. ಶಿಕ್ಷಣವು ಸರ್ವತೋಮುಖದ ಏಳಿಗೆಗೆ ಅಡಿಪಾಯ. ಸಮಾಜದ ಸಮಗ್ರ ಅಭಿವೃದ್ಧಿಗೆ ಹೆಣ್ಣು–ಗಂಡುಗಳ ಸಮತೋಲಿತ ಪಾತ್ರ ಬಹು ಮುಖ್ಯ. ಆದರೆ ಮಕ್ಕಳಿಗೆ ಶಿಕ್ಷಣವನ್ನು ಕಲಿಸುವಾಗ ನಾವು ಆಡುವ ಭಾಷೆಯಲ್ಲಿ ಅಥವಾ ಬರೆಯುವ ಭಾಷೆಯಲ್ಲಿ ನುಸುಳಿ ಬರುವ ಲಿಂಗ ತಾರತಮ್ಯತೆಯ ಪದಗಳನ್ನು ಉದ್ದೇಶ ಪೂರ್ವಕವಾಗಿ ಬಿಡಬೇಕಾಗುತ್ತದೆ. ಇಲ್ಲದಿದ್ದರೆ ಎಳೆ ಮಕ್ಕಳ ಮನಸ್ಸಿನಲ್ಲಿ ತಪ್ಪು ಕಲ್ಪನೆಗಳು ಮತ್ತು ಪೂರ್ವಾಗ್ರಹಪೀಡಿತ ಭಾವನೆಗಳು ಮೂಡುತ್ತವೆ. ಈ ಪ್ರಪಂಚವು ಕೇವಲ ಪುರುಷರಿಂದ ನಿರ್ಮಿತವಾಗಿದೆ ಮತ್ತು ಪುರುಷರಿಂದ ನಿಯಂತ್ರಿಸಲ್ಪಡುತ್ತವೆ ಎಂಬ ಅವಾಸ್ತವ ಮತ್ತು ಭ್ರಾಮಕ ಕಲ್ಪನೆಗೆ ಎಡೆ ಮಾಡಿಕೊಡುತ್ತವೆ. ಹೀಗಾಗಿ ಮಹಿಳಾ ಶಿಕ್ಷಣಕ್ಕೆ ಅದರಲ್ಲಿಯೂ ಹಿಂದುಳಿದ ಮತ್ತು ಗ್ರಾಮಾಂತರ ಪ್ರದೇಶಗಳ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಆದ್ಯತೆ ನೀಡಬೇಕಾದ ಅನಿವಾರ್ಯತೆಯನ್ನು ನೀತಿ–ನಿರೂಪಕರು, ಶಿಕ್ಷಣ ತಜ್ಞರು ಮನಗಾಣಬೇಕಿದೆ. ಮತ್ತು ಇದು ಕಾರ್ಯಗತವಾಗಬೇಕಾದರೆ ರಾಜಕೀಯ ಬದ್ಧತೆಯನ್ನೂ ತೋರಿಸಬೇಕಿದೆ.

❑

# ವಾರ್ತಾ ವಿಶೇಷ

ಉಗ್ರರ ಕೈಗಳಿಗೆ ಅಣ್ವಸ್ತ್ರಗಳು ಸಿಗದಂತೆ ನೋಡಿಕೊಳ್ಳುವ ಸಂಕಲ್ಪವನ್ನು ಪರಮಾಣು ಭದ್ರತೆ ಶೃಂಗದಲ್ಲಿ ಭಾಗವಹಿಸಿದ ಜಾಗತಿಕ ನಾಯಕರು ಪುನರುಚ್ಚರಿಸಿದ್ದಾರೆ.

ವಾಷಿಂಗ್ಟನ್‌ನಲ್ಲಿ ಇತ್ತೀಚೆಗೆ ನಡೆದ ಶೃಂಗಸಭೆ ನಂತರ ನೀಡಿದ ಜಂಟಿ ಹೇಳಿಕೆಯಲ್ಲಿ ಪರಮಾಣು ಬೆದರಿಕೆ ನಿರಂತರ ಬೆಳೆಯುತ್ತಿದೆ ಎಂದು 50ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಪರಮಾಣು ಹಾಗೂ ಇತರೆ ರೇಡಿಯೊ ಆ್ಯಕ್ಟಿವ್ ಸಾಮಗ್ರಿಗಳನ್ನು ಸರ್ಕಾರೇತರ ಶಕ್ತಿಗಳು ದುರುದ್ದೇಶಗಳಿಗಾಗಿ ಬಳಸಿಕೊಳ್ಳಬಹುದಾದ ಸಂದರ್ಭಗಳನ್ನು ತಡೆಯಲು ಮಾಡುವ ಕೆಲಸ ಇನ್ನೂ ಬಹಳವಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಅಣ್ವಸ್ತ್ರ ದಾಳಿಯನ್ನು ಸಾಧ್ಯಗೊಳಿಸುವ ಭಯೋತ್ಪಾದಕರ ಬೆದರಿಕೆಯನ್ನು ಅಮೆರಿಕ ಅಧ್ಯಕ್ಷ ಶ್ರೀ ಬರಾಕ್ ಒಬಾಮಾ ಉಲ್ಲೇಖಿಸಿದರು.

ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕ ಗುಂಪು ಅಣ್ವಸ್ತ್ರವನ್ನು ಪಡೆದುಕೊಳ್ಳುವ ಅಪಾಯ ಜಾಗತಿಕ ಭದ್ರತೆಗೆ ಅತಿದೊಡ್ಡ ಬೆದರಿಕೆ ಎಂದು ಅವರು ಹೇಳಿದರು.

ಉತ್ತರ ಕೊರಿಯಾದ ಅಣ್ವಸ್ತ್ರ ಕಾರ್ಯಕ್ರಮ ಕುರಿತು ವಿಶ್ವ ನಾಯಕರು ಆತಂಕ ವ್ಯಕ್ತಪಡಿಸಿದರು ಹಾಗೂ ಶೃಂಗ ಸಭೆಯಲ್ಲಿ ರಷ್ಯಾದ ಗೈರು ಹಾಜರಿಗೂ ಕಳವಳ ವ್ಯಕ್ತಪಡಿಸಿದರು.

ಅಂತಾರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ ಹಾಗೂ ಇಂಟರ್ ಪೋಲ್ ಪೊಲೀಸ್ ಏಜೆನ್ಸಿಗಳಂತಹ ಜಾಗತಿಕ ಸಂಸ್ಥೆಗಳೊಡನೆ ಸದಸ್ಯ ದೇಶಗಳ ಸಮನ್ವಯ ಸುಧಾರಣೆ ಕುರಿತ ಐದು ಕ್ರಿಯಾ ಯೋಜನೆಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

* * *

ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಗಳಿಗೆ ನೆರವಾಗುವ ಲೇಸರ್ ಇಂಟರ್‌ಫೆರೊಮೀಟರ್ ಗುರುತ್ವ–ತರಂಗ ಪರಿವೀಕ್ಷಣಾ (ಲಿಗೊ) ಕೇಂದ್ರ ಸ್ಥಾಪನೆಗಾಗಿ ಅಮೆರಿಕದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ವಾಷಿಂಗ್ಟನ್‌ನಲ್ಲಿ ಪರಮಾಣು ಸುರಕ್ಷತಾ ಶೃಂಗಸಭೆ ಸಂದರ್ಭದಲ್ಲಿ ಪರಮಾಣು ಇಂಧನ ನಿರ್ದೇಶನಾಲಯದ ಕಾರ್ಯದರ್ಶಿ ಮತ್ತು ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ ನಿರ್ದೇಶಕರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಈ ಕುರಿತ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದರು.

* * *

❑

## ಪ್ರಕಟಣಾ ವಿಭಾಗದ ವಿವಿಧ ನಿಯತಕಾಲಿಕೆಗಳ ಪರಿಷ್ಕೃತ ಚಂದಾದರಗಳು

## New Rates for Subscription of Journals

| S.No | Name of the Journal | Subscription Price Per Copy Rs | Subscription Price for 1 Year Rs | Subscription Price for 2 Years Rs | Subscription Price for 3 Years Rs | Subscription Price for Special Issue Rs |
|---|---|---|---|---|---|---|
| 1 | Yojana * | 22 | 230 | 430 | 610 | 30 |
| 2 | Kurukshetra * | 22 | 230 | 430 | 610 | 30 |
| 3 | Ajkal * | 22 | 230 | 430 | 610 | 30 |
| 4 | Bal Bharti * | 15 | 160 | 300 | 420 | 20 |
| 5 | Employment News # | 12 | 530 | 1000 | 1400 | NA |

*** The prices of Journals are revised from April 2016 issue onwards**

**# The Price of Employment News is revised from 6th February 2016 issue onwards.**